ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 14 ಭಾನುವಾರ 2026

47

ಸಂಪುಟ: 47 | ಸಂಚಿಕೆ: 59 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಭ್ರಷ್ಟಾಚಾರ ಮುಕ್ತ ಕರ್ನಾಟಕ

- ತಾಲೂಕು, ಜಿಲ್ಲಾಧಿಕಾರಿ ಕಚೇರಿಗಳಲ್ಲಿ ಯಾರೂ ಕೂಡಾ ಇನ್ನು ಮುಂದೆ 10 ರೂಪಾಯಿ ಕೂಡ ಲಂಚ ನೀಡಬೇಡಿ : ಜನತೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ
- ಲಂಚ ಹಾವಳಿ ಹತ್ತಿಕ್ಕಲು ಸರ್ಕಾರಿ ಕಚೇರಿಗಳಲ್ಲಿ ದೂರವಾಣಿ ಸಂಖ್ಯೆ ಫಲಕ ಅಳವಡಿಕೆ
- 'ಟೀಂ ಕರ್ನಾಟಕ'ದಂತೆ ಕೆಲಸ ಮಾಡೋಣ: ಸಚಿವರು, ಅಧಿಕಾರಿಗಳಿಗೆ ಸಿಎಂ ಕರೆ
- ಎಲ್ಲಾ ಅಧಿಕಾರಿಗಳು 10 ಗಂಟೆಗೆ ಕಚೇರಿಯಲ್ಲಿರಬೇಕು: ಖಡಕ್ ಸೂಚನೆ

ಬೆಂಗಳೂರು, ಜೂ.13– ಭ್ರಷ್ಟಾಚಾರ ಮುಕ್ತ ಕರ್ನಾಟಕ ಮಾಡೋಣ. ರಾಜ್ಯದ ಅಭಿವೃದ್ಧಿ ಹಾಗೂ ಜನರ ಹಿತದೃಷ್ಟಿಯಿಂದ 'ಟೀಂ ಕರ್ನಾಟಕ'ದಂತೆ ಕೆಲಸ ನಿರ್ವಹಿಸೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರು ಸಂಪುಟದ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳಿಗೆ ಕರೆ ನೀಡಿದ್ದಾರೆ.

ವಿಧಾನಸೌಧದಲ್ಲಿ ಜಿಲ್ಲಾಧಿಕಾರಿಗಳು, ಎಸ್ಪಿ, ಸಿಇಒ, ಡಿಎಫ್‌ಒ ಹಾಗೂ ಸರ್ಕಾರಿ ಹಿರಿಯ ಅಧಿಕಾರಿಗಳೊಂದಿಗೆ 7 ಗಂಟೆಗಳ ಸುದೀರ್ಘ ಸಭೆ ನಡೆಸಿದ ಬಳಿಕ ಶಿವಕುಮಾರ್ ಅವರು ಮಾಧ್ಯಮಗೋಷ್ಠಿ ನಡೆಸಿ ಮಾಹಿತಿ ನೀಡಿದರು. ನಾವೆಲ್ಲರೂ ಒಂದೇ ತಂಡ, ಟೀಂ ಕರ್ನಾಟಕವಾಗಿ ಕೆಲಸ ಮಾಡೋಣ ಎಂದು ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಸಮಸ್ಯೆ ಕಾರಣಕ್ಕೆ ಜನ ನಮ್ಮ ಬಳಿಗೆ ಬರುತ್ತಾರೆ. ಸಮಸ್ಯೆ ಇಲ್ಲವಾದರೆ ಯಾರೂ ಡಿಸಿ, ತಾಲೂಕು ಕಚೇರಿಗೆ ಬರುವುದಿಲ್ಲ. ಸಮಸ್ಯೆಯೊಂದಿಗೆ ಬಂದ ಜನರಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಸಮಸ್ಯೆ ಬಗೆಹರಿಸಬೇಕು ಎಂದು ಸೂಚಿಸಲಾಗಿದೆ. ಎಲ್ಲರೂ 10 ಗಂಟೆಗೆ ಕಚೇರಿಗೆ ಹಾಜರಾಗಬೇಕು. ಜಿಲ್ಲಾ ಕಚೇರಿಗಳಲ್ಲಿ ಅಧಿಕಾರಿಗಳು ಹಾಜರಾದ ಕೂಡಲೆ ಅವರ ಹೆಬ್ಬೆರಳು ಗುರುತು ಮುಖ್ಯ ಕಾರ್ಯದರ್ಶಿಗಳಿಗೆ ಸಂದೇಶ ರವಾನೆಯಾಗಬೇಕು ಎಂದು ಮಾರ್ಗದರ್ಶನ ನೀಡಲಾಗಿದೆ. ಗ್ರಾಮಲೆಕ್ಕಿಗ, ಕಂದಾಯ ಅಧಿಕಾರಿ, ಪಿಡಿಒಗಳಿಂದ ಯಾವುದೇ ಇಲಾಖೆ ಅಧಿಕಾರಿಗಳು, ಜಿಲ್ಲಾಧಿಕಾರಿಗಳವರೆಗೂ ಎಲ್ಲರೂ ತಮ್ಮ ಕೇಂದ್ರ ಕಚೇರಿಯಲ್ಲಿ ಕಡ್ಡಾಯವಾಗಿ ಇರಬೇಕು. ಅವರ ವಿಳಾಸ, ದೂರವಾಣಿ ಸಂಖ್ಯೆ ವೆಬ್‌ಸೈಟ್‌ಗಳಲ್ಲಿ ಲಭ್ಯ ವಾಗಿರಬೇಕು ಎಂದು ಸೂಚಿಸಿರುವುದಾಗಿ ತಿಳಿಸಿದರು. ▶ 6ನೇ ಪುಟಕ್ಕೆ



ಬೆಂಗಳೂರಲ್ಲಿ ಶನಿವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಲ್ಲಾ ಸಚಿವರು, ಅಧಿಕಾರಿಗಳ ಜೊತೆ ಮಹತ್ವದ ಸಭೆ ನಡೆಸಿದರು.

ಗೃಹಲಕ್ಷ್ಮಿಗೆ ಮರು ಅರ್ಜಿ

ಈಗಾಗಲೇ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವ ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಪ್ರಕ್ರಿಯೆ ಆರಂಭವಾಗಿದೆ. ಇದರ ಜೊತೆಗೆ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ ಕೆಲವರು ನಿಧನರಾಗಿದ್ದು, ಅವರ ಹೆಸರಲ್ಲಿ ಬೇರೆಯವರು 100 ಕೋಟಿಗೂ ಹೆಚ್ಚು ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಅರ್ಹ ಫಲಾನುಭವಿ ಗಳಿಗೆ ಯೋಜನೆ ತಲುಪುತ್ತಿದೆಯೇ ಇಲ್ಲವೇ ಎಂದು ಪರಿಷ್ಕರಣೆ ಮಾಡಲು ಸರ್ಕಾರ ಮುಂದಾಗಿದೆ. ಹೀಗಾಗಿ ಎಲ್ಲಾ ಫಲಾನುಭವಿ ಗಳು ಪುನಃ ಅರ್ಜಿ ಸಲ್ಲಿಸಬೇಕಾಗಿದೆ. ನಾವು ಈ ಯೋಜನೆ ಯನ್ನು ನಿಲ್ಲಿಸುವುದಿಲ್ಲ. ಯಾರನ್ನೂ ತೆಗೆದುಹಾಕುವ ಉದ್ದೇಶ ಸರ್ಕಾರಕ್ಕಿಲ್ಲ. ಸರಿಯಾದ ಮಾಹಿತಿ ನೀಡುವ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಬೇಕು ಎಂಬುದು ಸರ್ಕಾರದ ಉದ್ದೇಶ. 1.64 ಲಕ್ಷ ಫಲಾನುಭವಿಗಳಿದ್ದು, ಅವರು ಮತ್ತೆ ಅರ್ಜಿ ಹಾಕಬೇಕಿದೆ. ಫಲಾನುಭವಿಗಳಿಗೆ ನಾವು ಗುರುತಿನ ಚೀಟಿ ನೀಡಬೇಕಾಗಿದೆ. ಕೆಲವೇ ದಿನಗಳಲ್ಲಿ ಅರ್ಜಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ರಾಜ್ಯದ ಶೈಕ್ಷಣಿಕ ರಂಗದಲ್ಲಿ ಹೊಸ ಕ್ರಾಂತಿಗೆ ಸರ್ಕಾರ ನಿರ್ಧಾರ

ಸರ್ಕಾರಿ ಕಾಲೇಜುಗಳಲ್ಲಿ 50 ಎಐ ಲ್ಯಾಬ್ ಸ್ಥಾಪನೆ

ಬೆಂಗಳೂರು, ಜೂ.13– ರಾಜ್ಯದ ಪ್ರಮುಖ ನಗರಗಳ ಹೊರತಾಗಿ, ಗ್ರಾಮೀಣ ಹಾಗೂ ಹಂತ–2 ಮತ್ತು ಹಂತ–3 ನಗರಗಳ ಯುವಜನರಿಗೆ ಉದಯೋನ್ಮುಖ ತಂತ್ರಜ್ಞಾನಗಳ ಪರಿಚಯ ಮಾಡಿಸಲು ಮತ್ತು ಅವರ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ರಾಜ್ಯದ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಒಟ್ಟು 50 ಕೃತಕ ಬುದ್ಧಿಮತ್ತೆ ಪ್ರಯೋಗಾಲಯಗಳನ್ನು ಸ್ಥಾಪಿಸಲು ಸರ್ಕಾರ ಅಧಿಕೃತ ಅನುಮೋದನೆ ನೀಡಿದೆ.

ಕೇಂದ್ರದ 'ಎಐ ಮಿಷನ್' ಜೊತೆ ಕೈಜೋಡಿಸಿದ ರಾಜ್ಯ: 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಕೇಂದ್ರ ಸರ್ಕಾರದ 'ಎಐ ಮಿಷನ್' ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸ್ಥಾಪನೆಯಾಗುವ ಪ್ರತಿ ಪ್ರಯೋಗಾಲಯಕ್ಕೆ ಒಟ್ಟು 68.98 ಲಕ್ಷ ರೂ. ಆರ್ಥಿಕ ನೆರವು ಸಿಗಲಿದ್ದು, 3 ವರ್ಷಗಳ ಅವಧಿಯಲ್ಲಿ ಮೂರು ಕಂತುಗಳಲ್ಲಿ ಈ ಹಣ ಬಿಡುಗಡೆಯಾಗಲಿದೆ. ಇದರ ಜೊತೆಗೆ, ಕರ್ನಾಟಕ ಸರ್ಕಾರವು ಈ ಯೋಜನೆಗಾಗಿ 10 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ 6.29 ಕೋಟಿ ರೂ.ಗಳನ್ನು ಮೊದಲ ವರ್ಷದಲ್ಲೇ ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ.

ಮೊದಲ ಹಂತದಲ್ಲಿ 23 ಕಾಲೇಜುಗಳ ಆಯ್ಕೆ: ಈ ಯೋಜನೆಯ ಮೊದಲ ಹಂತವಾಗಿ ರಾಜ್ಯದ 23 ಪ್ರಮುಖ ಶೈಕ್ಷಣಿಕ ಸಂಸ್ಥೆಗಳನ್ನು ಆಯ್ಕೆ ಮಾಡಲು ▶ 6ನೇ ಪುಟಕ್ಕೆ




ಸಾಂದರ್ಭಿಕ ಚಿತ್ರ

ಆಯ್ದ ಸರ್ಕಾರಿ ಕಾಲೇಜುಗಳಲ್ಲಿ ಈ ಅತ್ಯಾಧುನಿಕ ಎಐ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು. ಇದು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆ, ಹೊಸ ಪ್ರಯೋಗಗಳು, ಕೌಶಲ್ಯಾಭಿವೃದ್ಧಿ ಮತ್ತು ನಾವೀನ್ಯತೆಗೆ ಭದ್ರವಾದ ಮೂಲಸೌಕರ್ಯವನ್ನು ಒದಗಿಸಲಿದೆ.

ಬೆಂಗಳೂರು ಅಭಿವೃದ್ಧಿ ಖಾತೆ ಬಗ್ಗೆ ಸಚಿವ ಕೃಷ್ಣ ಬೈರೇಗೌಡ ಬಹಿರಂಗವಾಗೇ ಅಸಮಾಧಾನ

ಬೆಂಗಳೂರು, ಜೂ. 13(ಕೆಎಂಶಿ)– ಸ್ಪಷ್ಟತೆ ಇಲ್ಲದೆ ಅಧಿಕಾರ ವಹಿಸಿಕೊಂಡು ಕಾರ್ಯನಿರ್ವಹಣೆ ಮಾಡಲು ಸಾಧ್ಯವಿಲ್ಲ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಇಲಾಖೆ ಬಗ್ಗೆ ಸ್ಪಷ್ಟತೆ ಇದ್ದರೆ ನಿರೀಕ್ಷೆ ಯಷ್ಟು ಕೆಲಸ ಮಾಡಬಹುದು, ಫಲಿತಾಂಶ ಉತ್ತಮವಾಗಿರುತ್ತದೆ ಎಂಬುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ನಾಯಕರ ಬಳಿ ಹೇಳಿದ್ದೇನೆ. ಮುಖ್ಯಮಂತ್ರಿ ಅವರು ನಿರ್ಧಾರ ಕೈಗೊಳ್ಳಬೇಕಷ್ಟೆ, ನನಗೇನೂ ಅಸಮಾಧಾನ ಇಲ್ಲ. ಆದರೆ, ಇಲಾಖೆ–ಇಲಾಖೆ ನಡುವೆ ಕೊಂಡಿ ಕಳಚಿದರೆ ಅಭಿವೃದ್ಧಿ ಮಾಡುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೃಷ್ಣಬೈರೇಗೌಡ, ಬಿಡಿಎ, ಬಿಎಂಆರ್‌ಡಿಎ ಸೇರಿದಂತೆ ಬೆಂಗಳೂರು ನಗರ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳನ್ನು ನನಗೆ ವಹಿಸಿ ಎಂಬುದಾಗಿ ಕೇಳಿದ್ದೇನೆ ಎಂದರು. ▶ 6ನೇ ಪುಟಕ್ಕೆ

ಶಾಂತಿ ಒಪ್ಪಂದಕ್ಕೆ ಸಹಿ ಹಾಕಲ್ಲ: ಇರಾನ್

ಟೆಹರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧವನ್ನು ಕೊನೆಗಾಣಿಸುವ ಅಮೆರಿಕದೊಂದಿಗಿನ ಬಹುನಿರೀಕ್ಷಿತ ಶಾಂತಿ ಒಪ್ಪಂದದ ಕರಡು ಪ್ರತಿಗೆ ಭಾನುವಾರ ಸಹಿ ಹಾಕುವುದಿಲ್ಲ ಎಂದು ಇರಾನ್ ಶನಿವಾರ ತಿಳಿಸಿದೆ.

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಸ್ಪಷ್ಟಪಡಿಸಿದ್ದಾರೆ ಎಂದು ಅಲ್ಲಿನ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ದಿನೇ ದಿನೆ ಹೆಚ್ಚಾಗುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಇರಾನ್ ವಕ್ತಾರರು ಮಾತನಾಡಿ, ಮುಂಬರುವ ದಿನಗಳಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆಯನ್ನು ಸಂಪೂರ್ಣವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ, ಅಮೆರಿಕದ ಕಡೆಯಿಂದ ವ್ಯಕ್ತವಾಗುತ್ತಿರುವ ಗೊಂದಲದಿಂದ ಸಹಿ ▶ 6ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜಾ ಮಹೋತ್ಸವ

ಪಾರ್ಕಿಂಗ್‌ಗೆ ಪರ್ಯಾಯ ಜಾಗಕ್ಕೆ ಶೋಧ!

ಮಹಾರಾಜ ಕಾಲೇಜು ಮೈದಾನ ಇಲ್ಲವೆ ಸ್ಕೌಟ್ಸ್ ಅಂಡ್ ಗೈಡ್ಸ್ ಆವರಣ ಆಯ್ಕೆ ಸಾಧ್ಯತೆ



ಆಷಾಢ ಮಾಸದ ಮೊದಲ ಶುಕ್ರವಾರ ಜು.17, 2ನೇ ಶುಕ್ರವಾರ ಜು.24, 3ನೇ ಶುಕ್ರವಾರ ಜು.31, ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವ ಆ.4 ಹಾಗೂ ಆ.7ರಂದು ಕೊನೆ ಶುಕ್ರವಾರದ ಪೂಜಾ ಮಹೋತ್ಸವ ಜರುಗಲಿದೆ.

ಮೈಸೂರು, ಜೂ.13(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ಆಷಾಢ ಮಾಸದ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ ವೇಳೆ ಬೆಟ್ಟಕ್ಕೆ ಖಾಸಗಿ ವಾಹನಗಳ ನಿಷೇಧ ವಿಧಿಸುವುದರಿಂದ ಭಕ್ತರ ವಾಹನಗಳ ನಿಲುಗಡೆಗೆ ಸ್ಥಳ ಗುರುತಿಸುವ ಕಾರ್ಯಕ್ಕೆ ಜಿಲ್ಲಾಡಳಿತ ಮುಂದಾಗಿದೆ.

ಆಷಾಢ ಮಾಸದ ಪೂಜಾ ಮಹೋತ್ಸವ ಹಾಗೂ ವರ್ಧಂತಿ ದಿನ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳಿಗೆ ನಿರ್ಬಂಧ ಹೇರಲಾಗುತ್ತದೆ. ಕಳೆದ ಕೆಲ ವರ್ಷಗಳಿಂದ ಲಲಿತಮಹಲ್ ಪ್ಯಾಲೆಸ್ ಮೈದಾನದಲ್ಲಿ ಭಕ್ತರ ವಾಹನಗಳನ್ನು ನಿಲ್ಲಿಸಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ವ್ಯವಸ್ಥೆ ಮಾಡಿರುವ ಉಚಿತ ಬಸ್‌ಗಳಲ್ಲಿ ಭಕ್ತರು ▶ 6ನೇ ಪುಟಕ್ಕೆ

ಇನ್ನೂ ಚರ್ಚೆಯಾಗಿಲ್ಲ

"ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಶೀಘ್ರದಲ್ಲಿಯೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಯಲಿದೆ. ಸಭೆಯಲ್ಲಿ ವಿಶೇಷ ಪೂಜಾ ರೂಪು–ರೇಷೆ, ಕೈಗೊಳ್ಳಬೇಕಾದ ಕ್ರಮ, ಉಚಿತ ಬಸ್ ವ್ಯವಸ್ಥೆ, ಖಾಸಗಿ ವಾಹನ ನಿಲುಗಡೆ ಸ್ಥಳ ಸೇರಿದಂತೆ ಎಲ್ಲವೂ ನಿರ್ಧಾರಿತವಾಗಲಿದೆ. ಪ್ರಸ್ತುತ ಇನ್ನು ಯಾವುದೇ ಚರ್ಚೆಯಾಗಿಲ್ಲ.

–ಡಾ.ಎಂ.ಜೆ.ರೂಪ, ಕಾರ್ಯದರ್ಶಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮೈಸೂರು ಅಶೋಕ ರಸ್ತೆಯ ವ್ಯಾಪಾರಿಗಳು, ಸಿಬ್ಬಂದಿಗೆ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ!

ಟೌನ್‌ಹಾಲ್ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಗೆ ಮಾಸಿಕ ಪಾಸ್ ನೀಡಲು ಚಿಂತನೆ

- ಪ್ರಸ್ತಾವನೆ ನಗರ ಪಾಲಿಕೆಗೆ ಸಲ್ಲಿಸಲು ಪೊಲೀಸ್ ಇಲಾಖೆ ಸಿದ್ಧತೆ
- ವ್ಯಾಪಾರಿಗಳು, ಸಿಬ್ಬಂದಿಗೆ ಮಾತ್ರ ಈ ವ್ಯವಸ್ಥೆ: ಎರಡು ಸುತ್ತಿನ ಮಾತುಕತೆ



ಮೈಸೂರಿನ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ 'ಜನ ಸಂಪರ್ಕ' ಸಭೆಯಲ್ಲಿ ಪೇ ಅಂಡ್ ಪಾರ್ಕಿಂಗ್ ಬಗ್ಗೆ ಚರ್ಚಿಸಲಾಯಿತು.

ಮೈಸೂರು, ಜೂ.13(ಜಿಎ)–ಮೈಸೂರಿನ ಅಶೋಕ ರಸ್ತೆಯಲ್ಲಿರುವ ಅಂಗಡಿಗಳ ಮಾಲೀಕರು ಮತ್ತು ಸಿಬ್ಬಂದಿಗೆ ಟೌನ್‌ಹಾಲ್ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಗೆ ಪಾವತಿ ಆಧಾರಿತ ಪಾರ್ಕಿಂಗ್(ಪೇ ಅಂಡ್ ಪಾರ್ಕ್) ವ್ಯವಸ್ಥೆ ಜಾರಿಗೆ ಮೈಸೂರು ಸಂಚಾರಿ ಪೊಲೀಸರು ಉದ್ದೇಶಿಸಿದ್ದಾರೆ.

ಮೈಸೂರು ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲೊಂದಾದ ಅಶೋಕ ರಸ್ತೆಯಲ್ಲಿ ವಾಹನ ನಿಲುಗಡೆ ಮಾಡುವ ಅಂಗಡಿಗಳ ಮಾಲೀಕರು ಮತ್ತು ಸಿಬ್ಬಂದಿಗೆ ಶೀಘ್ರದಲ್ಲೇ ಟೌನ್‌ಹಾಲ್‌ನಲ್ಲಿನ ಪಾರ್ಕಿಂಗ್ ಪ್ರದೇಶದಲ್ಲಿ ಪಾವತಿ ಆಧಾರಿತ ಪಾರ್ಕಿಂಗ್(ಪೇ ಅಂಡ್ ಪಾರ್ಕ್) ವ್ಯವಸ್ಥೆ ಜಾರಿಗೆ ನಿರ್ಧರಿಸಿದ್ದು, ಈ ಸಂಬಂಧ ನಗರ ಪೊಲೀಸ್ ಇಲಾಖೆ ಅನುಮೋದನೆಗಾಗಿ ಮೈಸೂರು ಮಹಾನಗರ ಪಾಲಿಕೆ ಮುಂದೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ನಡೆಸಿದೆ.

ಮೇ 26ರಂದು ಅಶೋಕ ರಸ್ತೆಯ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ 'ಜನ ಸಂಪರ್ಕ' ಸಭೆಯಲ್ಲಿ ಈ ವಿಷಯವಾಗಿ ಚರ್ಚೆ ನಡೆಯಿತು. ಸಭೆಯಲ್ಲಿ ಡಿಸಿಪಿ (ಅಪರಾಧ ಮತ್ತು ಸಂಚಾರ) ಕೆ.ಎಸ್.ಸುಂದರ್‌ರಾಜ್ ಹಾಗೂ ಎಸಿಪಿ (ಸಂಚಾರ) ಎಂ.ಶಿವಶಂಕರ್, ಈ ಹೊಸ ವ್ಯವಸ್ಥೆ ಜಾರಿಗೆ ಸಹಕರಿಸುವಂತೆ ವ್ಯಾಪಾರಿಗಳಲ್ಲಿ ಮನವಿ ಮಾಡಿದರು.

ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಪೊಲೀಸರಲ್ಲಿನ ಮಾಹಿತಿ ಪ್ರಕಾರ, ಅಶೋಕ ರಸ್ತೆ ಹಾಗೂ ಡಿ.ದೇವರಾಜ ಅರಸು ರಸ್ತೆಯಂತಹ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಲಭ್ಯವಿರುವ ರಸ್ತೆಬದಿಯ ಪಾರ್ಕಿಂಗ್ ಸ್ಥಳದ ಸುಮಾರು ಶೇ.60ರಷ್ಟು ಭಾಗವನ್ನು ಅಂಗಡಿ ಮಾಲೀಕರು ಹಾಗೂ ಸಿಬ್ಬಂದಿ ಬೆಳಗ್ಗೆಯಿಂದ ▶ 6ನೇ ಪುಟಕ್ಕೆ

ಈ ಯೋಜನೆ ಸಾರ್ವಜನಿಕರಿಗಿಲ್ಲ

ಈ ಯೋಜನೆ ಸಾರ್ವಜನಿಕರಿಗೆ ಅನ್ವಯವಾಗುವುದಿಲ್ಲ. ಅಶೋಕ ರಸ್ತೆಯಲ್ಲಿ ದಿನಪೂರ್ತಿ ವಾಹನ ನಿಲ್ಲಿಸುವ ಮಾಲೀಕರು ಹಾಗೂ ಅಂಗಡಿ ಸಿಬ್ಬಂದಿಗೆ ಮಾತ್ರ ಮಾಸಿಕ ಪಾಸ್ ವ್ಯವಸ್ಥೆ ಕಲ್ಪಿಸಲಾಗುವುದು. ಈ ಯೋಜನೆ ಜಾರಿಯಾದ ನಂತರ ಸಾರ್ವಜನಿಕರಿಗೆ ಅಶೋಕ ರಸ್ತೆಯಲ್ಲಿ ಸುಲಭವಾಗಿ ತಮ್ಮ ವಾಹನಗಳ ಪಾರ್ಕಿಂಗ್ ಸ್ಥಳಾವಕಾಶ ಲಭ್ಯವಾಗಲಿದೆ.

ಡಿ.ದೇವರಾಜ ಅರಸು ರಸ್ತೆಯಲ್ಲೂ ಜಾರಿ

ಮೈಸೂರಿನ ವಾಣಿಜ್ಯ ಕೇಂದ್ರಗಳಲ್ಲಿ ಪ್ರಮುಖವಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗಿದ್ದು, ಈ ಸಂಬಂಧ ಎಲ್ಲಾ ಸಂಘ–ಸಂಸ್ಥೆಗಳು ಪಾಲಿಕೆಗೆ ಮನವಿ ಸಲ್ಲಿಸಿವೆ. ಮತ್ತೊಂದೆಡೆ ಪಾಲಿಕೆಗೆ ಯಾರೇ ಆಯುಕ್ತರಾಗಿ ನೇಮಕಗೊಂಡಾಗ ತಕ್ಷಣ ಪೇ ಅಂಡ್ ಪಾರ್ಕ್ ಬಗ್ಗೆ ಚರ್ಚೆ ಮಾಡುತ್ತಾರೆ. ಆದರೆ, ಇದುವರೆಗೆ ಅನುಷ್ಠಾನಗೊಳಿಸುವುದಿಲ್ಲ. ಮತ್ತೊಂದೆಡೆ ಮೇಯರ್ ಆಗುವವರು ಆರಂಭದಲ್ಲಿ ಉತ್ಸಾಹ ತೋರಿ ನಂತರ ಈ ವಿಷಯವನ್ನೇ ಮರೆಯುತ್ತಾರೆ.

ಅಶೋಕ ರಸ್ತೆಯಂತೆ ಡಿ.ದೇವರಾಜ ಅರಸು ರಸ್ತೆಯ ವ್ಯಾಪಾರಿಗಳಿಗೂ ಇದೇ ಮಾದರಿಯ ವ್ಯವಸ್ಥೆ ಜಾರಿಯಾಗಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಶಿವಶಂಕರ್, ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವುದು ಪಾಲಿಕೆ ಆಯುಕ್ತರೆ ಎಂದು ತಿಳಿಸಿದರು. ಈ ಸಂಬಂಧ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರ ಪ್ರತಿಕ್ರಿಯೆಗೆ ಯತ್ನಿಸಲಾಯಿತಾದರೂ ಅವರು ಲಭ್ಯವಾಗಲಿಲ್ಲ.

ಇಂದು ಸಂಸದ ಯದುವೀರ್‌ಗೆ 'ಸರಸ್ವತಿಪುರಂ ನಾಗರಿಕ ಸನ್ಮಾನ'


ಯದುವೀರ್

ಮೈಸೂರು,ಜೂ.13–ರಾಜ ವಂಶಸ್ಥರೂ ಆದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ನಗರದ ಸರಸ್ವತಿಪುರಂ ನಾಗರಿಕರ ವತಿಯಿಂದ 'ಸರಸ್ವತಿಪುರಂ ನಾಗರಿಕ ಸನ್ಮಾನ'ದ ಮೂಲಕ ಗೌರವಿಸಲಾಗುತ್ತಿದೆ.

ಸರಸ್ವತಿಪುರಂ 2ನೇ ಮುಖ್ಯ ರಸ್ತೆಯ ಶ್ರೀರಾಮಮಂದಿರ (ತೆಂಗಿನತೋಟ)ದಲ್ಲಿ ಭಾನುವಾರ (ಜೂ.14) ಸಂಜೆ 4.30ಕ್ಕೆ ಸನ್ಮಾನ ಸಮಾರಂಭ ಆಯೋಜಿಸಲಾಗಿದ್ದು, ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಸಚಿವ ಸಾ.ರಾ.ಮಹೇಶ್ ಅಧ್ಯಕ್ಷತೆಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಶಂಕರ ಜಯಂತಿ ಸಭಾದ ಅಧ್ಯಕ್ಷ ಸುಂದರೇಶ್, ಸರಸ್ವತಿಪುರಂ ಶ್ರೀ ವಾಸವಿ ಸ್ನೇಹ ವೃಂದದ ಅಧ್ಯಕ್ಷ ಶಾಂತರಾಮ್ ಮತ್ತಿತರರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಜಿ ಮೇಯರ್ ಆರ್.ಲಿಂಗಪ್ಪ ತಿಳಿಸಿದ್ದಾರೆ.


ಎಸ್.ಸಿ.ಬಸವರಾಜುವಿಗೆ ಎಂಎಲ್‌ಸಿ ಸ್ಥಾನಕ್ಕೆ ಆಗ್ರಹಿಸಿ ನಾಳೆ ಮೈಸೂರಲ್ಲಿ ಮೆರವಣಿಗೆ

ಮೈಸೂರು, ಜೂ.13(ಜಿಎ)–ನಾಯಕ ಸಮುದಾಯದ ಎಸ್.ಸಿ.ಬಸವರಾಜು ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ನೀಡುವಂತೆ ಆಗ್ರಹಿಸಿ ಜೂ.15ರಂದು ಮೈಸೂರಲ್ಲಿ ಬೃಹತ್ ಮೆರವಣಿಗೆ ನಡೆಸಲಾಗುತ್ತಿದೆ ಎಂದು ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಭಾಗದಲ್ಲಿ ನಾಯಕ ಸಮುದಾಯದ ಜನಸಂಖ್ಯೆ ಸುಮಾರು 9ರಿಂದ 10 ಲಕ್ಷ ಇದ್ದು, ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುತ್ತ ಬಂದಿದೆ. ಹೀಗಿದ್ದರೂ ಈ ಭಾಗದಲ್ಲಿ ಸಮುದಾಯದ ಓರ್ವರನ್ನೂ ಎಂಎಲ್‌ಸಿ ಮಾಡದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಎಸ್.ಸಿ. ಬಸವರಾಜು ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡಬೇಕೆಂದು ಮನವಿ ಮಾಡಿದರು.

ಎಸ್.ಸಿ.ಬಸವರಾಜು ಮೈಸೂರು ವಿಭಾಗದಲ್ಲಿ ಸಮುದಾಯದ ಹಿರಿಯ ಮುಖಂಡರಾಗಿದ್ದು, ಕಾಂಗ್ರೆಸ್‌ಗಾಗಿ ನಿಷ್ಠಾವಂತಿಕೆಯಿಂದ ದುಡಿಯುತ್ತಿದ್ದಾರೆ. ಪಕ್ಷ ವಹಿಸಿದ ಕೆಲಸವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಇವರಿಗೆ ಎಂಎಲ್‌ಸಿ ಸ್ಥಾನ ನೀಡಬೇಕೆಂದು ಆಗ್ರಹಿಸಿ ಜೂ.15ರಂದು ಬೆಳಗ್ಗೆ 11ಕ್ಕೆ ನಗರದ ನಂಜರಾಜ ಬಹದ್ದೂರ್ ಛತ್ರದಿಂದ ಕಾಂಗ್ರೆಸ್ ಕಚೇರಿಗೆ ಮೆರವಣಿಗೆ ಹೊರಟು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಮನವಿಪತ್ರ ಸಲ್ಲಿಸಲಾಗುವುದು. ಇದರಲ್ಲಿ ಸಮುದಾಯದ ಸಾವಿರಾರು ಮಂದಿ ಹಾಗೂ ಎಸ್.ಸಿ.ಬಸವರಾಜು ಅವರ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ವೆಂಕಟೇಶ್‌ನಾಯಕ್, ದೇವರಾಜ್ ಪಾಳೇಗಾರ್, ಶಿವಣ್ಣ, ಸಿದ್ದಪ್ಪ ಉಪಸ್ಥಿತರಿದ್ದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರಿಗೆ ಅಭಿನಂದನೆ



ರಾಜ್ಯ ಎಸ್‌ಟಿ ಮೋರ್ಚಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಮಾಜಿ ನಗರಪಾಲಿಕೆ ಸದಸ್ಯರಾದ ಗುರುವಿನಾಯಕ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಅಭಿನಂದಿಸಿದರು. ಈ ವೇಳೆ ಸಂಸದರಾದ ಯದುವೀರ್, ನಗರ ಬಿಜೆಪಿ ಅಧ್ಯಕ್ಷ ಎಲ್ ನಾಗೇಂದ್ರ, ನಗರ ಪ್ರಧಾನ ಕಾರ್ಯದರ್ಶಿ ಕೃಷ್ಣ ನಾಯಕ, ನಾಗೇಶ್ ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಗೆ ರೆನಿಷ್ ಆಯ್ಕೆ



ಮೈಸೂರು: ಮೈಸೂರಿನ ಕೆಬಿಸಿ ಕ್ಲಬ್‌ನ ಉದಯೋನ್ಮುಖ ಆಟಗಾರ ರೆನಿಷ್ ಮ್ಯಾಥ್ಯು ಬೆಂಗಳೂರಿನಲ್ಲಿ ನಡೆಯಲಿರುವ 16 ವರ್ಷದೊಳಗಿನ ಬಾಲಕರ ರಾಜ್ಯ ಮಟ್ಟದ ಬ್ಯಾಸ್ಕೆಟ್ಬಾಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾನೆ. ಈತ ಈಗಾಗಲೇ ಸಬ್ ಜೂನಿಯರ್ ಬಾಸ್ಕೆಟ್ ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾನೆ. ಜೊತೆಗೆ ಎರಡು ಬಾರಿ 16 ವಯಸ್ಸಿನೊಳಗಿನ ಮತ್ತು ಒಂದು ಬಾರಿ 18 ವಯಸ್ಸಿನೊಳಗಿನ ರಾಜ್ಯ ಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಾನೆ. ರಾಜ್ಯ ಮಿನಿ ಒಲಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದಿದ್ದಾನೆ. ಈತ ಶ್ರೀರಾಂಪುರದ ಸೇಂಟ್ ರೊಸೆಲೊ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ. ಸಂತ ಜೋಸೆಫರ ಶಾಲೆ ಶಿಕ್ಷಕ ಕಿರಣ್‌ಕುಮಾರ್ ಮತ್ತು ಶಿಕ್ಷಕಿ ರೆಜಿನಾ ದಂಪತಿ ಪುತ್ರ.

ವಿಶ್ವ ಯೋಗ ದಿನದಂದು ಯೂಟ್ಯೂಬ್ ಲೈವ್ ಯೋಗ ಸೆಷನ್ ಆಯೋಜನೆ

ಮೈಸೂರು, ಜೂ.13(ಬಿಎಲ್‌ಯು)–ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯವು ಜೂ.14ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಿದ್ದು, ಯೂಟ್ಯೂಬ್ ಲೈವ್ ಯೋಗ ಸೆಷನ್ ಮೂಲಕ ಅತ್ಯಧಿಕ ವೀಕ್ಷಕರನ್ನು ಒಂದುಗೂಡಿಸಿ ವಿಶ್ವ ದಾಖಲೆ ಮಾಡುವ ಪ್ರಯತ್ನ ಮಾಡಿದೆ ಎಂದು ಮೈಸೂರಿನ ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಧ್ಯೇಯವಾಕ್ಯದೊಂದಿಗೆ ಈ ಬಾರಿಯ ಯೋಗ ದಿನ ಆಚರಿಸಲಾಗುತ್ತಿದೆ. ವಿಶ್ವದಾದ್ಯಂತ ಯೋಗಾಸಕ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಉದ್ದೇಶದಿಂದ ಯೂಟ್ಯೂಬ್ ಲೈವ್ ಯೋಗ ಸೆಷನ್ ಆಯೋಜಿಸಲಾಗಿದೆ. ವಿಶ್ವದ 130ಕ್ಕೂ ಹೆಚ್ಚು ದೇಶಗಳ ಲಕ್ಷಾಂತರ ಯೋಗಾಸಕ್ತರು ಪಾಲ್ಗೊಳ್ಳಲಿದ್ದು, ಅಂದು ಬೆಳಿಗ್ಗೆ 6.15 ಗಂಟೆಗೆ ಯೋಗ ಕಾರ್ಯಕ್ರಮ ನಡೆಯಲಿದೆ. ಆಸಕ್ತರು moa.habit.yoga ಅಥವಾ ಮಿಸ್ ಕಾಲ್ ಮೂಲಕ 1800 315 7008 ನೋಂದಣಿ ಮಾಡಿಸಿಕೊಳ್ಳ ಬಹುದು ಎಂದು ಗಿರೀಶ್ ಸಲಹೆ ನೀಡಿದ್ದಾರೆ.

ನಿಧನ




ರಾಜಣ್ಣ

ಮೈಸೂರು, ಜೂ. 13–ಮೈಸೂರಿನ ಕನಕದಾಸನಗರ ನಿವಾಸಿ ರಾಜಣ್ಣ (75) ವಯೋಸಹಜ ಕಾಯಿಲೆಯಿಂದ ಜೂನ್ 11ರಂದು ಸಂಜೆ ನಿಧನರಾದರು. ಮೂಲತಃ ಗುಂಡ್ಲುಪೇಟೆ ತಾಲೂಕು ತುಪ್ಪೂರು ಗ್ರಾಮದವರಾದ ಇವರು ಪತ್ನಿ ಶ್ರೀಮತಿ ರಂಗಲಕ್ಷ್ಮಮ್ಮ, ಪುತ್ರರೂ ಆದ ಮೂಗೂರು ಬ್ರಾಹ್ಮಣ ಮಹಾಸಭಾ ನಿರ್ದೇಶಕ, ಸಮಾಜ ಸೇವಕರಾದ ನಾಗೇಂದ್ರ ತುಪ್ಪೂರ್ ಹಾಗೂ ಸತೀಶ್, ಪುತ್ರಿ ಶ್ರೀಮತಿ ಲತಾ ಹರಿದಾಸ್, ಅಳಿಯ ಹರಿದಾಸ್, ಮೊಮ್ಮಕ್ಕಳಾದ ರಮ್ಯಶ್ರೀ, ರಕ್ಷಿತಾ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ಜೂ.12ರಂದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಅಭಿಲಾಷ್



ಸರಗೂರು ತಾಲೂಕಿನ ದಡದಹಳ್ಳಿ ಗ್ರಾಮದ ನಿವಾಸಿ ಅಭಿಲಾಷ್ (23) ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ರಾತ್ರಿ 8 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಮೃತರು ತಂದೆ ಮಂಜುನಾಥ್, ತಾಯಿ ಶೀಲಾವತಿ, ತಮ್ಮ ಸೇಟು, ಮಾವ ಮಹೇಶ್ ಹಾಗೂ ಅಜ್ಜಿ–ತಾತ ಸೇರಿದಂತೆ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ.

ಕರ್ತವ್ಯ ಮರೆತ ಮೈಸೂರು ಮಹಾ ನಗರ ಪಾಲಿಕೆ, ಪಿಡಬ್ಲ್ಯೂಡಿ, ಹೆದ್ದಾರಿ ಪ್ರಾಧಿಕಾರ

ಮೈಸೂರಲ್ಲಿ ಗುಂಡಿಗಳ ಮುಚ್ಚುತ್ತಿರುವ ಟ್ರಾಫಿಕ್ ಪೊಲೀಸರು



ಮೈಸೂರು, ಜೂ.13(ಜಿಎ)–ಮೈಸೂರು ನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಮಾಡಬೇಕಾದ ಕೆಲಸವನ್ನು ಮೈಸೂರು ಪೊಲೀಸರು ಮಾಡುತ್ತಿದ್ದಾರೆ. ಮೈಸೂರಿನ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಬಿದ್ದಿರುವ ಗುಂಡಿಗಳನ್ನು ಸಂಚಾರಿ ಪೊಲೀಸರು ಮುಚ್ಚುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ನಗರದ ರಾಯಲ್ ಇನ್ ಜಂಕ್ಷನ್ ಬಳಿಯ ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ರೈಲ್ವೇ ಅಂಡರ್ ಬ್ರಿಡ್ಜ್‌ನಲ್ಲಿ ಬಿದ್ದಿರುವ ಬೃಹತ್ ಗುಂಡಿಯನ್ನು ಮುಚ್ಚಿ ಎಲ್ಲರ ಗಮನ ಸೆಳೆದಿದ್ದಾರೆ.

ಮಳೆಗಾಲದಲ್ಲಿ ಎಲ್ಲಾ ರಸ್ತೆಗಳು ಕೆರೆಗಳಂತಾಗಿ ರಸ್ತೆಯ ಯಾವ ಭಾಗ ದಲ್ಲಿ ಗುಂಡಿ ಬಿದ್ದಿದೆ. ಎಂಬುದೇ ತಿಳಿಯುವುದಿಲ್ಲ. ಇದರಿಂದ ಅನೇಕ ಅಪಘಾತಗಳು ಸಂಭವಿಸಿ, ಕೆಲವರು ಕುಟುಂಬಕ್ಕೆ ಆಧಾರವಾಗಿರುವವರನ್ನು ಕಳೆದುಕೊಂಡಿರುವ ಸಾಕಷ್ಟು ಮಂದಿ ಪಾಲಿಕೆ ವಿರುದ್ಧ ಹಿಡಿಶಾಪ ಹಾಕುವುದು ಕೇಳಿ ಬರುತ್ತಿದೆ. ಆದರೂ ನಗರ ಪಾಲಿಕೆ ಕಣ್ಣಿದ್ದು, ಕಿವಿಯಿದ್ದು, ಸಂಬಂಧವೇ ಇಲ್ಲದಂತಿದೆ.

ಇಡೀ ಮೈಸೂರು ನಗರವೇ ಈಗಾಗಲೇ ಸೆಸ್ಕ್ ಮತ್ತು ಗ್ಯಾಸ್ ಪೈಪ್‌ಲೈನ್ ಕಾಮಗಾರಿಯಿಂದ ಗುಂಡಿಮಯವಾಗಿದೆ. ಇದಕ್ಕೆ ರೈಲ್ವೆ ಅಂಡರ್ ಬ್ರಿಡ್ಜ್‌ಗಳು ಹೊರತಾಗಿಲ್ಲ. ರಿಂಗ್ ರಸ್ತೆಯ ಸುತ್ತಲೂ ಹಾಗೂ ಅದಕ್ಕೆ ಹೊಂದಿಕೊಂಡಂತೆ ಇರುವ ಎಲ್ಲಾ ರೈಲ್ವೆ ಅಂಡರ್ ಬ್ರಿಡ್ಜ್‌ಗಳು ಸಾಧಾರಣ ಮಳೆಯಾದಾಗ ಕೆರೆಯಂತೆ ನೀರು ನಿಲ್ಲುವುದರಿಂದ ವಾಹನ ಸವಾರರು ಇದನ್ನು ಪೊಲೀಸ್ ಇಲಾಖೆ ಸರಿಪಡಿಸಬೇಕೆಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.

ನಿಜವಾಗಿಯೂ ಯಾವುದೇ ರಸ್ತೆಗಳ ಕಾಮಗಾರಿ ಪೊಲೀಸ್ ಇಲಾಖೆಗೆ ಒಳಪಡುವುದಿಲ್ಲ. ಬದಲಾಗಿ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳ ಹೊಣೆಯಾಗಿರುತ್ತದೆ. ಈ ಇಲಾಖೆಗಳು ರಸ್ತೆಗಳನ್ನು ದುರಸ್ತಿಪಡಿಸದ ಹಿನ್ನೆಲೆಯಲ್ಲಿ ಜನರು ಪೊಲೀಸ್ ಇಲಾಖೆಯನ್ನು ದೂರುತ್ತಾರೆ.

> ಮೈಸೂರು ರಸ್ತೆಗಳು, ರೈಲ್ವೇ ಅಂಡರ್ ಬ್ರಿಡ್ಜ್‌ನಲ್ಲಿ ಗುಂಡಿ ಬಿದ್ದು ನೀರು ತುಂಬಿಕೊಂಡಿರುವ ಸಂಬಂಧ ಪೊಲೀಸ್ ಇಲಾಖೆ ವತಿಯಿಂದ ಈಗಾಗಲೇ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳಿಗೆ ಪತ್ರ ಬರೆಯಲಾಗಿದೆ. ಅವರಿಂದ ಯಾವುದೇ ಸ್ಪಂದನೆ ದೊರೆತಿಲ್ಲ. ನಮಗೂ ಇಲಾಖೆಯಿಂದ ರಸ್ತೆ ದುರಸ್ತಿಗೆ ಯಾವುದೇ ಅನುದಾನ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ಸಿಬ್ಬಂದಿ ತಾತ್ಕಾಲಿಕವಾಗಿ ಗುಂಡಿಗಳನ್ನು ಮುಚ್ಚುತ್ತಿದ್ದಾರೆ.
> –ಶಿವಶಂಕರ್, ಎಸಿಪಿ, ಸಂಚಾರ ವಿಭಾಗ


ಸ್ಪಂದನೆ ಇಲ್ಲ: ನಗರದಲ್ಲಿ ಈ ರೀತಿ ರಸ್ತೆಗಳು, ರೈಲ್ವೆ ಅಂಡರ್ ಬ್ರಿಡ್ಜ್‌ನಲ್ಲಿ ಗುಂಡಿ ಬಿದ್ದು ನೀರು ತುಂಬಿಕೊಂಡಿರುವ ಸಂಬಂಧ ಪೊಲೀಸ್ ಇಲಾಖೆ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳಿಗೆ ಈ ಸಮಸ್ಯೆಯನ್ನು ಬಗೆಹರಿಸುವಂತೆ ಪತ್ರ ಬರೆದಿದ್ದು, ಈವರೆಗೂ ಯಾವುದೇ ಪ್ರತಿಕ್ರಿಯೆಗಳು ಬಂದಿಲ್ಲ.

ಸಾಮಾಜಿಕ ಜಾಲತಾಣದಿಂದ ಒತ್ತಡ: ಇತ್ತೀಚೆಗೆ ಸಾಮಾಜಿಕ ಜಾಲತಾಣ ಬಲಿಷ್ಠವಾಗುತ್ತಿದ್ದು, ಕೆಲವರು ಇದನ್ನು ಉತ್ತಮ ಕೆಲಸಕ್ಕೆ ಬಳಸುತ್ತಿದ್ದು, ಸಮಾಜ ಅಂಕುಡೊಂಕನ್ನು ತಿದ್ದುವ ಕೆಲಸ ಮಾಡುತ್ತಿದ್ದಾರೆ. ತಿದ್ದುವ ಕೆಲಸದ ನಡುವೆ ಎಡವಟ್ಟುಗಳನ್ನು ಮಾಡುತ್ತಿದ್ದಾರೆ. ರಸ್ತೆ ಗುಂಡಿ ಬಿದ್ದಿರುವ ಫೋಟೋ, ವೀಡಿಯೊವನ್ನು ತೆಗೆದು ಪೊಲೀಸ್ ಇಲಾಖೆ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಪೋಸ್ಟ್ ಮಾಡಿ ಪೊಲೀಸ್ ಐಜಿಪಿ, ಡಿಜಿಗೆ ಟ್ಯಾಗ್ ಮಾಡುತ್ತಿದ್ದು, ಇದರಿಂದ ತಕ್ಷಣ ಸಮಸ್ಯೆ ಬಗೆಹರಿಸುವಂತೆ ಸೂಚನೆ ನೀಡುತ್ತಿದ್ದಾರೆ. ಇದರಿಂದ ತಮಗೂ ಇದಕ್ಕೂ ಸಂಬಂಧವಿಲ್ಲದಿದ್ದರೂ ಪೊಲೀಸ್ ಸಿಬ್ಬಂದಿಗಳಿಗೆ ಒತ್ತಡ ಹೆಚ್ಚಾಗಿದೆ.

ಪೊಲೀಸರ ಸಾಥ್: ರಸ್ತೆ ದುರಸ್ತಿ ಕಾರ್ಯಕ್ಕೂ ಪೊಲೀಸರಿಗೂ ಸಂಬಂಧ ಇಲ್ಲದಿದ್ದರೂ, ವಾಹನ ಸವಾರರ ಹಿತ ದೃಷ್ಟಿಯಿಂದ ಮೈಸೂರು ನಗರದಲ್ಲಿ ವಾಹನಗಳು ಸಂಚರಿಸುವ ಯಾವುದೇ ಸ್ಥಳದಲ್ಲಿ ಗುಂಡಿ ಬಿದ್ದ ತಕ್ಷಣ ಪೊಲೀಸರು ಅದನ್ನು ಮುಚ್ಚುವ ಅಥವಾ ವಾಹನ ಸವಾರರು ಆ ಕಡೆ ಬಾರದಂತೆ ಬ್ಯಾರಿಗೇಡ್ ಅಳವಡಿಸಿ, ಸಾರ್ವಜನಿಕರು ಮುಕ್ತವಾಗಿ ಸಂಚರಿಸಲು ಅನುವು ಮಾಡಿಕೊಡುತ್ತಾರೆ.

ಇದೇ ರೀತಿಯ ಘಟನೆಗೆ ಶುಕ್ರವಾರ ಸಂಜೆಯ ವಿವಿಪುರಂ ಸಂಚಾರ ಠಾಣಾ ಪೊಲೀಸ್ ಸಿಬ್ಬಂದಿ ಮಾಡಿರುವ ಕಾರ್ಯ ಸಾಕ್ಷಿಯಾಗಿದೆ. ಮೈಸೂರಿನ ರಿಂಗ್ ರಸ್ತೆಯ ಸರ್ವಿಸ್ ರಸ್ತೆಗೆ ರೈಲ್ವೆ ಅಂಡರ್ ಬ್ರಿಡ್ಜ್ ನಿರ್ಮಾಣ ಮಾಡಲಾಗುತ್ತದೆ. ಕೆಲವೆಡೆ ಒಂದು ಭಾಗದಲ್ಲಿ ಕಾಮಗಾರಿ ಮುಗಿದೆ. ಮತ್ತೊಂದೆಡೆ ನಡೆಯುತ್ತಿದೆ. ಅದೇ ರೀತಿ ರಾಯಲ್ ಇನ್ ಜಂಕ್ಷನ್ ಬಳಿಯ ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ರೈಲ್ವೇ ಅಂಡರ್ ಬ್ರಿಡ್ಜ್‌ನಲ್ಲಿ ಬಿದ್ದಿರುವ ಬೃಹತ್ ಗುಂಡಿಯನ್ನು ಪೊಲೀಸ್ ಸಿಬ್ಬಂದಿ ಮುಚ್ಚಿ ಎಲ್ಲರ ಗಮನ ಸೆಳೆದಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಜನರ ಮನವಿಗೆ ಪೊಲೀಸರ ಸ್ಪಂದನೆ



ಮೈಸೂರು ರಾಯಲ್ ಇನ್ ಜಂಕ್ಷನ್ ಬಳಿಯ ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ರೈಲ್ವೇ ಅಂಡರ್ ಬ್ರಿಡ್ಜ್‌ನಲ್ಲಿ ಬಿದ್ದಿರುವ ಬೃಹತ್ ಗುಂಡಿಯನ್ನು ಮುಚ್ಚಿ, ಗಮನ ಸೆಳೆದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.06.2026 ಭಾನುವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಫೂರ್ತಿ ಸಂಸ್ಥೆ :** ಸೈಕ್ಲೋಥಾನ್, ಚಾಲನೆ : ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ಕೆ.ಆರ್.ಪ್ರಭಾಕರ್‌ರಾವ್, ಸ್ಥಳ: ಮೈಸೂರಿನ ಸೈಕ್ಲೋಪೀಡಿಯಾ, ಬೆಳಗ್ಗೆ 5.50ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30 ರಿಂದ

■ **ಭಾರತೀ ಯೋಗಧಾಮ :** ಸಂಸ್ಕೃತಿ ಪರ್ವ ಆಧುನಿಕ ಬದುಕಿಗೆ ಆರ್ಷ ಚಿಂತನೆಯ ಬೆಳಕು, ಬದುಕನ್ನು ಸಮೃದ್ಧಗೊಳಿಸುವ ಆರ್ಷಮೌಲ್ಯಗಳ ಕುರಿತು ಶಾಸ್ತ್ರ–ವಿಚಾರ, ಗಾನ–ವ್ಯಾಖ್ಯಾನ, ಪುರಾಣ–ಇತಿಹಾಸಗಳ ವಿಶಿಷ್ಟ ಅನುಸಂಧಾನ ಸರಣಿ, ಸ್ಥಳ: ಭಾರತೀ ಯೋಗಧಾಮ, ಉತ್ತನಹಳ್ಳಿ, ಬೆಳಗ್ಗೆ 9.30 ರಿಂದ.

■ **ಸುಯೋಗ್ ಆಸ್ಪತ್ರೆ :** ಜೀರ್ಣಾಂಗ ಕಾಯಿಲೆಗಳಿಗೆ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ವರ್ಲ್ಡ್ ಮಿಷನ್ ಸೊಸೈಟಿ ಚರ್ಚ್ ಆಫ್ ಗಾಡ್ :** ಗಿಡ ನೆಡುವ ಅಭಿಯಾನ, ಸ್ಥಳ: ಚಾಮುಂಡಿ ಬೆಟ್ಟದ ವ್ಯೂ ಪಾರ್ಕ್, ಕೆ.ಸಿ. ಲೇಔಟ್, ಬೆಳಗ್ಗೆ 10 ರಿಂದ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್ :** ವಿಶ್ವ ಪರಿಸರ ಮಾಸಾಚರಣೆ ಪ್ರಯುಕ್ತ ಚಿತ್ರ ಬಿಡಿಸುವ ಸ್ಪರ್ಧೆ, ಸ್ಥಳ: ಎಂಬಿಸಿಟಿ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ವಿಶ್ವೇಶ್ವರನಗರ, ಬೆಳಗ್ಗೆ 10 ರಿಂದ.

■ **ಸಹಜ ಸಮೃದ್ಧ ಸಂಸ್ಥೆ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಮತ್ತು ಸಹಜ ಸೀಡ್ಸ್ :** ದೇಸಿ ಬೀಜೋತ್ಸವ, ದೇಸಿ ಬೀಜಗಳು,ಗೆಡ್ಡೆ ಗೆಣಸು, ಸೊಪ್ಪಿನ ತಳಿಗಳು, ಅಪರೂಪದ ಹಣ್ಣು ಹಂಪಲು ಪ್ರದರ್ಶನ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10ಕ್ಕೆ.

■ **ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾಲಯ, ಸಂಪಾದಕ ಮಂಡಳಿಯ ಕಲಾ ಮತ್ತು ಸಾಹಿತ್ಯ ಕ್ಲಬ್ :** 20ನೇ ಆವೃತ್ತಿಯ ಶಬ್ದ–2026 ರ ಕಲಾ ಮತ್ತು ಸಾಹಿತ್ಯ ಉತ್ಸವ, ಸ್ಥಳ: ಜೆಎಸ್‌ಎಸ್ ಎಸ್‌ಟಿಯುನ ಗೋಲ್ಡನ್ ಜುಬಿಲಿ ಭವನ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತ ಸಮಿತಿ :** ಕಾಳಿಹುಂಡಿ ಶಿವಕುಮಾರ್ ಅವರು ಸಂಗ್ರಹಿಸಿರುವ ಪುಸ್ತಕಗಳನ್ನು ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಮುಖ್ಯ ಅತಿಥಿಗಳು : ಪ್ರಿನ್ಸಿಪಾಲ್ ಕೆ. ರವಿ, ನಿವೃತ್ತ ಹಿರಿಯ ಶುಶ್ರೂಷಕ ಕಣ್ಣೂರು ವಿ. ಗೋವಿಂದಾಚಾರಿ, ಆಶಯ ನುಡಿ : ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಿತಿ ಸಂಚಾಲಕ ಎಂ. ಚಂದ್ರಶೇಖರ್, ಉಪಸ್ಥಿತರು : ಕಾಳಿಹುಂಡಿ ಶಿವಕುಮಾರ್, ಸ್ಥಳ: ಗೋವಿಂದರಾವ್ ಮೆಮೋರಿಯಲ್ ಪಿಯು ಕಾಲೇಜು, ಕಂದಾಯ ನಗರ, ಶ್ರೀರಾಂಪುರ, ಬೆಳಗ್ಗೆ 11ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–105, ತಿಂಗಳ ಸಾಧಕರು ಮಕ್ಕಳ ವೈದ್ಯ ತಜ್ಞ ಡಾ. ಯು.ಜಿ. ಶೆಣೈ, ಬಿ.ಆರ್. ನಾಗರತ್ನ ಬರೆದ ತೆರೆಮರೆಯ ಸಾಧಕರು ಪುಸ್ತಕ ಲೋಕಾರ್ಪಣೆ, ಉಪಸ್ಥಿತರು : ವೈದ್ಯ ಸಾಹಿತಿ ಡಾ. ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಎನ್.ಎಚ್. ಜಯರಾಮ್, ಆರ್. ರಮೇಶ್ ಕಿಣಿ, ಕರ್ನಲ್ ಡಾ. ವಿ. ರಮೇಶ್, ಹೆಚ್.ಆರ್. ರಮೇಶ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸೇನಾ ಪಡೆ :** ಶ್ರೀ ಶಂಕರ ಜಯಂತಿ–ತತ್ವ ಜ್ಞಾನಿಗಳ ದಿನಾಚರಣೆ, ಸಾನ್ನಿಧ್ಯ : ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪುಷ್ಪಾರ್ಚನೆ : ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ : ಶಾಸಕ ಟಿ.ಎಸ್. ಶ್ರೀವತ್ಸ, ಪ್ರತಿಭಾ ಪುರಸ್ಕಾರ : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಗನ್‌ಹೌಸ್ ಹತ್ತಿರ, ಬೆಳಗ್ಗೆ 11.30ಕ್ಕೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಮೈಸೂರು ದಿಗ್ವಿಜಯ –2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ಬೆಳಗ್ಗೆ 7.30 ರಿಂದ ಪಾದಪೂಜೆ, ಮುದ್ರಾಧಾರಣೆ ಹಾಗೂ ಧನ್ವಂತರಿ ಹೋಮ, ಗೋ ಪೂಜಾ, ಸಂಕಲ್ಪ ಸಹಿತ ಅಪೂವ ದಾನ, ಶ್ರೀಮನ್ಮೂಲರಾಮದೇವರ ಪೂಜೆ, ಸಂಜೆ 4.30 ರಿಂದ ಹರಿನಾಮ ಭಜನೆ (ಭಜನಾ ಮಂಡಳಿಗಳಿಂದ), ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾಂಸರಿಂದ ಪ್ರವಚನ, ಗಣ್ಯರಿಗೆ ಸನ್ಮಾನ, ಶ್ರೀಪಾದಂಗಳವರ ಅನುಗ್ರಹ ಸಂದೇಶ, ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಪುರುಷೋತ್ತಮ ಸ್ತುತಿ ಲಹರಿ, ಸಂಜೆ 5.30 ರಿಂದ ಕು. ಸುಧಾಂಶು ಕಟ್ಟಿ ಮತ್ತು ಕು. ಶ್ರೇಷ್ಠ ಕೌಲಗಿ ಅವರಿಂದ ಬಾನ್ಸುರಿ ಮತ್ತು ಸಂತೂರ್ ನಾದ ನಮನ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ

■ **ಆರ್ಟ್ ಆಫ್ ಲಿವಿಂಗ್ ಸಂಸ್ಥೆ :** 45ನೇ ವಾರ್ಷಿಕೋತ್ಸವ ಹಾಗೂ ಗುರುದೇವ ಶ್ರೀ ಶ್ರೀ ರವಿಶಂಕರ್ ಅವರ 70ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ತೆರೆಮರೆಯ ಸಾಧಕ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ಡಾ. ಆರ್.ಟಿ. ವೆಂಕಟೇಶ್, ಪತ್ರಕರ್ತ ಅಜ್ಜಮಾಡ ರಮೇಶ್ ಕುಟ್ಟಪ್ಪ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ದೇವರತ್ನ ಫೌಂಡೇಷನ್ ಸಂಸ್ಥಾಪಕ ಎಂ. ಶಿವಪ್ರಸಾದ್, ಆಶೀರ್ವಚನ : ಕೌಶಿಕ ಸ್ವಾಮೀಜಿ, ದಿವ್ಯಪಾದ ಸ್ವಾಮೀಜಿ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಸಂಜೆ 5 ರಿಂದ.

■ **ಪ್ರಮತಿ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ :** ಇಂಟರ್ ಸ್ಕೂಲ್ ಮತ್ತು ಜೂನಿಯರ್ ಕಾಲೇಜು ಸಿಬ್ಬಂದಿ ಕ್ರೀಡಾಕೂಟದ ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ಉಪಸ್ಥಿತರು : ಅಂತಾರಾಷ್ಟ್ರೀಯ ಖೋ–ಖೋ ಪಟು ಬಿ.ಚೈತ್ರಾ, ಸ್ಥಳ: ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನ, ಸಂಜೆ 5ಕ್ಕೆ

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಯುವ ಸೌರಭ, ವಿಷಯಾಧಾರಿತ ಸಂಗೀತ ಕಛೇರಿ (ತ್ಯಾಗರಾಜರ ದೇವೀ ಕೃತಿಗಳು), ವಿಶೇಷ ಆಹ್ವಾನಿತರು : ವಿದುಷಿ ಡಾ. ರಮಾ ವಿ. ಬೆಣ್ಣೂರು (ಸಂಗೀತ ತಜ್ಞರು), ಮುಕ್ತಕ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಡಾ. ಎಸ್. ರಾಮಪ್ರಸಾದ್, ವಿದ್ವಾನ್ ಹೆಚ್.ಎಸ್. ಕಾರ್ತಿಕೇಯ ಶರ್ಮ ಅವರಿಂದ ಗಾಯನ, ವಿದ್ವಾನ್ ಕಾರ್ತಿಕೇಯ–ವಯೋಲಿನ್, ವಿದ್ವಾನ್ ಪವನ್ ಮಾಧವ್ ಮಾಸುರ್–ಮೃದಂಗ, ವಿದ್ವಾನ್ ಕಾರ್ತಿಕ್ ಪ್ರಣವ್–ಮೋರ್ಚಿಂಗ್, ಸ್ಥಳ: ಬಿಎಸ್‌ಎಸ್ ವಿದ್ಯೋದಯ, ಭಗಿನಿ ಸೇವಾ ಸಮಾಜ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಈಶಾವಾಸ್ಯ ಉಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಬಿದಿರು ಥಿಯೇಟರ್ ಮೈಸೂರು :** ಬಿದಿರು ಥಿಯೇಟರ್ ತಂಡದ ಸದಸ್ಯರಿಂದ ಜಾನಪದ ನಾಟಕ 'ಮಹಾಮಾಯಿ', ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಲಾವಣ್ಯ ಬೈಂದೂರು ಪ್ರಸ್ತುತ ಪಡಿಸುವ 'ಸಂಜೆ ಹಾಡು' ನಾಟಕ ಪ್ರದರ್ಶನ, ನಾಟಕದ ರಚನೆ–ರಾಜೇಂದ್ರ ಕಾರಂತ, ನಿರ್ದೇಶನ–ಬಿ. ಗಣೇಶ ಕಾರಂತ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ :** ಡಾ. ಕೆ.ಎಲ್. ಶಂಕರನಾರಾಯಣ ಜೋಯಿಸ್ ಅವರಿಂದ ಕಾವ್ಯರತ್ನ ಅಭಿಜ್ಞಾನ ಶಾಕುಂತಲ–1 ಕುರಿತು ಪ್ರವಚನ, ಸ್ಥಳ: ಅಷ್ಟಾಂಗಯೋಗ ವಿಜ್ಞಾನ ಮಂದಿರಂ, ದಿವಾನ್ಸ್ ರಸ್ತೆ, ಸಂಜೆ 6.45ಕ್ಕೆ.

■ **ಮೈಸೂರಿನ ಕಲಾಮಂದಿರ :** ಡೈಮಂಡ್ ಸ್ಟಾರ್ ಮ್ಯಾಜಿಷಿಯನ್ ಹೇಮ್ರಾಜ್ ಅವರಿಂದ ಜಾದೂ ಪ್ರದರ್ಶನ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3, ಸಂಜೆ 5.15, ರಾತ್ರಿ 7.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ –ಡಾ.ಡಿ.ಸಿ.ಗೀತಾ, 6.35 ಮತ್ತು ಸಂಜೆ 6.10 ಸಿನಿಮಾಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ– ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವರಕ್ತದಾನಿಗಳ ದಿನದ ಸಂದರ್ಭದಲ್ಲಿ 'ರಕ್ತದಾನ ಮಹಾದಾನ' ಈ ಕುರಿತು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮುಖ್ಯಸ್ಥರು ಹಾಗೂ ಪ್ರೊಫೆಸರ್ ಡಾ.ಪಲ್ಲವಿ.ಪಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ 'ಮಾರ್ಗದರ್ಶಿ ಶಿಕ್ಷಣಕ್ಕೊಂದು ಸೋಪಾನ' ಮಾಲಿಕೆಯಲ್ಲಿ –ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ 'ಯೋಗ ಮತ್ತು ಮಕ್ಕಳು' ಕುರಿತು ಯೋಗ ಶಿಕ್ಷಕಿ ಆಶಾದೇವಿ.ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ – ರಂಗಭೂಮಿ ಕಲಾವಿದೆ ಗಿರಿಜಾ ಸಿದ್ಧಿ ಅವರೊಂದಿಗೆ ಮಾತುಕತೆ ಇವರೊಂದಿಗೆ : ಆಶಾ, 12.35 ಭಕ್ತಿಗೀತೆಗಳು : ರಜತ್.ಎಸ್, 12.45 ಜನಪದ ಸಂಗೀತ – ಚಾಮರಾಜನಗರ ಸಿದ್ಧಯ್ಯನಪುರದ ಭಾಗ್ಯಮ್ಮ ಮತ್ತು ಸಂಗಡಿಗರಿಂದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು– ಎಂ.ಎಸ್.ಕೀರ್ತನಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ–ಅಶ್ವಥ್ ನಾರಾಯಣ ಅವರ, 4.45 ಚಿತ್ರಗೀತೆಗಳು, 6.51 Running commentary of ICC Women's T20 World cup cricket match between India and Pakistan being played at Edgbaston, Birmingham

ಮೈಸೂರು ಮಿತ್ರ

ಗ್ರಾಮೀಣ ಶಾಲೆಗಳ ಉನ್ನತಿಗೆ ಸಿಎಸ್‌ಆರ್ ನಿಧಿ ಬಳಕೆಗೆ ಹೊಸ ನೀತಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ

ಬೆಂಗಳೂರು: ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ನೂತನ ಸಿಎಸ್‌ಆರ್ ನೀತಿ ತರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಶನಿವಾರ ಅಧಿಕಾರಿಗಳ ಸಭೆ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ನೂತನ ಸಿಎಸ್‌ಆರ್ ನೀತಿ ತರುತ್ತಿದ್ದೇವೆ. ಕಂಪನಿಗಳು ತಮ್ಮ ವಾರ್ಷಿಕ ಆದಾಯದ ಶೇ.2ರಷ್ಟು ಹಣವನ್ನು ಸಿಎಸ್‌ಆರ್ ಉದ್ದೇಶಕ್ಕೆ ಬಳಸಬೇಕೆಂಬ ನಿರ್ದೇಶನವಿದೆ. ಈ ನಿಧಿಯನ್ನು ಗ್ರಾಮೀಣ ಭಾಗದ ಶಾಲೆಗಳ ನಿರ್ಮಾಣ ಹಾಗೂ ಮೂಲಸೌಕರ್ಯಕ್ಕೆ ಬಳಸಲು ತೀರ್ಮಾನಿಸಲಾಗಿದೆ ಎಂದರು.

ಖಾಸಗಿ ಶಾಲೆಗಳು ಗ್ರಾಮೀಣ ಭಾಗದ ಶಾಲೆಗಳನ್ನು ದತ್ತು ತೆಗೆದುಕೊಳ್ಳಬೇಕು. ಸರ್ಕಾರಿ ಶಾಲೆಗಳಲ್ಲಿ ನಗರ ಪ್ರದೇಶದ ಮಾದರಿಯಲ್ಲಿ ಶಿಕ್ಷಣ ಸಿಗುವಂತೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ 20 ಶಾಲೆಗಳನ್ನು ನಿರ್ಮಿಸಲು ಮುಂದಾಗಿದ್ದೇವೆ. ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯ ಹಣವನ್ನು ಸರ್ಕಾರಕ್ಕೆ ನೀಡುವುದು ಬೇಡ, ಬದಲಾಗಿ ಸರ್ಕಾರದ ಮಾದರಿಯಲ್ಲಿ ಶಾಲೆಗಳನ್ನು ನಿರ್ಮಿಸಿಕೊಟ್ಟರೆ ಸಾಕು. ಅವು ಸಂಪೂರ್ಣ ಸರ್ಕಾರಿ ಶಾಲೆಯಾಗಿರುತ್ತವೆ ಎಂದು ತಿಳಿಸಿದರು.



ಯುವ ಯುಗ ನಿರ್ಮಾಣ: ದೇಶದಲ್ಲೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ಖಾಸಗಿ ಉದ್ಯೋಗ ವಿನಿಮಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಖಾಸಗಿ ವಲಯದಲ್ಲಿ ಉದ್ಯೋಗ ಬಯಸುವವರು ಇಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಕಂಪನಿಗಳು ಕೂಡ ತಮಗೆ ಬೇಕಾಗಿರುವ ಉದ್ಯೋಗಿಗಳ ಅರ್ಹತೆ ಮತ್ತು ಸಂಖ್ಯೆಯ ಮಾಹಿತಿ ನೀಡುತ್ತಾರೆ. ಇಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಕ್ರಮ ವಹಿಸಲಾಗುವುದು. ಸ್ಥಳೀಯ ಯುವಕರಿಗೆ ಉದ್ಯೋಗ ಕಲ್ಪಿಸಲು ಸೇತುವೆ ನಿರ್ಮಿಸುವ ಮೂಲಕ ಯುವ ಯುಗವನ್ನು ಆರಂಭಿಸುತ್ತಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭಾರತ ಜೋಡೋ ಯುವಕರ ಸಂಘ: ನನ್ನ ಕನಸಿನ 'ಭಾರತ ಜೋಡೋ ಯುವಕರ ಸಂಘ' ನಿರ್ಮಿಸಲು ಮುಂದಾಗಿದ್ದೇವೆ. ರಾಜ್ಯದಲ್ಲಿ 6000 ಗ್ರಾಮ ಪಂಚಾಯ್ತಿ ಹಾಗೂ 4 ಸಾವಿರ ನಗರ ಪ್ರದೇಶದ ವಾರ್ಡ್‌ಗಳಿವೆ. ಈ ಭಾಗದಲ್ಲಿ ಯುವಕರ ಸೌಹಾರ್ದತೆಗೆ ಹಾಗೂ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ. ಇದು ರಾಜಕೀಯೇತರ ಸಂಘವಾಗಿದ್ದು, ಸದಸ್ಯತ್ವದ ವಯೋಮಿತಿಯನ್ನು ಶೀಘ್ರವೇ ತೀರ್ಮಾನಿಸಲಾಗುವುದು. ಕ್ರೀಡೆ, ಸಾಂಸ್ಕೃತಿಕ, ನಾಯಕತ್ವ ಪ್ರತಿಭೆ ಹೆಚ್ಚಿಸಲು ಅವಕಾಶ ಕಲ್ಪಿಸಲಾಗುವುದು. ರಾಜಕೀಯ ಹಸ್ತಕ್ಷೇಪ ವಿಲ್ಲದೇ ಸಂಘಗಳ ರಚನೆಗೆ ಶೀಘ್ರವೇ ಮಾರ್ಗಸೂಚಿ ಹೊರಡಿಸಲಾಗುವುದು. ಪ್ರತಿ ಸಂಘಕ್ಕೆ ವಾರ್ಷಿಕ 10 ಲಕ್ಷ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ಪ್ರಧಾನಿ ಮೋದಿ ಕಿವಿಮಾತು: ಬಿಡದಿ ಟೌನ್ ಶಿಪ್ ವಿಚಾರವಾಗಿ ಕಾನೂನು ಹೋರಾಟ ಮಾಡುವ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಎಚ್ಚರಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ ಡಿ.ಕೆ. ಶಿವಕುಮಾರ್, ಅವರಿಗೆ ಶುಭ ಕೋರುತ್ತೇನೆ. ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲೇ ಈ ಟೌನ್ ಶಿಪ್ ಆಗುತ್ತಿದೆ. ನಿನ್ನೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಅವರು, ನಾನು ಕೂಡ ಏಳೆಂಟು ಟೌನ್ ಶಿಪ್ ಮಾಡಿದ್ದೆ. ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ಬೆಂಗಳೂರಿನ ಒತ್ತಡ ಕಡಿಮೆ ಮಾಡುತ್ತಿದ್ದೀರಿ ಎಂದು ನನಗೆ ಕಿವಿಮಾತು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ನಮ್ಮ ಆಚಾರ ವಿಚಾರವನ್ನು ಪ್ರಧಾನ ಮಂತ್ರಿಗಳು ಯಾವ ರೀತಿ ಒಪ್ಪಿಕೊಂಡಿದ್ದಾರೆ, ನಮ್ಮ ಮಾತನ್ನು ಹೇಗೆ ಉದಾಹರಣೆಯಾಗಿ ತೆಗೆದುಕೊಂಡಿದ್ದಾರೆ ಎಂದು ಅಲ್ಲಿದ್ದ ನಮ್ಮ ವಿರುದ್ಧ ಟೀಕೆ ಮಾಡುವ ನಾಯಕರನ್ನೇ ಕೇಳಿ ಎಂದು ತಿರುಗೇಟು ನೀಡಿದರು.

ಮತದಾನದ ಹಕ್ಕಿಲ್ಲದೆ ಸೌಲಭ್ಯ ತಲುಪದು

ಮತದಾನದ ಹಕ್ಕಿಲ್ಲವಾದರೆ, ಸರ್ಕಾರದ ಐದು ಗ್ಯಾರಂಟಿಗಳು, ಸರ್ಕಾರದ ಪಿಂಚಣಿ ಹಾಗೂ ಇತರೆ ಸೌಲಭ್ಯಗಳು ತಲುಪುವುದಿಲ್ಲ. ಹೀಗಾಗಿ ಕಡ್ಡಾಯವಾಗಿ ಮತದಾನದ ಹಕ್ಕನ್ನು ಉಳಿಸಿಕೊಳ್ಳಬೇಕು. ಅಧಿಕಾರಿಗಳು ಎಸ್‌ಐಆರ್ ಬಗ್ಗೆ ಪ್ರತಿ ಪಂಚಾಯ್ತಿ ಹಾಗೂ ಬೂತ್ ಮಟ್ಟದಲ್ಲಿ ಮಾರ್ಗದರ್ಶನ ನೀಡಬೇಕು. ಹಳ್ಳಿಯಿಂದ ವಿಧಾನಸೌಧದವರೆಗೂ ಭ್ರಷ್ಟಾಚಾರ ಮುಕ್ತವಾಗಬೇಕು. ಈಗ ಯಾವ ಪರ್ಸೆಂಟೇಜ್ ಇಲ್ಲ. ಜೀರೋ ಪರ್ಸೆಂಟೇಜ್ ತರುತ್ತೇವೆ.

-ಸಿಎಂ ಡಿ.ಕೆ.ಶಿವಕುಮಾರ್

ನಾನ್ ವೆಜ್ ಪಾರ್ಸೆಲ್‌ಗೆ ಸಾಸ್ ನೀಡಿಲ್ಲವೆಂದು ಹೋಟೆಲ್ ಸಿಬ್ಬಂದಿಗೆ ಅವಾಜ್



ಹೋಟೆಲ್ ಸಿಬ್ಬಂದಿಗೆ ಅವಾಜ್ ಹಾಕುತ್ತಿರುವ ಸಿಸಿಟಿವಿ ದೃಶ್ಯ

ಮೈಸೂರು, ಜೂ.13(ಬಿಎಲ್‌ಯು)– ನಾನ್ ವೆಜ್ ಪಾರ್ಸೆಲ್‌ನಲ್ಲಿ ಮಯೊನೈಸ್ ಸಾಸ್ ನೀಡಿಲ್ಲವೆಂದು ಹೋಟೆಲ್ ಮಾಲೀಕನೊಬ್ಬ ಪಕ್ಕದ ಹೋಟೆಲ್‌ಗೆ ನುಗ್ಗಿ ಸಿಬ್ಬಂದಿಗೆ ಏರು ಧ್ವನಿಯಲ್ಲಿ ಅವಾಚ್ಯ ಶಬ್ದಗಳಿಂದ ಅವಾಜ್ ಹಾಕಿರುವ ಘಟನೆ ಮೈಸೂರಿನ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಬಳಿ ಸಂಭವಿಸಿದೆ. ಗ್ರಾಹಕ, ಹೋಟೆಲ್‌ನಲ್ಲಿ ದರ್ಪ ಮೆರೆದಿರುವುದು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಬಳಿಯ ಧಂ ಬಿರಿಯಾನಿ ಹೋಟೆಲ್ ಮಾಲೀಕ ಶ್ರೀನಿವಾಸ್ ದರ್ಪ ಮೆರೆದಿರುವ ವ್ಯಕ್ತಿಯಾಗಿದ್ದಾನೆ.

ತನ್ನ ಹೋಟೆಲ್ ಬಾಗಿಲು ಹಾಕಿದ್ದರಿಂದ ಶ್ರೀನಿವಾಸ್ ಸನಿಹದ ಚಾಮುಂಡೇಶ್ವರಿ ದೊನ್ನೆ ಬಿರಿಯಾನಿ ಹೋಟೆಲ್‌ನಲ್ಲಿ ಚಿಕನ್ ತಂದೂರಿ ಪಾರ್ಸೆಲ್ ಕೊಂಡೊಯ್ದಿದ್ದಾನೆ. ಕೆಲ ಸಮಯದ ನಂತರ ಮತ್ತೆ ಆ ಹೋಟೆಲ್‌ಗೆ ಬಂದ ಶ್ರೀನಿವಾಸ್ ತಂದೂರಿ ಚಿಕನ್‌ಗೆ ಮಯೊನೈಸ್ ಸಾಸ್ ಏಕೆ ಹಾಕಿಲ್ಲ ಎಂದು ಏರು ಧ್ವನಿಯಲ್ಲಿ ಅವಾಜ್ ಹಾಕಿದ್ದಾನೆ.

ಪಾರ್ಸೆಲ್‌ಗೆ ಸಾಸ್ ನೀಡುವುದಿಲ್ಲ ಎಂದು ಹೋಟೆಲ್ ಸಿಬ್ಬಂದಿ ಸಮಜಾಯಿಷಿ ನೀಡಿದರೂ ಕೇಳದ ಶ್ರೀನಿವಾಸ್ ಸಿಬ್ಬಂದಿಯನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ಧಮ್ಕಿ ಹಾಕಿದ್ದಾನೆ. ಶ್ರೀನಿವಾಸ್ ದರ್ಪ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಈ ಸಂಬಂಧ ಚಾಮುಂಡೇಶ್ವರಿ ದೊನ್ನೆ ಬಿರಿಯಾನಿ ಮಾಲೀಕ ಚೇತನ್ ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಹೀರೋ ವುಮೆನ್ಸ್ ಪ್ರೊ ಗಾಲ್ಫ್ ಟೂರ್–2026ರ ಪ್ರಶಸ್ತಿ ಗೆದ್ದ ಅನ್ವಿತಾ ನರೇಂದರ್

ಪ್ಲೇ ಆಫ್‌ನಲ್ಲಿ ಒಲಿದ ಚಾಂಪಿಯನ್ ಪಟ್ಟ



ಹೀರೋ ವುಮೆನ್ಸ್ ಪ್ರೊ ಗಾಲ್ಫ್ ಟೂರ್–2026ರ ಪ್ರಶಸ್ತಿ ಮುಡಿಗೇರಿಸಿಕೊಂಡ ಯುವ ಗಾಲ್ಫರ್ ಅನ್ವಿತಾ ನರೇಂದರ್



ಅನ್ವಿತಾ ನರೇಂದರ್ ಆಟದ ವೈಖರಿ.

ಮೈಸೂರು, ಜೂ.13(ವಿವಿಹೆಚ್)– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಹೀರೋ ವುಮೆನ್ಸ್ ಪ್ರೊ ಗಾಲ್ಫ್ ಟೂರ್–2026ರ ಏಳನೇ ಹಂತದ ಟೂರ್ನಿಯಲ್ಲಿ ಯುವ ಗಾಲ್ಫರ್ ಅನ್ವಿತಾ ನರೇಂದರ್ ಚಾಂಪಿಯನ್ ಪಟ್ಟ ಅಲಂಕರಿಸಿದರು.

ಕೊನೆಯ ಕ್ಷಣದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಅನುಭವಿ ಆಟಗಾರ್ತಿ ವಾಣಿ ಕಪೂರ್ ಅವರನ್ನು ರೋಚಕ ಪ್ಲೇ–ಆಫ್‌ನಲ್ಲಿ ಮಣಿಸಿದ ಅನ್ವಿತಾ, ತಮ್ಮ ವೃತ್ತಿಜೀವನದ ಎರಡನೇ ಪ್ರಶಸ್ತಿಯನ್ನು ಗೆದ್ದು ಸಂಭ್ರಮಿಸಿದರು.

ಅಂತಿಮ ಸುತ್ತಿನಲ್ಲಿ ಅನ್ವಿತಾ 1 ಅಂಡರ್ ಪಾರ್ 69 ಹೊಡೆದರೆ, ವಾಣಿ ಕಪೂರ್ ಅದ್ಭುತ ಪ್ರದರ್ಶನ ನೀಡಿ 6 ಅಂಡರ್ ಪಾರ್ 64 ದಾಖಲಿಸಿದರು. ಇಬ್ಬರೂ ಒಟ್ಟು 210 ಅಂಕಗಳೊಂದಿಗೆ ಸಮಬಲ ಸಾಧಿಸಿದ ಕಾರಣ ಪ್ರಶಸ್ತಿಗಾಗಿ ಪ್ಲೇ–ಆಫ್ ನಡೆಯಿತು. ಇದರ ಪರಿಣಾಮ ಚಾಂಪಿಯನ್ ನಿರ್ಧಾರಕ್ಕಾಗಿ ಪ್ಲೇ–ಆಫ್ ಮೊರೆ ಹೋಗಬೇಕಾಯಿತು.

ವಿಜಯದ ಬಳಿಕ ಮಾತನಾಡಿದ ಯುವ ಗಾಲ್ಫರ್ ಅನ್ವಿತಾ, ಈ ಗೆಲುವು ನನ್ನ ಪಾಲಿಗೆ ಮಹತ್ವದ್ದು. ಮೈಸೂರು ನನ್ನ ಎರಡನೇ ಮನೆಯಂತೆ. ನನ್ನ ಸ್ನೇಹಿತರು, ಹಿತೈಷಿಗಳು ಇಲ್ಲಿದ್ದಾರೆ. ಇಲ್ಲಿ ಗೆಲುವು ಸಾಧಿಸಿರುವುದು ಇನ್ನಷ್ಟು ವಿಶೇಷವಾಗಿದೆ ಎಂದು ಹೇಳಿದರು.

2024ರಲ್ಲಿ ಮೊದಲ ವೃತ್ತಿಪರ ಪ್ರಶಸ್ತಿಯನ್ನು ತವರು ಮೈದಾನದಲ್ಲಿ ಗೆದ್ದಿದ್ದರೂ, ಈ ಬಾರಿ ಹೊಸ ಹಾಗೂ ಮೈದಾನದಲ್ಲಿ ಸಾಧಿಸಿದ ಪರಿಚಯವಿಲ್ಲದ ಜಯ ಹೆಚ್ಚು ತೃಪ್ತಿ ತಂದಿದೆ. ಇಲ್ಲಿ ಎಲ್ಲವೂ ಹೊಸದಾಗಿತ್ತು. ಮೈದಾನ, ಗ್ರೀನ್ಸ್ ಹಾಗೂ ಪರಿಸ್ಥಿತಿಗಳು. ಈ ಸವಾಲನ್ನು ನಾನು ಆನಂದಿಸಿದೆ ಮತ್ತು ನನ್ನ ಆಟದ ಬಗ್ಗೆ ಹೆಮ್ಮೆ ಇದೆ ಎಂದು ಗೆಲುವು ಕುರಿತು 'ಮೈಸೂರು ಮಿತ್ರ'ನಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.

ನಿಯಮಿತ ಆಟದ 18ನೇ ಹೋಲ್‌ಗೆ ಅನ್ವಿತಾ ಮುನ್ನಡೆಯಲ್ಲೇ ಪ್ರವೇಶಿಸಿದ್ದರು. ಪ್ರಶಸ್ತಿ ಗೆಲ್ಲಲು ಅವರಿಗೆ ಕೇವಲ ಪಾರ್ ಸಾಕಾಗಿತ್ತು. ಆದರೆ ಆ ಹೋಲ್‌ನಲ್ಲಿ ಬೋಗಿ ಮಾಡಿದ ಪರಿಣಾಮ ವಾಣಿ ಕಪೂರ್ ಅವರೊಂದಿಗೆ ಸಮಬಲಕ್ಕಿಳಿದರು. ಮತ್ತೊಂದೆಡೆ, ಅಂತಿಮ ಗುಂಪಿನಲ್ಲಿ ಆಡಿದ ರಿಯಾ ಜಾಡೋನ್ 17ನೇ ಹೋಲ್‌ನಲ್ಲಿ ಬೋಗಿ ಮಾಡಿದ ಕಾರಣ ಪ್ಲೇ–ಆಫ್ ಪ್ರವೇಶಿಸುವ ಅವಕಾಶ ಕಳೆದುಕೊಂಡು 211 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು.

ಪ್ಲೇ–ಆಫ್‌ನ ಮೊದಲ ಹೋಲ್‌ನಲ್ಲಿ ಅನ್ವಿತಾ ಹಾಗೂ ವಾಣಿ ಇಬ್ಬರೂ ಪಾರ್ ದಾಖಲಿಸಿದರು. ನಂತರ ಐದನೇ ಹೋಲ್‌ನಲ್ಲಿ ನಡೆದ ಎರಡನೇ ಪ್ಲೇ–ಆಫ್‌ನಲ್ಲಿ ಅನ್ವಿತಾ ನಿರ್ಣಾಯಕ ಬರ್ಡಿ ಸಾಧಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ವಾಣಿ ಕಪೂರ್ ರನ್ನರ್ ಅಪ್‌ಗೆ ತೃಪ್ತಿ ಪಟ್ಟುಕೊಂಡರು.

ಇನ್ನೊಂದೆಡೆ, ಖುಷಿ ಖಾನಿಜೌ 68 ಅಂಕಗಳೊಂದಿಗೆ ದಿನದ ಎರಡನೇ ಅತ್ಯುತ್ತಮ ಸುತ್ತು ದಾಖಲಿಸಿ ಅಮನ್‌ದೀಪ್ ದ್ರಾಲ್ ಹಾಗೂ ವಿದಾತ್ರಿ ಅರಸ್ ಅವರೊಂದಿಗೆ ನಾಲ್ಕನೇ ಸ್ಥಾನ ಹಂಚಿಕೊಂಡರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೆಡಬ್ಲ್ಯುಜಿಸಿ ಅಧ್ಯಕ್ಷ ಎಚ್.ಎಸ್. ಅರುಣ್ ಕುಮಾರ್, ಕ್ಯಾಪ್ಟನ್ ಎಂ.ಎಸ್. ಯಶವಂತ್, ಟೂರ್ನಮೆಂಟ್ ಸಮಿತಿ ಅಧ್ಯಕ್ಷ ಫಲ್ಗುಣ ವಿ. ಉರ್ಸ್, ಕಾರ್ಯದರ್ಶಿ ಕೆ.ಎಸ್. ಸುಧೀರ್ ಭಟ್, ಖಜಾಂಚಿ ಡಿ.ವಿ.ಶ್ರೀಧರ್ ಹಾಗೂ ಸಮಿತಿಯ ಇತರ ಸದಸ್ಯರು ಉಪಸ್ಥಿತರಿದ್ದರು.

ಜೂ.20 ರಂದು ಯೋಗ ರಸಪ್ರಶ್ನೆ, ಚಿತ್ರಕಲಾ ಸ್ಪರ್ಧೆ

ಮೈಸೂರು,ಜೂ. 13–ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ, ಮೈಸೂರಿನ ಜಯನಗರದ ಪಂಪಾಪತಿ ರಸ್ತೆಯಲ್ಲಿರುವ ವಿವೇಕಾನಂದ ಕೇಂದ್ರದಲ್ಲಿ ಯೋಗಕ್ಕೆ ಸಂಬಂಧಿಸಿದ ರಸಪ್ರಶ್ನೆ ಮತ್ತು ಯೋಗ ದಿನದ ಲೋಗೋ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಜೂ. 20 ರ ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9449488228 ಸಂಪರ್ಕಿಸಬಹುದು.

ಹೆತ್ತವರ ಮಾತು ಧಿಕ್ಕರಿಸಬೇಡಿ, ಹಿರಿಯರ ಮಾರ್ಗದರ್ಶನ ಪಾಲಿಸಿ

ಬಾಲ ಕೃಷ್ಣನ ಕಥೆ ಮೂಲಕ ಜೀವನ ಸಂದೇಶ ತಿಳಿಸಿದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ



ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಉತ್ತರಾದಿ ಮಠವು ಶನಿವಾರ ಹಮ್ಮಿಕೊಂಡಿದ್ದ ಧನ್ವಂತರಿ ಮಹಾಯಾಗದ ಪೂರ್ಣಾಹುತಿ ಸಂದರ್ಭದಲ್ಲಿ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಪೂಜೆ ಸಮರ್ಪಿಸಿದರು. ಪಂಡಿತ ಬಾದರಾಯಣಾಚಾರ್ಯ, ಶಶಿ ಆಚಾರ್ಯ ಮತ್ತಿತರರಿದ್ದರು.

ಮೈಸೂರು, ಜೂ.13– ಮಕ್ಕಳು ಹೆತ್ತವರ ಮಾತನ್ನು ಕೇಳಬೇಕು. ಸದಾ ಹಿರಿಯರ ಮಾರ್ಗದರ್ಶನದಲ್ಲೇ ಜೀವನ ನಡೆಸಬೇಕು ಎಂದು ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ತಿಳಿ ಹೇಳಿದರು.

ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಉತ್ತರಾದಿ ಮಠವು ಅಗ್ರಹಾರದ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣದ ಬೃಹತ್ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಧರ್ಮ ಸಭೆಯಲ್ಲಿ ಅವರು ಭಾಗವತ ಸಂದೇಶ ನೀಡಿದರು.

ಗೋಕುಲದಲ್ಲಿ ಬೆಳೆಯುತ್ತಿದ್ದ ಶ್ರೀ ಕೃಷ್ಣ, ಎಲ್ಲರ ಮನೆಯಲ್ಲಿ ಮೊಸರು, ಬೆಣ್ಣೆ ಕದಿಯುತ್ತಿದ್ದ. ಇದರಲ್ಲಿ ಯಾವ ವಸ್ತು ಅತ್ಯಂತ ಶ್ರೇಷ್ಠವೋ ಅದು ಭಗವಂತನಿಗೆ ಅರ್ಪಣೆ ಆಗಬೇಕು ಎಂಬ ತಾತ್ಪರ್ಯ ಅಡಗಿದೆ. ಕೃಷ್ಣ ಬರುತ್ತಾನೆ ಎಂದೇ ಕೆಲವರು ಮೊಸರು, ಬೆಣ್ಣೆಯನ್ನು ಇಡುತ್ತಿರಲಿಲ್ಲ. ಅಂಥವರ ಮನೆಯ ಮಕ್ಕಳನ್ನು ಚಿವುಟಿ ಹೋಗುತ್ತಿದ್ದ. ಆ ಮೂಲಕ ದೇವರ ನೈವೇದ್ಯಕ್ಕೆ ಉತ್ತಮ ವಸ್ತುಗಳನ್ನು ಸಮರ್ಪಣೆ ಮಾಡದಿದ್ದರೆ ಮನೆಯಲ್ಲಿ ಗೋಳು ತಪ್ಪಿದ್ದಲ್ಲ ಎಂಬ ಸಂದೇಶ ಸಾರಿದ ಎಂದು ದಶಮ ಸ್ಕಂದದಲ್ಲಿ ಬರುವ ಬಾಲ ಕೃಷ್ಣನ ಕಥೆಯನ್ನು ನಿರೂಪಿಸಿದರು.

ಸಾಕ್ಷಾತ್ ಭಗವಂತನೇ ಆಗಿದ್ದರೂ ತಾಯಿ ಯಶೋಧೆಯಿಂದ ಪೆಟ್ಟು ತಿಂದ. ಆಕೆಯು ಒರಳಿಗೆ ಕಟ್ಟಿ ಹಾಕಿದರೂ ಸುಮ್ಮನಿದ್ದ. ಮಕ್ಕಳಿಗೆ ಹಿರಿಯರು ದಂಡನೆ ಮಾಡಬೇಕು. ಅದನ್ನು ಎಳೆಯರು ಒಪ್ಪಿಕೊಳ್ಳಬೇಕು ಎಂಬ ಸಂದೇಶ ಇದರಲ್ಲಿ ಅಡಕವಾಗಿದೆ. ಮಣ್ಣು ತಿಂದ ಎಂದು ತಾಯಿ ಏಟು ಕೊಟ್ಟಳು. ಇಡೀ ಬ್ರಹ್ಮಾಂಡವೇ ನನ್ನ ಒಳಗೆ ಇದೆ ಎಂದು ಆಕೆಗೆ ದರ್ಶನ ಮಾಡಿಸಿದ. ಹೀಗೆ ಚಿಕ್ಕವರು ಮತ್ತು ದೊಡ್ಡವರು ಹೇಗೆ ಇರಬೇಕು, ನಮ್ಮ ಜೀವನದ ಉದ್ದೇಶ ಯಾವುದಾಗಿರಬೇಕು ಎಂದು ಭಾಗವತ ಸಂದೇಶ ತಿಳಿಸಿದೆ. ಕೃಷ್ಣನ ಕಥೆ ಕೇವಲ ದ್ವಾಪರ ಯುಗಕ್ಕೆ ಮಾತ್ರ ಸೀಮಿತವಲ್ಲ, ಇಂದಿನ ನಮ್ಮೆಲ್ಲರ ಜೀವನ ಪಾವನವಾಗಲೂ ಪ್ರೇರಕವಾಗಿದೆ ಎಂದು ಸ್ವಾಮೀಜಿ ತಿಳಿಸಿದರು.

ಪೂಜಾ ಕೈಂಕರ್ಯ: ಮುಂಜಾನೆ ಶ್ರೀಗಳಿಗೆ ಪಾದಪೂಜೆ, ಮುದ್ರಾಧಾರಣೆ, ಶ್ರೀಗಳಿಂದ ಸಂಸ್ಥಾನ ಪೂಜೆ ನೆರವೇರಿತು. ಪಂಡಿತ ಬಾದರಾಯಣಾಚಾರ್ಯ–ಭಾಗ್ಯ ದಂಪತಿ ನೇತೃತ್ವದಲ್ಲಿ ನೂರಾರು ಭಕ್ತ ದಂಪತಿಗಳು ಶ್ರೀ ಧನ್ವಂತರಿ ಹೋಮ ಮಾಡಿದರು. ಪೂರ್ಣಾಹುತಿ ಸಂದರ್ಭದಲ್ಲಿ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಮಹಾ ಮಂಗಳಾರತಿ ನೆರವೇರಿಸಿದರು. ಸಂಜೆ ಬೆಂಗಳೂರಿನ ಶ್ರೀವಾರಿ ಫೌಂಡೇಷನ್‌ನ ವೆಂಕಟೇಶಮೂರ್ತಿ ಮತ್ತು ತಂಡದವರಿಂದ 2 ಗಂಟೆ ಕಾಲ ಶ್ರೀನಿವಾಸ ಕಲ್ಯಾಣ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ನೂರಾರು ಭಕ್ತರು ಇದಕ್ಕೆ ಸಾಕ್ಷಿಯಾದರು. ಪಂಡಿತರಾದ ಗುತ್ತಲ ರಂಗಾಚಾರ್ಯ, ಸತ್ಯಧ್ಯಾನಾಚಾರ್ಯ ಕಟ್ಟಿ, ಅನಿರುದ್ಧಾಚಾರ್ಯ ಇತರರು ಹಾಜರಿದ್ದರು. ಅಧಿಕಮಾಸದಲ್ಲಿ ವಿಶೇಷ ಸೇವೆ ಸಲ್ಲಿಸಿದ ಸ್ವಯಂಸೇವಕರಿಗೆ ಶ್ರೀಗಳು ಗೌರವಿಸಿದರು.

ಭಾರತದ ಮುಂದಿನ ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ನೇಮಕ

ನವದೆಹಲಿ: ಭಾರತದ ಮುಂದಿನ ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರನ್ನ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಧೀರಜ್ ಸೇಠ್ ಅವರು ಜೂ.30 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ಸೇನೆಯ ಹಾಲಿ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ ಅವರ ನಿವೃತ್ತಿಯ ಬಳಿಕ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಶನಿವಾರ ಕೇಂದ್ರ ಸರ್ಕಾರ ಹೇಳಿದೆ.

ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಪ್ರಸ್ತುತ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೂನ್ 30 ರಂದು ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದು, 2028ರ ಆಗಸ್ಟ್ 31ರವರೆಗೆ ಅಧಿಕಾರದಲ್ಲಿ ಇರಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ಆದೇಶ ಪತ್ರದಲ್ಲಿ ತಿಳಿಸಿದೆ.

ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಳೆಯ ವಿದ್ಯಾರ್ಥಿ ಮತ್ತು ಆರ್ಮರ್ಡ್ ಕಾರ್ಪ್ಸ್ ಅಧಿಕಾರಿಯಾಗಿರುವ ಲೆಫ್ಟಿನೆಂಟ್ ಜನರಲ್ ಸೇಠ್, 40 ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.


ಅಭಿನಂದನೆ–ಆಹ್ವಾನ



ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ ಸಮಿತಿ ವತಿಯಿಂದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಅವರ ಪತ್ನಿ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಲಿತ ಜಿ.ಟಿ.ದೇವೇಗೌಡ ಅವರನ್ನು ಅಭಿನಂದಿಸಿ, ಕೆಂಪೇಗೌಡರ ಜಯಂತಿಗೆ ಆಹ್ವಾನಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಗೌಡ, ನಿರ್ದೇಶಕ ಮಂಜೇಗೌಡ, ನಗರಪಾಲಿಕೆ ಮಾಜಿ ಸದಸ್ಯೆ ಪ್ರೇಮ ಶಂಕರೇಗೌಡ, ಲಕ್ಷ್ಮಿದೇವಿ, ಚೇತನ್, ಎ.ರವಿ, ರಾಕೇಶ್ ಗೌಡ, ಮರೀಗೌಡ, ಶ್ರೀನಿವಾಸ್ ಮತ್ತಿತರರಿದ್ದರು.

ಮಕ್ಕಳ ಪ್ರತಿಭೆ ಹೊರ ಬರಲು ಪೋಷಕರು, ಶಿಕ್ಷಕರು ಅವಕಾಶ ಕಲ್ಪಿಸಬೇಕು

- ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಕಿವಿಮಾತು
- ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಅಂಕಗಳನ್ನು ಪಡೆದ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಜೂ.13(ವಿವಿಹೆಚ್)– ಸೃಜನಾತ್ಮಕ ಚಟುವಟಿಕೆ ಮೂಲಕ ಮಕ್ಕಳ ಪ್ರತಿಭೆ ಅನಾವರಣಕ್ಕೆ ಪೋಷಕರು ಮತ್ತು ಶಿಕ್ಷಕರು ಅವಕಾಶ ಕಲ್ಪಿಸಬೇಕು ಎಂದು ದೆಹಲಿಯ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಭಿಪ್ರಾಯಪಟ್ಟರು.

ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ನಗರದ ಹೋಟೆಲ್ ಪೈ–ವಿಸ್ಟಾ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯಂತ ಅಧಿಕ ಅಂಕಗಳನ್ನು ಪಡೆದ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವಿದ್ದೇವೆ. ಇಲ್ಲಿ ಮತ್ತೊಬ್ಬರಂತೆ ನಾವೂ ನಮ್ಮ ಗುರಿಗಾಗಿ/ಸಾಧನೆಗೆ ಪ್ರಯತ್ನಿಸದೇ ಹೋದಲ್ಲಿ ಸೋಲು ಕಟ್ಟಿಟ್ಟ ಬುತ್ತಿ. ಹೀಗಾಗಿ ಎಲ್ಲರೂ ಈ ಕಾಲಘಟ್ಟಕ್ಕೆ ಹೊಂದಿ ಕೊಂಡು ಬದುಕುವುದನ್ನು ಕಲಿಯಬೇಕು. ಶಾಲಾ ಹಂತದಲ್ಲಿಯೇ ಸ್ಪರ್ಧಾ ಮನಸ್ಥಿತಿಯನ್ನು ಬೆಳೆಸಿಕೊಳ್ಳುವ ಮಕ್ಕಳು ಜೀವನ ದಲ್ಲಿ ಬಹಳ ಎತ್ತರಕ್ಕೆ ಬೆಳೆಯುತ್ತಾರೆ ಎಂದು ಕಿವಿಮಾತು ಹೇಳಿದರು.

ಪೋಷಕರಾದವರು ಮಕ್ಕಳ ಸರ್ವತೋಮುಖ ಬೆಳವಣಿಗೆಯತ್ತ ಗಮನಹರಿಸಬೇಕು. ಚಿಕ್ಕ ಚಿಕ್ಕ ಗುರಿ ಮತ್ತು ಲಕ್ಷ್ಯ ಇಟ್ಟುಕೊಂಡು ಮುಂದೆ ಸಾಗುವಂತೆ ಪೋಷಕರು ಪ್ರೋತ್ಸಾಹಿಸಬೇಕು. ಮಕ್ಕಳ ಮೇಲೆ ಅನಗತ್ಯ ಒತ್ತಡ ಹೇರದೇ, ಮನಸನ್ನು ನಿರಾಳಗೊಳಿಸಿ, ಮೌಲ್ಯಾಧಾರಿತ ಶಿಕ್ಷಣ ಕೊಡಿಸಿ, ಆಗ ಅವರೆ ಓದಲು ಮುಂದಾಗುತ್ತಾರೆ ಎಂದು ಸಲಹೆ ನೀಡಿದರು.

ಮೊಬೈಲ್ ಗೀಳು ಆಧುನಿಕ ವಿದ್ಯಮಾನದಲ್ಲಿ ಕಂಟಕವಾಗಿರುವ ಒಂದು ಸಾಧನ. ಮಕ್ಕಳಲ್ಲಿ ಮೊಬೈಲ್ ಅಡಿಕ್ಷನ್ ಹೆಚ್ಚಾಗಿ ಕಂಡುಬರುತ್ತಿದೆ. ಮೊಬೈಲ್ ಒಂದು ಉತ್ತಮ ಸಾಧನವಾಗಿದ್ದು, ಪೋಷಕರು ಅದನ್ನು ಬಳಸುವ ರೀತಿಯ ಬಗ್ಗೆ ಮಕ್ಕಳಿಗೆ ತಿಳಿ ಹೇಳಬೇಕು. ಮನೆಯಲ್ಲಿಯೇ ಸ್ಕ್ರೀನ್ ಟೈಮ್ ಹಾಕುವ ಮೂಲಕ ಅನಗತ್ಯ ಮೊಬೈಲ್ ಬಳಕೆಗೆ ಕಡಿವಾಣ ಹಾಕಬೇಕು ಎಂದರು.

ಮಕ್ಕಳು ಹೆಚ್ಚಾಗಿ ಮೊಬೈಲ್ ನೋಡುವುದರಿಂದ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಆನ್‌ಲೈನ್ ಗೇಮ್‌ಗಳು, ಕೊಲೆ, ಸುಲಿಗೆ, ಅಮಾನವೀಯ ಘಟನೆಗಳು ಒಳಗೊಂಡಂತೆ ಅನಗತ್ಯ ವಿಚಾರಗಳನ್ನು ನೋಡುವ ಮೂಲಕ ದಾರಿ ತಪ್ಪುವ ಸನ್ನಿವೇಶಗಳು ಹೆಚ್ಚಾಗಿ ಕಂಡುಬರುತ್ತಿದೆ. ಪೋಷಕರು ಈ ಬಗ್ಗೆ ಗಮನಹರಿಸಬೇಕು. ಮಕ್ಕಳು ಮತ್ತು ಮೊಬೈಲ್ ನಡುವಣ ಸಂವಹನದ ಬಗ್ಗೆ ಸದಾ ಜಾಗೃತರಾಗಿರಬೇಕು ಎಂದು ಎಚ್ಚರಿಸಿದರು.

ನಂತರ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದ 21 ವಿದ್ಯಾರ್ಥಿಗಳು, ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿ ಪಡೆದ 20 ವಿದ್ಯಾರ್ಥಿಗಳು ಹಾಗೂ ಕ್ರೀಡಾ ವಿಭಾಗದಲ್ಲಿ ಉತ್ತಮ ಸಾಧನೆಗೈದ ಮೂವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮರ್ಚೆಂಟ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ವಿ.ಸೋಮಶೇಖರ್, ಉಪಾಧ್ಯಕ್ಷ ಎಂ.ಎನ್.ಮಹೇಶ್, ಪ್ರಧಾನ ವ್ಯವಸ್ಥಾಪಕ ಬಿ.ಪಿ.ಶಿವಕುಮಾರ್, ನಿರ್ದೇಶಕರಾದ ಆರ್. ಆನಂದ್, ಬಿ. ಆರ್. ನಂದೀಶ್, ಬಿ. ಕೋದಂಡರಾಮ್, ಎನ್. ಸುಧಾ, ವಿ. ಪ್ರಭುಪ್ರಸಾದ್, ಎನ್. ಕೆ. ಪ್ರೇಮಕುಮಾರ್, ಎನ್. ಕಣ್ಣನ್, ಸಿ. ಎಸ್. ಗಂಗಾಂಬಿಕೆ, ಆರ್. ಪಿ. ಕೃಷ್ಣಮೂರ್ತಿ, ರಾಘವ, ಎಸ್. ರಾಚಪ್ಪಾಜಿ, ಎಸ್. ಅನುರಾಧ, ಎಂ. ಆರ್. ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಆಸ್ಪತ್ರೆಯಲ್ಲಿ ಆಗ ತಾನೇ ಹುಟ್ಟಿದ ಮಗು

ಮಗು : ಡಾಕ್ಟ್ರೇ ಸ್ವಲ್ಪ ಮೊಬೈಲ್ ಕೊಡ್ತಿರಾ?

ಡಾಕ್ಟರ್ : ಯಾಕೆ ಪುಟ್ಟ?

ಮಗು : ಏನಿಲ್ಲ ಡಾಕ್ಟ್ರೇ ನಾನು ಸೇಫಾಗಿ ಭೂಮಿಗೆ ಬಂದಿರುವೆ ಅಂತಾ ಸ್ಟೇಟಸ್ ಅಪ್‌ಡೇಟ್ ಮಾಡಬೇಕಾಗಿದೆ, ಅರ್ಜೆಂಟಾಗಿ...

ಮೈಸೂರು ಮಿತ್ರ

ಭಾನುವಾರ, ಜೂನ್ 14, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದೇವರು ಕಷ್ಟ ಕೊಟ್ಟು ಕಾಪಾಡುತ್ತಿದ್ದಾನೆ ಎಂದರೆ...
ನೀವು ಯಾರಿಗೂ ಕೆಟ್ಟದ್ದು ಬಯಸಿಲ್ಲ ಎಂದರ್ಥ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಇತರರ ಕಣ್ಣಿನ ಕಸ ಕಾಣುವುದು, ತನ್ನ ಕಣ್ಣಿನ ಕಸ ಕಾಣುವುದಿಲ್ಲ.

ನಿಮ್ಮ ಪತ್ರಗಳು

ತಮಿಳುನಾಡು ಮುಖ್ಯಮಂತ್ರಿಗೆ ನಾಡಿನ ದೇವತೆ ಮೇಲೆ ನಂಬಿಕೆ ಇದೆ; ಆದರೆ ನಾಡಿನ ಜನತೆಯೊಂದಿಗೆ ಸಹೋದರತ್ವ ಭಾವನೆ ಏಕಿಲ್ಲ?

ಮಾನ್ಯರೆ,

ಕರ್ನಾಟಕದ ಮೇಕೆದಾಟು ವಿಚಾರದಲ್ಲಿ ಸುಪ್ರೀಂಕೋರ್ಟ್ ಕರ್ನಾಟಕಕ್ಕೆ ಅಣೆಕಟ್ಟು ಕಟ್ಟಲು ಅವಕಾಶ ಮಾಡಿಕೊಟ್ಟಿದ್ದರೂ ತಮಿಳುನಾಡು ಮುಖ್ಯಮಂತ್ರಿ ಕೊಕ್ಕೆ ಹಾಕುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ತಮಿಳುನಾಡಿನ ಜನ ಸುಮ್ಮನಿದ್ದರೂ ಅಲ್ಲಿನ ಮಂತ್ರಿಯಾದವರಿಗೆ ಎರಡು ರಾಜ್ಯದ ನಡುವೆ ಸಹೋದರತ್ವ ಭಾವನೆಯನ್ನು ಉಳಿಸಿಕೊಳ್ಳಬೇಕೆಂಬ ಮನಸ್ಥಿತಿ ಇಲ್ಲ. ಎರಡು ರಾಜ್ಯದ ಜನರು ಕಿತ್ತಾಡಿಕೊಂಡಿದ್ದರೆ ಇವರಿಗೆ ಲಾಭ ಎನ್ನುವುದು ಅವರ ಮುಖ್ಯ ಗುರಿಯಾಗಿದೆ.

ಹಿಂದೆಯಿದ್ದ ಜಯಲಲಿತಾ ಕನ್ನಡಿಗರಾದರು ಸಹ ಕಾವೇರಿ ವಿಷಯದಲ್ಲಿ ಕ್ಯಾತೆ ತೆಗೆದು ಎರಡು ರಾಜ್ಯಗಳನ್ನು ಭಾರತ ಮತ್ತು ಪಾಕಿಸ್ತಾನದಂತೆ ಮಾಡಿಬಿಟ್ಟರು. ಈಗಲೂ ಸಹ ಕನ್ನಡ ನಾಡಿನವರು ತಮಿಳುನಾಡಿಗೆ ಹೋದರೆ ಗಲಾಟೆಗಳಾಗುತ್ತಿವೆ. ಇದಕ್ಕೆಲ್ಲಾ ಕಾರಣ ತಮಿಳುನಾಡಿನಲ್ಲಿ ರಾಜಕಾರಣಿಗಳು ಕಾವೇರಿ ಒಂದನ್ನೇ ಬಂಡವಾಳವಾಗಿಟ್ಟುಕೊಂಡು ರಾಜಕೀಯ ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿ? ಅಲ್ಲಿನ ವಿಚಾರವಾದಿಗಳಾಗಲಿ, ಕೆಲವು ಸಂಘಟನೆಗಳಾಗಲಿ ಇದರ ಬಗ್ಗೆ ಯೋಚನೆ ಮಾಡುವುದೇ ಇಲ್ಲ. ನಾವಿಬ್ಬರು ಸೌಹಾರ್ದತೆಯಿಂದ ಇರಬೇಕು, ನಾವೆಲ್ಲ ಒಂದು ಎನ್ನುವ ಭಾವನೆ ಅವರಿಗೆ ಬರುವುದಿಲ್ಲ.

ವಿಪರ್ಯಾಸವೆಂದರೆ ಕೆಲವು ವಿಚಾರವಾದಿಗಳು ರಾಜಕಾರಣಿಗಳ ಜೊತೆ ಬೆರೆತು ನಮ್ಮ ಮೇಲೆ ಹಗೆ ಸಾದಿಸುತ್ತಿದ್ದಾರೆ. ಈಗಿನ ಮುಖ್ಯಮಂತ್ರಿ ಅಲ್ಲಿನ ಜನರಿಗೆ ರಾಜ್ಯ ದಿವಾಳಿಯಾಗುವಂತಹ ಯೋಜನೆಯ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದಿದ್ದಾರೆ. ಮೇಕೆದಾಟು ವಿಷಯದಲ್ಲಿ ಕರ್ನಾಟಕಕ್ಕೆ ಅಣೆಕಟ್ಟು ಕಟ್ಟುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಒಬ್ಬ ಮುಖ್ಯಮಂತ್ರಿಯಾಗಿ ಸುಪ್ರೀಂಕೋರ್ಟ್ ಆದೇಶವನ್ನು ತಿರಸ್ಕಾರ ಮಾಡುತ್ತಿರುವುದು ಕಾನೂನಿಗೆ ತೋರುವ ಅಗೌರವವಾಗಿದೆ. ಇಂತಹ ಒಬ್ಬ ಮುಖ್ಯಮಂತ್ರಿಗೆ ಕರ್ನಾಟಕದ ದೇವತೆ ಮೇಲೆ ಅಷ್ಟು ನಂಬಿಕೆ ಯಾಕೆ?

ರಾಜ್ಯದ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಅವರನ್ನು ಮೇಕೆದಾಟುವಿಗೆ ಕರೆದುಕೊಂಡು ಹೋಗಿ ನದಿಯ ಬಗ್ಗೆ ಮಾಹಿತಿ ನೀಡಿ ಎಲ್ಲಿ ನೀರು ಪೋಲಾಗುತ್ತದೆ ಎಂದು ವಿವರಿಸಬೇಕು. ಸತ್ಕಾರ ಮಾಡಿದರೆ ಏನು ಪ್ರಯೋಜನ?

ಅವರು ಇಲ್ಲಿಗೆ ಬಂದರೆ ನಮ್ಮ ನಾಡಿನ ಜನರ ತೆರಿಗೆ ನಷ್ಟವಾಗುತ್ತದೆಯೇ ಹೊರತು ಯಾವುದೇ ಉಪಯೋಗವಾಗುವುದಿಲ್ಲ. ಯಾವುದೇ ರಾಜ್ಯದ ಮುಖ್ಯಮಂತ್ರಿ ನಮ್ಮ ರಾಜ್ಯಕ್ಕೆ ಬಂದಾಗ ಅವರಿಂದ ನಮ್ಮ ರಾಜ್ಯಕ್ಕೆ ಉಪಯೋಗವಾಗುವಂತಹ ಒಪ್ಪಂದಗಳು ಆಗಬೇಕು. ಆಗ ನಮ್ಮಿಬ್ಬರ ನಡುವೆ ಸಹೋದರತ್ವ ಭಾವನೆ ಬೆಳೆಯುತ್ತದೆ, ಜೊತೆಗೆ ಎರಡು ರಾಜ್ಯಗಳು ಉದ್ಧಾರವಾಗುತ್ತವೆ. ತಮಿಳುನಾಡಿನ ಮುಖ್ಯಮಂತ್ರಿಗೆ ಈ ಅರಿವು ಇರಬೇಕು. ಈಗಲಾದರೂ ಕೊಲ್ಲೂರು ಮೂಕಾಂಬಿಕೆ ಎರಡು ರಾಜ್ಯಗಳ ಸಹೋದರತ್ವ ಭಾವನೆಯನ್ನು ಉಳಿಸಿಕೊಳ್ಳುವ ಸದ್ಬುದ್ಧಿಯನ್ನು ಅವರಿಗೆ ನೀಡಲಿ. **–ಎಸ್.ಬಾಲಕೃಷ್ಣ, ಅಧ್ಯಕ್ಷರು, ಮೈಸೂರು ಕನ್ನಡ ವೇದಿಕೆ**

ಇಲ್ಲೊಂದು ರಸ್ತೆ ಡುಬ್ಬದ ಅವಶ್ಯಕತೆ ಇದೆ

ಮಾನ್ಯರೆ,

ಕೆಲ ತಿಂಗಳ ಹಿಂದೆ ಓದುಗರೊಬ್ಬರು ವಿಜಯನಗರದ ವಾಟರ್ ಟ್ಯಾಂಕ್‌ನಿಂದ ತ್ರಿನೇತ್ರ ವೃತ್ತದ ಕಡೆಗೆ ಹೋಗುವ ರಸ್ತೆಯಲ್ಲಿ ಸಪ್ತಗಿರಿ ಗ್ಲಾಸ್ ಎಂಬ ಅಂಗಡಿಯ ಮುಂಭಾಗದಲ್ಲಿ ರಸ್ತೆ ಡುಬ್ಬದ ಅವಶ್ಯಕತೆ ಇರುವುದರ ಬಗ್ಗೆ ಬರೆದಿದ್ದರು. ಆದಾಗ್ಯೂ ಇಲ್ಲಿ ಇದುವರೆಗೂ ಕ್ರಮ ಕೈಗೊಂಡಿಲ್ಲ. ಮೂಲೆಯಲ್ಲಿರುವ ಜೆರಾಕ್ಸ್ ಅಂಗಡಿಗೆ ಬರುವ ವಿದ್ಯಾರ್ಥಿಗಳು, ಅಲ್ಲೇ ನಿಲ್ಲಿಸುವ ವಾಹನಗಳಿಂದಾಗಿ ಇಂಜಿನಿಯರಿಂಗ್ ಕಾಲೇಜು ಕಡೆಯಿಂದ ರೈಲ್ವೆ ಬಡಾವಣೆಗೆ ಹೋಗುವ ರಸ್ತೆ ತಲುಪಲು ವಿದ್ಯಾರ್ಥಿಗಳು, ಮಕ್ಕಳು ಮತ್ತು ವಿಶೇಷವಾಗಿ ಹಿರಿಯ ನಾಗರಿಕರು ತೊಂದರೆಗೀಡಾಗುತ್ತಿದ್ದಾರೆ. ಇಲ್ಲಿ ರಸ್ತೆ ದಾಟಬೇಕಾದರೆ ಜೀವ ಹಿಡಿದುಕೊಂಡು ದಾಟಬೇಕಾದ ಪರಿಸ್ಥಿತಿ ಇದೆ. ದೊಡ್ಡ ಮಟ್ಟದ ಅಪಘಾತವಾಗುವ ಮುನ್ನ ಎಚ್ಚೆತ್ತುಕೊಳ್ಳುವುದು ಅವಶ್ಯಕ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಇಲ್ಲೊಂದು ರಸ್ತೆ ಡುಬ್ಬ ನಿರ್ಮಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಸುಮಿತ್ರ ಆರ್., ಮೈಸೂರು

ಪ್ರೊ.ಭಗವಾನ್‌ರ ಹಿಂದೂ ಧರ್ಮದ ವಿರುದ್ಧದ ಹೇಳಿಕೆ ಖಂಡನೀಯ

ಮಾನ್ಯರೆ,

ಇತ್ತೀಚೆಗೆ ನಂಜನಗೂಡಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ದಶರಥ ಪುತ್ರ ಶ್ರೀರಾಮನ ವಿರುದ್ಧ ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಹೇಳಿಕೆ ನೀಡಿರುವ ಪ್ರೊ.ಭಗವಾನ್ ಅವರ ಹೇಳಿಕೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಅಯೋಧ್ಯಾಧಿಪತಿ ಶ್ರೀ ರಾಮನ ವಿರುದ್ಧ ಭಗವಾನ್‌ರವರು ಈ ತರಹ ಹೇಳಿಕೆಯನ್ನು ನೀಡಿರುವುದು ಇಡೀ ಹಿಂದೂ ಸಮಾಜದ ವಿರುದ್ಧ ವ್ಯಕ್ತವಾಗಿರುವ ಹೇಳಿಕೆಯೇ ಸರಿ ಎಂದು ಜನತೆಯ ಅಭಿಪ್ರಾಯವಾಗಿದೆ.

ಪ್ರೊ.ಭಗವಾನ್ ಅವರು ಸಾರ್ವಜನಿಕ ಸಮಾರಂಭದ ವೇದಿಕೆಯಲ್ಲಿ – ಹಿಂದೂ ಧರ್ಮೀಯರ ಧರ್ಮಪ್ರಭು ಶ್ರೀರಾಮಚಂದ್ರ ಹಾಗೂ ಧರ್ಮಗ್ರಂಥಗಳ ಕುರಿತು ಹೇಳಿರುವ ಹೇಳಿಕೆಯು ಇಡೀ ಹಿಂದೂ ಜನಾಂಗಕ್ಕೆ ಮಾಡಿರುವ ಅವಮಾನ ಎಂದೇ ಹೇಳಬೇಕಾಗುತ್ತದೆ. ಅದೂ ಅಲ್ಲದೆ ಶ್ರೀರಾಮನು ದಶರಥನಿಗೆ ಹುಟ್ಟಿಲ್ಲ, ಪುತ್ರಕಾಮೇಷ್ಟಿ ಯಾಗದಲ್ಲಿ ಎಂಬ ಆಘಾತಕಾರಿ ಹೇಳಿಕೆಯನ್ನು ನೀಡಿರುವುದು ಎಷ್ಟು ಸರಿ? ಎಂದು ಜನತೆಯು ಕೇಳುತ್ತಿರುವುದು ಸುಳ್ಳಲ್ಲ. ಇದೂ ಅಲ್ಲದೆ ದಶರಥನ ರಾಣಿಯರು ಪುರೋಹಿತರ ಜೊತೆ ಮಲಗಬೇಕಿತ್ತು. ಶ್ರೀರಾಮನು ಪುರೋಹಿತರಿಗೆ ಹುಟ್ಟಿದವನು ಎಂಬ ಅತಿ ಅಶ್ಲೀಲ ಹೇಳಿಕೆಯಂತೂ ರಾಮಾಯಣವನ್ನು ಬರೆದ ವಾಲ್ಮೀಕಿ, ಕುವೆಂಪು ಅವರಂತಹ ಶ್ರೇಷ್ಠ ಬರಹಗಾರರಿಗೆ ಮಾಡಿದ ಅವಮಾನವೇ ಆಗಿದೆ. ಈ ರೀತಿಯ ಅಸಂಬದ್ಧ ಹೇಳಿಕೆಯನ್ನು ನೀಡಲು ಅವರೇನು ರಾಮಾಯಣ ನಡೆದ ಕಾಲದಲ್ಲಿ ಹುಟ್ಟಿದ್ದರೆ, ಅಥವಾ ಅವರೇನು ರಾಮಾಯಣ ನಡೆದ ಕಾಲದಲ್ಲಿ ಜೀವಿಸಿದ್ದು ಆಗ ನಡೆದ ಘಟನೆಗಳನ್ನು ಕಣ್ಣಾರೆ ಅವರು ಕಂಡಿದ್ದರೆ ಎಂಬುದನ್ನು ಅವರು ರಾಜ್ಯದ ಜನತೆಗೆ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಅವರಿಗೆ ಈಗ ಇರುವ ಮರ್ಯಾದೆಯೂ ಇಲ್ಲವಾದೀತು.

ತಕ್ಷಣ ಸಂಬಂಧಪಟ್ಟ ಇಲಾಖೆಯವರು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹೇಳಿರುವ "ಯುವ ಬ್ರಿಗೇಡ್" ಸಂಚಾಲಕರಾದ ಚಂದ್ರಶೇಖರ್ ಅವರ ಅಭಿಪ್ರಾಯವು ಸರಿಯಾಗಿಯೇ ಇದೆ. ಇನ್ನು ಮುಂದಾದರೂ ಅವರು ಹಿಂದೂ ಧರ್ಮದ ಸನಾತನ ಗ್ರಂಥಗಳ ಬಗ್ಗೆ ಇಂತಹ ಕೆಲಸಕ್ಕೆ ಬಾರದ ಕ್ಷುಲ್ಲಕ ಹೇಳಿಕೆಗಳನ್ನು ನೀಡದೆ ತಮ್ಮನ್ನು ತಾವು ತಿದ್ದಿಕೊಳ್ಳಲಿ ಎಂದು ರಾಜ್ಯದ ಜನತೆಯ ಒತ್ತಾಯ ಮಾಡುತ್ತಿದ್ದಾರೆ. ಈ ಹೇಳಿಕೆಯು ರಾಜ್ಯದ ಜನತೆಯ ಅಭಿಪ್ರಾಯವೇ ಆಗಿದೆ. ಈ ಹೇಳಿಕೆಯ ಹಿಂದಿರುವ ವ್ಯಕ್ತಿಗಳ – ಸಮಾಜದ ಬಗ್ಗೆ ಎಲ್ಲರೂ ತಿಳಿಯುವಂತೆ ಆಗಬೇಕು ಎಂಬುದೇ ಜನತೆಯ ಹಕ್ಕೊತ್ತಾಯವಾಗಿದೆ. ಅಲ್ಲದೆ ಅವರು ಸಾರ್ವಜನಿಕವಾಗಿ ಇಡೀ ಜನತೆಯ ಕ್ಷಮೆಯನ್ನು ಕೇಳಬೇಕು.


–ಬೇಲೂರು ದ.ಶಂ.ಪ್ರಕಾಶ್, ಮೈಸೂರು.


ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೂ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

9. ಡಿ.ಸೀತಾರಾಮರಾವ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರು ನಗರದ ಯೋಜಿತ ಬೆಳವಣಿಗೆ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೇ ಪ್ರಾರಂಭವಾಯಿತು. ಮುಮ್ಮಡಿಯವರು 1799ರಲ್ಲಿ ಪಟ್ಟಕ್ಕೆ ಬಂದಾಗ ಮೈಸೂರು ಪುಟ್ಟ ಊರಾಗಿದ್ದು ಕೋಟೆಯ ಒಳಗಡೆಗೆ ಸೀಮಿತವಾಗಿತ್ತು. ಅದರ ಒಳಗೆ ಸಣ್ಣಪುಟ್ಟ ಮನೆಗಳು. ಒಂದಕ್ಕೊಂದು ಸೇರಿ ಗಾಳಿ ಬೆಳಕು ಸಾಕಷ್ಟಿಲ್ಲದೆ ಹೋಗಿದ್ದವು. ಮನೆಯ ಮುಂದೆ ಗಲೀಜು ನೀರು ಹರಿಯುವ ಚರಂಡಿಗಳು. ನೀರಿನ ಅಭಾವ. ಇವೆಲ್ಲಾ ಸೇರಿ ಗಲೀಜು ಹೆಚ್ಚಿತ್ತು. ಪ್ಲೇಗು, ಕಾಲರಾ, ಮಲೇರಿಯಾ ಮತ್ತಿತರ ರೋಗಗಳು ಆಗಾಗ್ಗೆ ತಲೆ ಎತ್ತುತ್ತಿದ್ದವು. ಹೆಚ್ಚಿನ ಸಂಖ್ಯೆಯಲ್ಲಿ ಜನ ಸಾಯುತ್ತಿದ್ದರು.

ಮೊದಲಿಗೆ ಕುಡಿಯುವ ನೀರು ಒದಗಿಸುವ ಪ್ರಯತ್ನ ಪ್ರಾರಂಭವಾಯಿತು. ನಗರದ ಪಶ್ಚಿಮ ಭಾಗಕ್ಕೆ ಕುಕ್ಕರಹಳ್ಳಿ ಕೆರೆಯ ನೀರನ್ನು ಒದಗಿಸಿದರು. ದೊಡ್ಡಕೆರೆ, ಕಾರಂಜಿಕೆರೆ ಮತ್ತಿತರ ಕೆರೆಗಳಿಂದ ನೀರು ಸಿಗುವ ವ್ಯವಸ್ಥೆ ಮಾಡಿದರು. ಕೋಟೆಯ ಹೊರಗಡೆ ಹೊಸ ಅಗ್ರಹಾರಗಳನ್ನು, ಕೇರಿಗಳನ್ನು ಕಟ್ಟಿಸಲಾರಂಭಿಸಿದರು. ಜನರಿಗೆ ಒಳ್ಳೆಯ ಮನೆಗಳ ವಸತಿ ಸಿಗುವಂತಾಯಿತು. ಅಲ್ಲಿಂದಲೇ ಮೈಸೂರು ನಗರದ ಯೋಜಿತ ಬೆಳವಣಿಗೆ ಪ್ರಾರಂಭವಾಯಿತೆನ್ನಬಹುದು.

ಅವರ ನಂತರ ಚಾಮರಾಜ ಒಡೆಯರ ಅವಧಿಯಲ್ಲಿ (1868–1894) ಮೈಸೂರು ನಗರ ಆಧುನಿಕ ನಗರವಾಗಿ ಬೆಳೆಯಲಾರಂಭಿಸಿತು. ಪೂರ್ಣಯ್ಯ ನಾಲೆ ಮುಚ್ಚಿ ಸಯ್ಯಾಜಿರಾವ್ ರಸ್ತೆ ಮಾಡಲಾಯಿತು. ಒಳ ಚರಂಡಿ ನಿರ್ಮಾಣ, ಹಳೆಯ ಮನೆಗಳನ್ನು ವಶಕ್ಕೆ ತೆಗೆದುಕೊಂಡು ರಸ್ತೆ ವಿಸ್ತರಿಸುವ ಕಾರ್ಯ, ಕೋಟೆಯ ಸುತ್ತ ಇದ್ದ ಕಂದಕ ಮುಚ್ಚಿ ತೋಟಗಳ ಸೃಷ್ಟಿ, ಕುಕ್ಕರಹಳ್ಳಿ ಕೆರೆಗೆ ಕಾವೇರಿ ನೀರನ್ನು ಪಂಪುಗಳ ಸಹಾಯದಿಂದ ಹರಿಸಿ ಪೈಪುಗಳಲ್ಲಿ ನೀರನ್ನು ಮನೆಗಳಿಗೆ ಕೊಡುವುದು, ಚಾಮರಾಜಪುರಂ ಬಡಾವಣೆ ನಿರ್ಮಾಣ ಮುಂತಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಯಿತು.

1898ರ ಪ್ಲೇಗ್ ಭೀಕರವಾಗಿ ತಲೆ ಎತ್ತಿ ನೂರಾರು ಜನ ಸತ್ತರು. ಒತ್ತೊಟ್ಟಿಗಿದ್ದು ಖಾಯಿಲೆಗಳಿಗೆ ಕಾರಣವಾಗಿದ್ದ ಇನ್ನಷ್ಟು ಜಾಗಗಳನ್ನು ತೆರವುಗೊಳಿಸಿ, ಗಲ್ಲಿಗಳನ್ನು ಹಾಗೂ ಬೀದಿಗಳನ್ನು ವಿಸ್ತರಿಸುವುದು, ಚರಂಡಿಗಳನ್ನು ರೂಪಿಸುವುದು, ಹೊಸ ಬಡಾವಣೆಗಳನ್ನು ನಿರ್ಮಿಸುವುದು, ಅರಮನೆಯ ಸುತ್ತ ಇದ್ದ ಮನೆಗಳನ್ನು ತೆರವುಗೊಳಿಸಿ ವಿಶಾಲ ಮೈದಾನ ರಚಿಸುವುದು ಇಂತಹ ಯೋಜಿತ ಕಾರ್ಯಗಳನ್ನು ಪ್ರಾರಂಭಿಸಲಾಯಿತು. ಈ ಕಾರ್ಯಗಳನ್ನು ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಕಾರ್ಯ ಕೈಗೊಳ್ಳಲು 1903ರಲ್ಲಿ ಮೈಸೂರು ನಗರಾಭಿವೃದ್ಧಿಗೆ ನಿಯಮಾವಳಿಗಳನ್ನು ಹೊರಡಿಸಿ (Mysore City Improvement Regulation III of 1903) ನಂತರದ ವರ್ಷದಲ್ಲಿ ಮೈಸೂರು ನಗರಾಭಿವೃದ್ಧಿ ಸಮಿತಿಯನ್ನು ಅಧಿಕೃತವಾಗಿ ಸೃಷ್ಟಿಸಲಾಯಿತು. ಒಂಬತ್ತು ಜನ ಸದಸ್ಯರ ಇಂತಹ ಸಮಿತಿಯನ್ನು ರಚಿಸಿದ ಮೈಸೂರು ದೇಶ ಮೊದಲ ರಾಜ್ಯಗಳಲ್ಲಿ ಒಂದಾಗಿತ್ತು.

ಈ ಸಮಿತಿಯ ಮೊಟ್ಟಮೊದಲ ಅಧ್ಯಕ್ಷರಾಗಿ ನೇಮಕಗೊಂಡವರು ಡಿ.ಸೀತಾರಾಮರಾವ್. ಲೋಕೋಪಯೋಗಿ ಇಲಾಖೆಯಲ್ಲಿ (ಪಿಡಬ್ಲ್ಯೂಡಿ) ಇಂಜಿನಿಯರ್ ಆಗಿದ್ದ ಜೆ.ಇ.ಎ.ಡಿ'ಕ್ರೂಜ್ ಅವರು ನಗರಾಭಿವೃದ್ಧಿ ಸಮಿತಿಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಆಗಿ ನಿಯುಕ್ತರಾದರು. ಸೀತಾರಾಮರಾಯರು 1904ರಿಂದ 1907ರವರೆಗೆ ಅಧ್ಯಕ್ಷರಾಗಿದ್ದರೆ, ಡಿ'ಕ್ರೂಜ್ ಅವರು 1911ರವರೆಗೆ ಅಧಿಕಾರದಲ್ಲಿದ್ದರು.

ಸೀತಾರಾಮರಾಯರು ಆಂಧ್ರದ ಕೃಷ್ಣಾ ಜಿಲ್ಲೆಯಲ್ಲಿ 1856ರಲ್ಲಿ ಹುಟ್ಟಿ ತಮ್ಮ ವಿದ್ಯಾಭ್ಯಾಸವನ್ನು ಮದ್ರಾಸಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಮಾಡಿದರು. ನಂತರ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಪೂರ್ಣಗೊಳಿಸಿ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಸೇರಿದರು. ಅಲ್ಲಿ ಓದಿ 1880ರಲ್ಲಿ ಸಿವಿಲ್ ಇಂಜಿನಿಯರ್ ಎಲ್.ಸಿ.ಇ. (ಲೈಸೆನ್ಷಿಯೇಟೆಡ್ ಸಿವಿಲ್ ಇಂಜಿನಿಯರಿಂಗ್) ಡಿಪ್ಲೊಮಾ ಅರ್ಹತೆ ಗಳಿಸಿದರು. ಆ ವರ್ಷ ಉತ್ತೀರ್ಣರಾದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಇವರು ಮೊದಲ ಸ್ಥಾನ ಪಡೆದಿದ್ದರು.

ಅದೇ ವರ್ಷ ಅವರಿಗೆ ಸರ್ಕಾರ ಅಪ್ರೆಂಟಿಸ್ ಇಂಜಿನಿಯರ್ ಹುದ್ದೆಯನ್ನು ಮೊದಲಿಗೆ ನೀಡಿತು. ಎರಡು ವರ್ಷಗಳಲ್ಲಿ ಸಹಾಯಕ ಇಂಜಿನಿಯರ್ ಹುದ್ದೇಗೇರಿದ ಅವರನ್ನು ರೈಲ್ವೆ ಇಲಾಖೆಯಲ್ಲಿ ರೈಲು ಕಾರ್ಯದ ಸರ್ವೆ ಕಾರ್ಯಕ್ಕೆ ನೇಮಿಸಲಾಯಿತು. ಅವರು ಈ ಹುದ್ದೆಯಲ್ಲಿ ಎರಡು ವರ್ಷಗಳು ಸೇವೆ ಮಾಡಿದರು.

ಪ್ರಾರಂಭದ ಈ ಹುದ್ದೆಯಲ್ಲಿಯೇ ಅವರು ಬೆಂಗಳೂರು ಮತ್ತು ತುಮಕೂರು ನಡುವೆ ರೈಲು ಮಾರ್ಗದ ನಿರ್ಮಾಣದಲ್ಲಿ ತೋರಿದ ಆಸಕ್ತಿ–ಉತ್ಸಾಹ ಸರ್ಕಾರದ ಗಮನ ಸೆಳೆಯಿತು. ಮಹಾರಾಜರಿಂದಲೇ ಅವರ ಕಾರ್ಯಕ್ಕೆ ಪ್ರಶಂಸೆ ಲಭಿಸಿ ಸೀತಾರಾಮರಾಯರಿಗೆ ವಿಶೇಷಾರ್ಹತೆಯ ಮುಂಬಡ್ತಿ ಸಿಕ್ಕಿತು. ಅವರನ್ನು 1885ರಲ್ಲಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಹುದ್ದೆಯಲ್ಲಿ ಬದಲಿಯಾಗಿ ಕಾರ್ಯನಿರ್ವಹಿಸಲು ಗೊತ್ತುಮಾಡಲಾಯಿತು. ನಂತರ ಅವರನ್ನು ಈ ಸ್ಥಾನದಲ್ಲಿಯೇ ಸ್ಥಿರಗೊಳಿಸಲಾಯಿತು. ಈ ಸ್ಥಾನದಲ್ಲಿ ಅವರು ಸುಮಾರು ಐದು ವರ್ಷಗಳ ಕಾಲ ಕೆಲಸ ಮಾಡಬೇಕಾಯಿತು. ಈ ಸಮಯದಲ್ಲಿ ಅವರನ್ನು ಅಷ್ಟಗ್ರಾಮ ಛಾನಲ್ಸ್ ವಿಭಾಗದ ಬೆಂಗಳೂರು–ಹಿಂದೂಪುರ ರೈಲು ಕಾರ್ಯ, ಸೇತುವೆ ನಿರ್ಮಾಣ ವಿಭಾಗ, ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ವಿಭಾಗ ಮತ್ತಿತರ ಕಡೆ ಸೇವೆಗೆ ನಿಯೋಜಿಸಲಾಯಿತು.

ಈ ಐದು ವರ್ಷಗಳ ಅವಧಿಯಲ್ಲಿ ಸೀತಾರಾಮರಾಯರು ಶಕ್ತಿ ಮೀರಿ ದುಡಿದರು. ಅವರು ಶ್ರಮ ವಹಿಸಿ ಕೆಲಸ ಮಾಡಿದ್ದು ಮಹಾರಾಜರ ಸರ್ಕಾರದ ಗಮನಕ್ಕೆ ತೆಗೆದುಕೊಂಡು, ಹೆಚ್ಚಿನ ಶ್ರಮದ ಅರಮನೆಯ ಕಂಟ್ರೋಲರ್ ಕೆಲಸಕ್ಕೆ ತಕ್ಕ ವ್ಯಕ್ತಿಯೆಂದು ಅವರನ್ನು ಗುರುತಿಸಿ, ಆ ಪ್ರತಿಷ್ಠಿತ ಹುದ್ದೆಗೆ ಅವರನ್ನು ಆಯ್ಕೆ ಮಾಡಿತು.

ಲೋಕೋಪಯೋಗಿ ಇಲಾಖೆಯಿಂದ ಸಾಮಾನ್ಯ ಆಡಳಿತ ವಿಭಾಗದಲ್ಲಿ ಕೆಲಸ ಮಾಡುವ ಅವಕಾಶ ಅವರಿಗೆ ದೊರೆತು ಸೀತಾರಾಮರಾಯರು ಇನ್ನಷ್ಟು ಹುರುಪಿನಿಂದ ಕೆಲಸ ಮಾಡಲು ಅದು ಪ್ರೇರೇಪಣೆ ನೀಡಿತು. ರಾಜಧಾನಿ ಮೈಸೂರಿಗೆ ವರ್ಗಾವಣೆಯಾಗಿ ಬಂದು ಅರಮನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಇನ್ನಷ್ಟು ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಮಾಡಿತು.

ಮಹಾರಾಜರ ಆಡಳಿತಾಧಿಕಾರಿಯಾಗಿ ಅರಮನೆಗೆ ಸಂಬಂಧಪಟ್ಟ ವಿಚಾರಗಳು, ಆರ್ಥಿಕ ಸಂಬಂಧ ವಿಷಯಗಳ ಜೊತೆಗೆ ಇನ್ನಿತರ ಮಹತ್ವದ ಕೆಲಸಗಳೂ ಜೊತೆಗೂಡಿ ಅವರು ಹೆಚ್ಚಿನ ಪರಿಶ್ರಮದಿಂದ, ಆಸಕ್ತಿಯಿಂದ ದುಡಿದರು.


ಮೈಸೂರು ಇಂಡಸ್ಟ್ರಿಯಲ್ ಶಾಲೆಯ ಆಡಳಿತ ಸಮಿತಿ ಸದಸ್ಯ ಮತ್ತು ಕಾರ್ಯದರ್ಶಿ, ಮೈಸೂರು ನಗರದ ವಿಸ್ತೀರ್ಣ ಮತ್ತು ಕಟ್ಟಡಗಳ ಸಮಿತಿಯ ಸದಸ್ಯ, ಮಹಾರಾಣಿ ಹೆಣ್ಣು ಮಕ್ಕಳ ಶಾಲೆಯ ಜಂಟಿ ಕಾರ್ಯದರ್ಶಿ, ನಂಜರಾಜ ಬಹದ್ದೂರು ಛತ್ರದ ಆಡಳಿತ ಸಮಿತಿ ಸದಸ್ಯ, ಮೈಸೂರು ಆರ್ಟ್‌ವೇರ್ ಇಲಾಖೆಯ ಉಸ್ತುವಾರಿ ಅಧಿಕಾರಿ, ಶ್ರೀರಂಗಪಟ್ಟಣ ಟೌನ್ ಅಭಿವೃದ್ಧಿ ಸಮಿತಿಯ ಸದಸ್ಯ, ದಿವಂಗತ ಮಹಾರಾಜರ ಸ್ಮರಣಾರ್ಥವಾಗಿ ಶಾಶ್ವತ ಕಾರ್ಯ ಕೈಗೊಳ್ಳುವ ಸಲುವಾಗಿ ನೇಮಿಸಿದ್ದ ಸಮಿತಿ ಸದಸ್ಯ, ವೈಸ್ರಾಯ್ ಅವರ ಆಗಮನಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿದ್ದ ಸ್ವಾಗತ ಸಮಿತಿ ಕಾರ್ಯದರ್ಶಿ ಇವುಗಳೇ ಅಲ್ಲದೆ ಇನ್ನಿತರ ಸಾರ್ವಜನಿಕ ಮತ್ತು ಖಾಸಗಿ ಕಾರ್ಯಗಳಿಗೆ ಸಂಬಂಧಪಟ್ಟ ಸ್ಥಾನಗಳಲ್ಲಿ ಅವರು ಹೆಚ್ಚಿನ ಪರಿಶ್ರಮದಿಂದ ದುಡಿಯಲಾಗಿ ಅವರು ವಹಿಸಿಕೊಂಡಿದ್ದ ಜವಾಬ್ದಾರಿಗಳು ಯಶಸ್ವಿಯಾದವು. ಅರಮನೆಯ ಕಂಟ್ರೋಲರ್ ಆಗಿದ್ದಾಗ ಅವರು ತೋರಿದ ದಕ್ಷತೆ ಮತ್ತು ಆಸಕ್ತಿಯನ್ನು ಮಹಾರಾಜರು ಮತ್ತು ಮಹಾರಾಣಿ ರೀಜೆಂಟ್ ವಾಣೀವಿಲಾಸ ಸನ್ನಿಧಾನದವರು ಮೆಚ್ಚಿ ವಿಶೇಷ ಮನ್ನಣೆಗಳನ್ನು, ಬಹುಮಾನಗಳನ್ನು ಅವರಿಗೆ ದಯಪಾಲಿಸಿದರು.

ಅಲ್ಲಿ ತಮ್ಮ ಸೇವೆ ಮುಗಿಸಿ, ಸೀತಾರಾಮರಾಯರು 1897ರಲ್ಲಿ ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿದಾಗ ಅವರನ್ನು ಫ್ರೆಂಚ್ ರಾಕ್ಸ್ ವಿಭಾಗಕ್ಕೆ (ಈಗಿನ ಪಾಂಡವಪುರ) ನೇಮಿಸಲಾಯಿತು. ತರುವಾಯ ಅವರಿಗೆ ಮಂದಗೆರೆ ಕಾಲುವೆ ಮತ್ತು ಶಿಂಷಾ ಎಡದಂಡೆ ನಾಲೆಯನ್ನು ಪೂರ್ಣಗೊಳಿಸುವ ಯೋಜನೆಗಳ ಜವಾಬ್ದಾರಿ ವಹಿಸಲಾಯಿತು. ಅದೇ ವರ್ಷದ ಡಿಸೆಂಬರ್ ತಿಂಗಳಲ್ಲಿ ಅವರಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕಚೇರಿಯ ಪೂರ್ವ ವೃತ್ತದ ವಿಶೇಷಾಧಿಕಾರಿ ಹುದ್ದೆಗೆ ಬಡ್ತಿ ದೊರೆಯಿತು.

1898ರಿಂದ 1903ರವರೆಗೆ ಅವರು ತುಮಕೂರು ವಿಭಾಗದ ಎರಡನೇ ಗ್ರೇಡ್ ಮಟ್ಟದ ತಾತ್ಕಾಲಿಕ ಹುದ್ದೆಯಲ್ಲಿದ್ದು 1903ರಲ್ಲಿ ಆ ಹುದ್ದೆಯಲ್ಲಿ ಖಾಯಂಗೊಂಡರು. ಉನ್ನತ ಮಟ್ಟದ ಆಡಳಿತ ನಿರ್ವಹಿಸುವಲ್ಲಿ ಅವರಿಗಿದ್ದ ವಿಶೇಷ ಸಾಮರ್ಥ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಸರ್ಕಾರ ಅವರನ್ನು ಮೈಸೂರು ನಗರಾಭಿವೃದ್ಧಿಗೆ ರಚಿಸಲಾಗಿದ್ದ ಟ್ರಸ್ಟಿಗಳ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿತು. ಅಧ್ಯಕ್ಷರಾಗಿಯೂ ಅವರು ತಮ್ಮ ಎಂದಿನ ಸಾಮರ್ಥ್ಯದಲ್ಲಿ ಮೈಸೂರಿನ ಅಭಿವೃದ್ಧಿಗೆ ಅಗತ್ಯವಾದ ಕಾರ್ಯಗಳನ್ನು ನಿರ್ವಹಿಸಿದರು. **(ಮುಂದುವರೆಯುವುದು).**

ಬದುಕೆಂಬ ಜಟಕಾ ಬಂಡಿ...





ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಮಾನವ ಜನ್ಮ ದೊಡ್ಡದು, ಅದ ಹಾನಿ ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ... ಎಂದರು ದಾಸರು. ನಿಜ. ಈ ಮನುಷ್ಯ ಜನುಮದ ಬೆಲೆಯನ್ನೇ ಮರೆತವರಂತೆ ನಾವು ಬದುಕುತ್ತಿರುತ್ತೇವೆ. ಹುಟ್ಟಿದ್ದೇವೆ, ಹುಟ್ಟಿದ ಮೇಲೆ ಬದುಕಲೇಬೇಕಲ್ಲವೇ? ಸರಿ, ಹೇಗಾದರೂ ಬದುಕುವುದು. ಅಷ್ಟೆಯೇ, ಹಾಗಿದ್ದಲ್ಲಿ ಮಾನವ ಜನುಮ ಬಲು ದೊಡ್ಡದು ಎಂದೇಕೆ ಹೇಳಿದರು ದಾಸರು.? ಉಸಿರಾಡುತ್ತಿರುವುದು, ತಿನ್ನುವುದು, ಮಲಗುವುದು, ಸಂಪಾದಿಸುವುದು ಇದಷ್ಟೇ ಬದುಕಿನ ಗುರಿಯೇ? ಅಷ್ಟೇ ಆಗಿದ್ದರೆ, ನಮಗೂ ಪ್ರಾಣಿಗಳಿಗೂ ವ್ಯತ್ಯಾಸವೇನು? ಅವೂ ಬದುಕಲು ತಿನ್ನುತ್ತವೆ, ತಿನ್ನಲು ಬೇಟೆ ಆಡುತ್ತವೆ, ತಮ್ಮ ದಾರಿಗೆ ಅಡ್ಡಿ ಬಂದವರೊಡನೆ ಹೋರಾಡುತ್ತವೆ. ಬದುಕಿನ ಗುರಿ ಅಷ್ಟೇ ಎಂದು ಅಂದುಬಿಟ್ಟರೆ, ನಮಗೂ ಅವಕ್ಕೂ ವ್ಯತ್ಯಾಸ ಖಂಡಿತಾ ಇರುವುದಿಲ್ಲ.

ಯೋಚಿಸಬಲ್ಲ ಶಕ್ತಿಯನ್ನು ಭಗವಂತ ನಮಗೆ ಕೊಟ್ಟಿದ್ದಾನೆ. ಬದುಕಿನಲ್ಲಿ ಅದನ್ನು ನಾವು ಎಷ್ಟು ಉಪಯೋಗಿಸುತ್ತೇವೆ? ಸರಿ–ತಪ್ಪುಗಳನ್ನು ಅರಿಯಬಲ್ಲ ವಿವೇಚನಾ ಶಕ್ತಿ ನಮಗಿದೆ. ಅದನ್ನು ಎಷ್ಟು ಬಾರಿ ಬಳಸಿದ್ದೇವೆ. ಬುದ್ಧಿಯ ಜೊತೆಗೆ ನಮಗೆ ಆ ಭಗವಂತ ಅರಿಷಡ್ವರ್ಗಗಳನ್ನೂ ಕೊಟ್ಟು ಪರೀಕ್ಷೆ ಮಾಡಲು ಬಯಸಿದ್ದಾನೆ ಎಂದು ನಿಮಗೆ ಅನಿಸುವುದಿಲ್ಲವೇ? ಉದಾಹರಣೆಗೆ ಮನುಷ್ಯ ತನ್ನ ಸಮಾಜದಲ್ಲಿ ಮಾಡಿಕೊಂಡಿರುವ ದಾಂಪತ್ಯದ ಬದುಕನ್ನು ನೋಡೋಣ. ದಾಂಪತ್ಯ ಎಂಬುದು ಒಂದು ಗಂಡು ಹೆಣ್ಣು ಒಂದೇ ಸೂರಿನಡಿಯಲ್ಲಿ ಬದುಕುವುದಕ್ಕಿಂತ ಹೆಚ್ಚಾದ ಪರಸ್ಪರರ ಬಾಂಧವ್ಯವನ್ನು, ಬೆಸುಗೆಯನ್ನು, ಪರಸ್ಪರ ಗೌರವವನ್ನು ನಿರೀಕ್ಷಿಸುತ್ತದೆ ಎಂದು ಅನಿಸುವುದಿಲ್ಲವೇ?

ಆದರೆ ಎಷ್ಟು ದಾಂಪತ್ಯದಲ್ಲಿ ಅದು ಕಾಣಸಿಗುತ್ತದೆ ಎಂದು ಸ್ವಲ್ಪ ಯೋಚಿಸಿ? ಮದುವೆ ಆಗಿರುವುದರಿಂದ ನಾವು ಗಂಡ–ಹೆಂಡತಿ. ಹೊಸದರಲ್ಲಿಯ ಹುರುಪು, ಉತ್ಸಾಹ, ಆವೇಗ ಕ್ರಮೇಣ ಕಡಿಮೆ ಆಗತೊಡಗಿದಂತೆ ಅದರ ಜಾಗದಲ್ಲಿ ಅಸಹನೆ, ಸಿಟ್ಟು–ಸೆಡವು, ಆಕ್ಷೇಪಣೆಗಳೇ ಅಧಿಪತ್ಯ ವಹಿಸಲು ಆರಂಭಿಸುವುದಿಲ್ಲವೇ? ವೈವಾಹಿಕ ಬದುಕು ಅದೆಷ್ಟು ಮಂದಿಗೆ ಭಾರ ಎಂದು ಅನಿಸಲು ಪ್ರಾರಂಭಿಸುವುದಿಲ್ಲ! ಆಸಕ್ತಿಯು ಕ್ರಮೇಣ ನಿರಾಸಕ್ತಿಗೆ ಎಡೆ ಮಾಡಿಕೊಡುತ್ತದೆ. ಪರಸ್ಪರರಲ್ಲಿ ಹಕ್ಕು ಚಲಾಯಿಸುವ ಮನೋಭಾವ ಮೇಲುಗೈ ಪಡೆಯುವುದನ್ನೂ ಕಾಣುತ್ತೇವೆ. ಹೆಂಡತಿ ಒಂದು ಭೋಗದ ವಸ್ತು ಮತ್ತು ನನ್ನ ಅಡಿಯಾಳು. ಆದರೆ, ಕೆಲವೊಮ್ಮೆ ಗಂಡನೂ ನಿರುಪಯೋಗಿ ಎಂಬ ಪಟ್ಟವನ್ನು ಸ್ವೀಕರಿಸುತ್ತಾನೆ. ಪರಸ್ಪರರಲ್ಲಿ ಹೊಸತರಲ್ಲಿ ಇದ್ದ ಸಾಮರಸ್ಯವು ಅದೆಲ್ಲೋ ಮೂಲೆಯಲ್ಲಿ ಹೋಗಿ ಅಡಗಿ ಕುಳಿತುಬಿಟ್ಟಿರುತ್ತದೆ. ಒಮ್ಮೆ ಹಣ್ಣಾಗಿ ಕಂಡ ಕಣ್ಣಿಗೆ ಹುಣ್ಣಾಗಿ ಕಾಣಲು ಆರಂಭಿಸುವುದು ಏಕಾಗಿ? ಇಲ್ಲೇ ನಮ್ಮ ವಿವೇಚನಾ ಶಕ್ತಿ ಬಳಕೆಗೆ ಬರಬೇಕಾದುದು.

ದಾಂಪತ್ಯದಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಇರಬೇಕಾದುದು ಪರಸ್ಪರರಲ್ಲಿ ಗೌರವ. ಹೆಂಡತಿ ಆಗಲೀ ಗಂಡನಾಗಲೀ ಸಂಸಾರ ಎಂಬ ರಥದ ಎರಡು ಚಕ್ರಗಳೇ ಹೊರತು, ಒಬ್ಬರು ಮೇಲು ಮತ್ತೊಬ್ಬರು ಕೀಳು ಖಂಡಿತಾ ಅಲ್ಲ ಎಂಬುದನ್ನು ಇಬ್ಬರೂ ಅರಿತಿರಲೇಬೇಕಾದ ಅನಿವಾರ್ಯತೆ ಇರುವುದನ್ನು ತಿಳಿದ ದಾಂಪತ್ಯದಲ್ಲಿ ಬಿರುಕು ಮೂಡಲು ಸಾಧ್ಯವೇ ಇಲ್ಲ. ನಾನು ಮನೆಯ ಯಜಮಾನ. ಇವಳು ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕಾದವಳು ಎಂಬ ಮನೋಭಾವ ಮೂಡಿದ ಗಂಡಸಿನ ಮನಸ್ಸು ರೋಗಗ್ರಸ್ತವಾದಂತೆ. ಅವನಿಗೆ ಸರಿ–ತಪ್ಪುಗಳ ವಿವೇಚನೆಯಾಗಲೀ, ತಾನು ಹೋಗುತ್ತಿರುವ ದಾರಿಯೆಡೆಗೆ ಗಮನವಾಗಲೀ ಖಂಡಿತಾ ಇರಲು ಸಾಧ್ಯವಿಲ್ಲ. ಅಂತೆಯೇ ಗಂಡನ ಸಂಪಾದನೆಯ ಬಗ್ಗೆ ಅಥವಾ ಅವನ ನಡವಳಿಕೆಯ ಬಗೆಗೆ ಸದಾ ಅತೃಪ್ತಿಯನ್ನು ಬೆಳಸಿಕೊಂಡ, ಸದಾ ಅನುಮಾನದ ದೃಷ್ಟಿಯಿಂದ ನೋಡುವ ಅಭ್ಯಾಸ ಬೆಳೆಸಿಕೊಂಡ ಹೆಂಡತಿಯು ತನ್ನ ಸಂಸಾರದಲ್ಲಿ ಶಾಂತಿ–ಸಮಾಧಾನಗಳನ್ನು ಹೊಂದಲಾರಳು. ಇದು ಇಬ್ಬರ ಮನಸ್ಸೂ ರೋಗಗ್ರಸ್ತವಾಗಿರುವ ಉದಾಹರಣೆ. ಇಂತಹ ವಾತಾವರಣದಲ್ಲಿ ಬೆಳೆಯುವ ಮಕ್ಕಳೂ ಯಾರನ್ನು ನೋಡಿ ಕಲಿಯಬೇಕು. ಇಂತಹ ಜಗಳವಾಡುವ, ಮಾತೆತ್ತಿದರೆ ವಾದ–ವಿವಾದದ ಸುಳಿಯಲ್ಲಿ ಸಿಲುಕುವ ಪೋಷಕರಿರುವಾಗ ಓದಿನಲ್ಲಿ ಏಕಾಗ್ರತೆಯನ್ನು ತಂದುಕೊಳ್ಳಲಾರದೆ ಬಳಲುತ್ತಾರೆ. ಸಿಟ್ಟಿನ ಕೈಯಲ್ಲಿ ವಿವೇಕವನ್ನು ಕೊಟ್ಟಿರುವ ಇಂತಹ ತಂದೆ ತಾಯಂದಿರು ಮಕ್ಕಳಿಗೆ ಎಂತಹ ಮಾದರಿ ಆಗಬಲ್ಲರು ಎಂಬುದನ್ನು ಅವರು ಯೋಚಿಸುವ ಗೋಜಿಗೇ ಹೋಗುವುದಿಲ್ಲ.

ಈಗ ಮತ್ತೊಂದು ಸಂಸಾರದ ಚಿತ್ರಣವನ್ನು ನೋಡೋಣ. ಹೊರಗೆ ದುಡಿದು ಬರುವ ಗಂಡನ ಮನಸ್ಸಿಗೆ ಬೇಜಾರಾಗದಂತೆ ಎಚ್ಚರ ವಹಿಸುವ ಪತ್ನಿ, ಸದಾ ಅವನನ್ನು ಉಲ್ಲಸಿತನಾಗಿ ಇರಿಸುವ ಪ್ರಯತ್ನ ಮಾಡುತ್ತಾಳೆ. ಸಂಸಾರದ ನೊಗ ಎಳೆಯಲು ಅವನು ಪಡುವ ಶ್ರಮದ ಬಗ್ಗೆ ಅವಳಿಗೆ ಅರಿವಿದೆ. ತನ್ನ ಮಕ್ಕಳ ಓದು, ಆರೋಗ್ಯ, ನಡವಳಿಕೆ ಎಲ್ಲದರ ಕಡೆ ಗಮನ ನೀಡುವುದಲ್ಲದೆ ಮನೆಗೆಲಸ ಎಲ್ಲವನ್ನೂ ಒಬ್ಬಳೇ ನಿಭಾಯಿಸುವ ಹೆಂಡತಿಯ ಬಗ್ಗೆ ಹೆಮ್ಮೆ ಪಡುವ ಗಂಡ ಅವಳ ಕೆಲಸದಲ್ಲಿ ಸಾಧ್ಯವಾದಷ್ಟು ಸಹಾಯ ಮಾಡಲು ಇಚ್ಛಿಸುತ್ತಾನೆ. ಅವಳ ಆಸೆ–ಆಕಾಂಕ್ಷೆಯ ಅರಿವು ಅವನಲ್ಲಿ ಇರುತ್ತದೆ. ಪರಸ್ಪರರ ವ್ಯಕ್ತಿತ್ವಕ್ಕೆ ಗೌರವ ಕೊಡುವ ಈ ದಾಂಪತ್ಯದಲ್ಲಿ ಮಕ್ಕಳು ತಂದೆ ತಾಯಿಯರನ್ನು ಗೌರವಿಸುವುದನ್ನು ಕಲಿಯುತ್ತಾರೆ. ಸಹನೆ, ಶಾಂತಿ, ಸಹಾಯ ಗುಣ ಎಂಬುದು ಸಹಜವಾಗಿಯೇ ಆ ಸಂಸಾರದಲ್ಲಿ ಮನೆ ಮಾಡಿರುತ್ತದೆ.

ಈ ಎರಡೂ ದಾಂಪತ್ಯದ ಚಿತ್ರಣವನ್ನು ನೋಡಿದಾಗ ಬಲು ದೊಡ್ಡದಾದ ಮಾನವ ಜನುಮವನ್ನು ವಿವೇಚನಾಶೂನ್ಯರಾಗಿ, ಕೋಪ, ಅನುಮಾನ, ನಿರ್ಲಕ್ಷತೆ, ಬೇಜವಾಬ್ದಾರಿಗಳ ಕೈಯಲ್ಲಿ ಕೊಟ್ಟು ಅದನ್ನು ಹಾಳುಮಾಡಿಕೊಳ್ಳುತ್ತಿರುವ ಮಂದಿ ಬಹಳಷ್ಟು ಇದ್ದಾರೆ ಎಂದು ಅನ್ನಿಸುತ್ತದೆ ಅಲ್ಲವೇ? ಈಗ ಒಂದು ತಲೆಮಾರಿನ ಹಿಂದೆ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿಕೊಡುವಾಗ ವಧುವಿಗೆ ಪಾಲಿಗೆ ಬಂದದ್ದು ಪಂಚಾಮೃತ ಎಂಬುದನ್ನು ಒಪ್ಪಿಕೊಂಡು ನಡೆಯುವಂತೆ ಬುದ್ಧಿವಾದ ಹೇಳಿ ಕಳುಹಿಸಲಾಗುತ್ತಿತ್ತು. ಹೀಗಾಗಿ ಗಂಡ ಎಂಥವನೇ ಇರಲಿ, ಅದನ್ನು ಒಪ್ಪಿಕೊಂಡು ಅಥವಾ ನನ್ನ ಹಣೆಬರಹ ಎಂದುಕೊಂಡು, ಹೊಂದಿಕೊಂಡು ಬದುಕುತ್ತಿದ್ದವರೇ ಹೆಚ್ಚು ಮಂದಿ. ಸಾಮಾನ್ಯವಾಗಿ ಅಥವಾ ಹೆಚ್ಚಾಗಿ ಗಂಡಸಿನ ಪ್ರಾಬಲ್ಯವೇ ಪ್ರಮುಖವಾಗಿ ಕಂಡುಬರುತ್ತಿತ್ತು. ಏನೇ ಆದರೂ ತವರಿಗೆ ಹಿಂದಿರುಗಿ ಹೋಗಲಾರದೆ, ಬಂದ ಸಂಕಷ್ಟಗಳನ್ನು ನುಂಗುತ್ತಾ ಸಂಸಾರದ ಗುಟ್ಟು ರಟ್ಟಾಗದಂತೆ ಕಾಪಾಡಿಕೊಳ್ಳುತ್ತಾ ಬದುಕಿದವರೇ ಹೆಚ್ಚು. ಹೀಗಾಗಿ ನಮ್ಮ ಸಮಾಜದಲ್ಲಿ ಡೈವೋರ್ಸ್ ಎಂಬುದು ತೀರಾ ಅಪರೂಪವಾಗಿ ಕೇಳಿಬರುತ್ತಿದ್ದ ಶಬ್ದವಾಗಿತ್ತು.


ಆದರೆ ಇಂದಿನ ಸಮಾಜವು ಬದಲಾಗಿದೆ. ಹೆಣ್ಣು ವಿದ್ಯಾವಂತಳಾಗಿರುವುದು ಅಷ್ಟೇ ಅಲ್ಲ, ಆರ್ಥಿಕವಾಗಿ ಸಬಲಳೂ ಆಗಿದ್ದಾಳೆ. ಇದು ಅವಳಲ್ಲಿ ಅಗಾಧವಾದ ಮಾನಸಿಕ ಸ್ಥೈರ್ಯವನ್ನು ತಂದುಕೊಟ್ಟಿದೆ ಎಂಬುದರಲ್ಲಿ ಅನುಮಾನ ಇಲ್ಲ. ಆದರೆ ಅದು ಹೊಂದಾಣಿಕೆಯನ್ನು ಮಾಡಿಕೊಳ್ಳಲೇಬಾರದು ಎಂಬುದನ್ನು ಕಲಿಸುವ ವೇದಿಕೆ ಆಗಬಾರದು. ಸಂಸಾರ ಎಂಬುದು ಸುಲಲಿತವಾಗಿ ಸಾಗಬೇಕಾದಲ್ಲಿ, ಇಬ್ಬರಲ್ಲೂ ಸಾಮರಸ್ಯ, ಹೊಂದಾಣಿಕೆ ಅತ್ಯಗತ್ಯವಾಗಿ ಇರಬೇಕು ಎಂಬುದನ್ನು ಅರಿಯಬೇಕು.

ಇವನಲ್ಲದಿದ್ದರೆ, ಮತ್ತೊಬ್ಬ ಎಂಬ ಮನೋಭಾವನೆಯು ಮುಸುಕು ಹಾಕಿದ ಸ್ವೇಚ್ಛಾಚಾರದಂತೆ. ಇದು ಸಮಾಜದ ಆರೋಗ್ಯಕ್ಕೂ ಒಳ್ಳೆಯದಲ್ಲ. ಸಣ್ಣ ಪುಟ್ಟ ತಪ್ಪುಗಳು ಆಗುವುದು ಸಹಜ. ಅದು ಗಂಡ ಅಥವಾ ಹೆಂಡತಿ, ಯಾರಿಂದಲೂ ಆಗಬಹುದು. ಅದನ್ನೇ ದೊಡ್ಡದಾಗಿಸಿ ಬಾಂಧವ್ಯದಲ್ಲಿ ಬಿರುಕು ಮೂಡುವಂತೆ ಮಾಡಿಕೊಳ್ಳುವುದು ವಿವೇಚನಾ ಶೂನ್ಯತೆ ಅಲ್ಲದೆ ಬೇರೇನಲ್ಲ. ಮಕ್ಕಳ ಮೇಲೆ ತಮ್ಮ ಕೋಪ ಸಿಟ್ಟಿನ ಮೇಲೆ ನಿಯಂತ್ರಣದಲ್ಲಿಟ್ಟುಕೊಳ್ಳಲೇಬೇಕು. ಇಲ್ಲವಾದಲ್ಲಿ, ಹುಟ್ಟಿದ ಆ ಮಕ್ಕಳಿಗೆ ಸನ್ಮಾರ್ಗ ತೋರದ ಬೇಜವಾಬ್ದಾರಿ ಪೋಷಕರು ಎಂಬ ಹೆಸರನ್ನು ಹೊರಬೇಕಾಗುತ್ತದೆ. ನಾಲ್ಕು ದಿನಗಳ ಈ ಅಮೂಲ್ಯವಾದ ಬದುಕನ್ನು ನಗುನಗುತಾ ಸುಂದರವಾಗಿಸುವ ಕಲೆ ಗೊತ್ತಿದ್ದವರೇ ನಿಜಕ್ಕೂ ಧನ್ಯರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 14 ಜೂನ್ 2026

‘ಮಹಾಭಾರತದೊಳಗಿಂದ ಒಂದಿಷ್ಟು’ ಪುಸ್ತಕ ಬಿಡುಗಡೆ



ಮೈಸೂರಿನ ರಂಗಾಯಣದ ಶ್ರೀರಂಗದಲ್ಲಿ ಹಾಡುಪಾಡು ರಾಮು ಅವರ ‘ಮಹಾಭಾರತದೊಳಗಿಂದ ಒಂದಿಷ್ಟು’ ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರು,ಜೂ.13(ಪಿಎಂ)– ಮೈಸೂರಿನ ರಂಗಾಯಣದ ಶ್ರೀರಂಗ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಾಡುಪಾಡು ರಾಮು (ಟಿ.ಎಸ್.ರಾಮಸ್ವಾಮಿ) ಅವರ ‘ಮಹಾಭಾರತದೊಳಗಿಂದ ಒಂದಿಷ್ಟು’ ಪುಸ್ತಕವನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಕಥೆಗಾರ ಅಬ್ದುಲ್ ರಷೀದ್, ಮಹಾಭಾರತ ಕುರಿತ ಈ ಪುಸ್ತಕ ಓದುತ್ತಿದ್ದಾಗ, ಇದು ಎಲ್ಲೋ ರಾಜ–ಮಹಾರಾಜರ ನಡುವೆ ನಡೆದ ಕಥೆಯಲ್ಲ. ಬದಲಿಗೆ ಇದು ಎರಡು ಬುಡಕಟ್ಟು ಗುಂಪುಗಳ ನಡುವೆ ನಡೆದ ಮಹಾಕಥನ ಎಂದು ನನಗೆ ಅನ್ನಿಸಿತು. ಇಲ್ಲಿನ ಕಥನ ಆದಿವಾಸಿಗಳ, ಅಲೆಮಾರಿಗಳ ಹಾಗೂ ನಮ್ಮೆಲ್ಲರ ಮಹಾಭಾರತ ಎನ್ನುವಂತಿದೆ. ಇದನ್ನು ಮಕ್ಕಳಿಗೆ ಓದಿಸಬೇಕು ಅಥವಾ ಓದಿ ಅವರಿಗೆ ಕಥೆ ಹೇಳಿಕೊಡುವ ಅಗತ್ಯವಿದೆ ಎಂದು ಹೇಳಿದರು.

ಪೀಟರ್ ಬ್ರೂಕ್ ಅವರ ಮಹಾಭಾರತದ ಅಷ್ಟೂ ಸಂಪುಟಗಳು ರಾಮು ಅವರ ಮನೆಯಲ್ಲಿತ್ತು. ಜೊತೆಗೆ ಮಹಾಭಾರತ ಕುರಿತ ವಿವಿಧ ಭಾಷೆಗಳ ಪುಸ್ತಕಗಳನ್ನು ಅವರು ಅಧ್ಯಯನ ಮಾಡಿದ್ದರು. ಬೇರೆಯವರಿಗೆ ಸಹ ಓದಲು ಕೊಡುತ್ತಿದ್ದರು. ಈಗ ಅವರು ನಮ್ಮ ನಡುವೆ ಇಲ್ಲವಾದರೂ ಅವರ ಈ ಪುಸ್ತಕವನ್ನು ದೇವನೂರು ಮಹಾದೇವ ಸಂಪಾದಿಸಿ ನೆಲಗನ್ನಡದ ಸ್ಪರ್ಶ ನೀಡಿದ್ದಾರೆ ಎಂದರು.

ರಾಮು ಅವರಿಗೆ ಪುಸ್ತಕ, ಪ್ರಾಣಿ, ಪರಿಸರದ ಬಗ್ಗೆ ಅಪಾರ ಕಾಳಜಿ ಇತ್ತು. ಅವರ ಮನೆಗೆ ಹೋದರೆ ನಮಗೆ ಊಟ ಹಾಕದೇ ಕಳುಹಿಸುತ್ತಿರಲಿಲ್ಲ ಎಂದು ತಾವು ಅವರೊಂದಿಗೆ ಹೊಂದಿದ್ದ ಒಡನಾಟ ಹಂಚಿಕೊಂಡರು.

ರಾಮು ಅವರೊಂದಿಗೆ ತಾವು ಹೊಂದಿದ್ದ ಒಡನಾಟ ಹಂಚಿಕೊಂಡ ವಿಮರ್ಶಕರೂ ಆದ ಅನುವಾದ ಓ.ಎಲ್.ನಾಗಭೂಷಣಸ್ವಾಮಿ, ನಾನು ಮತ್ತು ರಾಮು ಇಬ್ಬರು ಜೊತೆಯಲ್ಲೇ ಓದಿದ್ದು. ಅವರ ಸ್ನೇಹ ನನಗೆ ದೊರೆತಿದ್ದು ನನ್ನ ಬದುಕಿನ ಭಾಗ್ಯ. ಅಪಾರ ವಿದ್ವತ್ತು ಹೊಂದಿದ್ದ ರಾಮುಗೆ ಮಕ್ಕಳು ಎಂದರೆ ತುಂಬಾ ಪ್ರೀತಿ. ಸಂಸ್ಕೃತಿ ಜಾಲ ಕಟ್ಟಿದ ರಾಮು, ಚಳವಳಿಯಲ್ಲಿಯೂ ತೊಡಗಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ‘ನಾದ ನಮನ’ ಶೀರ್ಷಿಕೆಯಡಿ ಎಸ್.ವಿ.ಸಹನ ಅವರಿಂದ ವೀಣಾ ವಾದನ ಕಾರ್ಯಕ್ರಮ ನಡೆಯಿತು. ಹಿರಿಯ ಜಾನಪದ ವಿದ್ವಾಂಸ ಡಾ.ಕೃಷ್ಣಮೂರ್ತಿ ಹನೂರು ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಚ.ಹ.ರಘುನಾಥ್, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಮತ್ತಿತರರು ಹಾಜರಿದ್ದರು.

ಅಫ್ಘಾನಿಸ್ತಾನ ವಿರುದ್ಧ ಭಾರತಕ್ಕೆ 7 ವಿಕೆಟ್ ಜಯ



ಶುಭ್‌ಮನ್ ಗಿಲ್–ಕೆ.ಎಲ್.ರಾಹುಲ್ ಜೊತೆಯಾಟ.

ಧರ್ಮಶಾಲಾ, ಜೂ.13(ಏಜೆನ್ಸೀಸ್)– ನಾಯಕ ಶುಭ್‌ಮನ್ ಗಿಲ್ ಸಮಯೋಚಿತ ಆಟ ಹಾಗೂ ಕೆ.ಎಲ್.ರಾಹುಲ್ ಸಮರ್ಥ ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಅತಿಥೇಯ ಭಾರತ, ಅಫ್ಘಾನಿಸ್ತಾನದ ವಿರುದ್ಧ 7 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಮಳೆಯಿಂದಾಗಿ 25 ಓವರ್‌ಗಳಿಗೆ ಸೀಮಿತಗೊಂಡ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದೆ

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘನ್, 24.5 ಓವರ್‌ಗಳಲ್ಲಿ ಸರ್ವಪತನ ಕಾಣುವ ಮೂಲಕ 194 ರನ್ ಕಲೆಹಾಕಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಟೀಮ್ ಇಂಡಿಯಾ 22.5 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 195 ರನ್ ಪೇರಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟಿಂಗ್ ಮಾಡಿದ ಅಫ್ಘನ್ ರೆಹಮಾನುಲ್ಲಾ ಗುರ್ಬಾಜ್ ಶತಕದಾಟದ ಹೊರತಾಗಿ ಮತ್ಯಾರಿಂದಲೂ ಕನಿಷ್ಠ ಆಟವೂ ಕಂಡುಬರಲಿಲ್ಲ. ರಹಮಾನುಲ್ಲಾ ಗುರ್ಬಾಜ್ 51 ಎಸೆತಗಳಲ್ಲಿ 8 ಬೌಂಡರಿ ಮತ್ತು 8 ಸಿಕ್ಸರ್‌ಗಳೊಂದಿಗೆ 102 ರನ್ ಗಳಿಸಿದರೆ, ಹಶ್ಮತುಲ್ಲಾ ಶಾಹಿದಿ 27 ಮತ್ತು ಅಜ್ಮತುಲ್ಲಾ ಒಮರ್‌ಜೈ 26 ರನ್ ಗಳಿಸಿದರು. ಇವರ ಬಳಿಕ ಬೇರ್ಯಾವ ಬ್ಯಾಟರ್ ಒಂದಂಕಿ ಮೊತ್ತ ದಾಟದೇ ಇದ್ದದ್ದು ತಂಡಕ್ಕೆ ಭಾರೀ ಹೊಡೆತ ನೀಡಿತು.

ಉಳಿದಂತೆ ಇಬ್ರಾಹಿಂ ಜದ್ರಾನ್ 1, ಸೆಡಿಕುಲ್ಲಾ ಅತ್ತರ್ 0, ರಹಮತ್ ಶಾ 3, ಮೊಹಮ್ಮದ್ ನಬಿ 9, ರಶೀದ್ ಖಾನ್ 9, ಎಎಂ ಗಜನ್‌ಫರ್ 0, ಜಿಯಾ ಉರ್ ರೆಹಮಾನ್ ಶರೀಫಿ 4 ರನ್ ಗಳಿಸಿ ಔಟಾದರು.

ಟೀಂ ಇಂಡಿಯಾ ಪರ ಚೊಚ್ಚಲ ಪಂದ್ಯವಾಡಿದ ಗುರ್ನೂರ್ ಬ್ರಾರ್ ಹಾಗೂ ಹರ್ಷ್ ದುಬೆ ತಲಾ 3 ವಿಕೆಟ್ ಕಬಳಿಸಿದರು. ಅರ್ಶ್‌ದೀಪ್ ಸಿಂಗ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ತಲಾ 2 ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಟೀಂ ಇಂಡಿಯಾ ಅನುಭವಿ ರೋಹಿತ್ ಶರ್ಮಾ 16 ರನ್ ಗಳಿಸಿ ರನೌಟ್‌ಗೆ ಬಲಿಯಾದರು. ನಂತರ ಜೊತೆಯಾದ ನಾಯಕ ಶುಭಮನ್ ಗಿಲ್ ಮತ್ತು ಇಶಾನ್ ಕಿಶನ್ ಜೋಡಿ 43 ಎಸೆತಗಳಲ್ಲಿ 70 ರನ್‌ಗಳ ಜೊತೆಯಾಟವಾಡಿತು. ಇಶಾನ್ ಕಿಶನ್ 34 ರನ್‌ಗಳಿಗೆ ಔಟಾದರೆ, ಬಳಿಕ ಬಂದ ಶ್ರೇಯಸ್ ಅಯ್ಯರ್ 12 ರನ್‌ಗಳಿಸಿ ಔಟಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ಶುಭ್‌ಮನ್ ಗಿಲ್ 66 ಎಸೆತಗಳಲ್ಲಿ 44 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ ಅಜೇಯ 84 ರನ್ ಬಾರಿಸಿದರು. ಇವರಿಗೆ ಸಾಥ್ ನೀಡಿದ ಕೆಎಲ್ ರಾಹುಲ್ 19 ಎಸೆತಗಳಲ್ಲಿ 4 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ ಅಜೇಯ 39 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಕೆಂಗೇರಿ ಬಳಿ ಡಿವೈಡರ್‌ಗೆ ಬೈಕ್ ಡಿಕ್ಕಿ: ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳು ಸಾವು

ಬೆಂಗಳೂರು, ಜೂ.13– ಬೆಂಗಳೂರಿನ ಕೆಂಗೇರಿ ಬಳಿ ಶನಿವಾರ ಬೆಳಗಿನ ಜಾವ ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಕೇರಳ ಮೂಲದ ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇಂದು ಬೆಳಗಿನ ಜಾವ 3 ಗಂಟೆ ಸುಮಾರಿಗೆ ಕೆಂಗೇರಿಯ ಆರ್.ಆರ್ ಡೆಂಟಲ್ ಕಾಲೇಜು ಬಳಿ ಈ ಭೀಕರ ಅಪಘಾತ ಸಂಭವಿಸಿದ್ದು, ಮೃತ ವಿದ್ಯಾರ್ಥಿಗಳನ್ನು ಅತುಲ್ ಹಾಗೂ ಗೌರಿಶಂಕರ್ ಎಂದು ಗುರುತಿಸಲಾಗಿದೆ.

ಈ ಇಬ್ಬರು ವಿದ್ಯಾರ್ಥಿಗಳು ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಈ ವೇಳೆ ಬೈಕ್ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ದುರಂತ ಸಂಭವಿಸಿದೆ. ಘಟನಾ ಸ್ಥಳಕ್ಕೆ ಕೆಂಗೇರಿ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಕ್ಸಲ್ ಚಟುವಟಿಕೆಗೆ ಬೆಂಗಳೂರಲ್ಲಿ ಹಣಕಾಸು ವಹಿವಾಟು

ಮೈಸೂರಿನ ಒಬ್ಬರು ಸೇರಿ 7 ಜನರ ವಿರುದ್ಧ ಎಫ್‌ಐಆರ್

ಬೆಂಗಳೂರು, ಜೂ.13– ಭಾರತದಲ್ಲಿ ನಕ್ಸಲ್ ಚಟುವಟಿಕೆಗಳಿಗೆ ವಿದೇಶದಿಂದ ಫಂಡಿಂಗ್ ಆರೋಪ ಕೇಳಿಬಂದಿದೆ. ಇತ್ತ ಬೆಂಗಳೂರಿನಲ್ಲೂ ಹಣಕಾಸು ವಹಿವಾಟು ಹಿನ್ನೆಲೆ ಅಮೆರಿಕ ಮೂಲದ ಟಿಟಿಐ (ದಿ ತಿಮೋತಿ ಇನಿಶಿಯೇಟಿವ್) ಕ್ರಿಶ್ಚಿಯನ್ ಮಿಷನರಿ ಸಂಸ್ಥೆ ಹಾಗೂ ಕರ್ನಾಟಕದ ನಾಲ್ವರು ಸೇರಿದಂತೆ ಏಳು ಜನರ ವಿರುದ್ಧ ಬೆಂಗಳೂರಿನ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಯುಎಪಿಎ ಹಾಗೂ ಬಿಎನ್‌ಎಸ್ ಕಾಯ್ದೆಯಡಿ ಒಳಸಂಚು, ವಂಚನೆ ಮತ್ತು ಸುಳ್ಳು ದಾಖಲೆ ಸೃಷ್ಟಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಬೆಂಗಳೂರಿನ ಜೋನಾಥನ್ ಎಸ್ ರಾಜನ್, ಮೈಸೂರಿನ ಸುಪ್ರೀಂ ಜಾಯ್, ಮಿಕಾ ಮಾರ್ಕ್, ಅಜಿತ್ ವರ್ಗೀಸ್ ಮಥಾಯಿ, ಛತ್ತೀಸ್‌ಘಡದ ವರ್ಗೀಸ್ ಚಾಕೊ, ಅಸ್ಸಾಂನ ಬಬ್ಲು ಕುರ್ಮಿ ಹಾಗೂ ಟಿಟಿಐ ಸಂಸ್ಥೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕಳೆದ ಏಪ್ರಿಲ್‌ನಲ್ಲಿ ಇಡಿ ಅಧಿಕಾರಿಗಳು ನಡೆಸಿದ ದಾಳಿ ವೇಳೆ 95 ಕೋಟಿ ರೂಪಾಯಿಗೂ ಅಧಿಕ ಅಕ್ರಮ ವಿದೇಶಿ ಹಣ ಬಳಕೆಯಾಗಿರುವುದು ಬೆಳಕಿಗೆ ಬಂದಿದ್ದು, ಸಂತೋಷ್ ಕುಮಾರ್ ಎಂಬ ಸುಳ್ಳು ಹೆಸರಿನ ಯುಎಸ್‌ಎ ಟ್ರೂಯಿಸ್ಟ್ ಬ್ಯಾಂಕ್‌ನ ಸಾವಿರಕ್ಕೂ ಹೆಚ್ಚು ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ಭಾರತದಲ್ಲಿ ಅಕ್ರಮವಾಗಿ ವಿತರಿಸಿ ಹಣ ಡ್ರಾ ಮಾಡಿರುವುದು ಪತ್ತೆಯಾಗಿತ್ತು.


ಬೆಂಗಳೂರಿನ ಶೆಲ್ ಕಂಪನಿಗಳ ವಹಿವಾಟು ಬೆಳಕಿಗೆ: ಆರೋಪಿಗಳಲ್ಲೊಬ್ಬನಾದ ಮಿಕಾ ಮಾರ್ಕ್ ಬಳಿ 24 ವಿದೇಶಿ ಡೆಬಿಟ್ ಕಾರ್ಡ್‌ಗಳು ಪತ್ತೆಯಾಗಿದ್ದು, ನಕ್ಸಲ್ ಪೀಡಿತ ಪ್ರದೇಶಗಳು ಸೇರಿದಂತೆ ಛತ್ತೀಸ್‌ಗಢದಲ್ಲಿ ಈ ಕಾರ್ಡ್‌ಗಳ ಮೂಲಕ ಶಂಕಾಸ್ಪದ ನಗದು ಚಟುವಟಿಕೆಗಳು ನಡೆದಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಮತ್ತೊಬ್ಬ ಆರೋಪಿ ಅಜಿತ್ ವರ್ಗೀಸ್ ವಿಚಾರಣೆ ವೇಳೆ ಬೆಂಗಳೂರಿನ ಶೆಲ್ ಕಂಪನಿಗಳ ವಹಿವಾಟು ಬೆಳಕಿಗೆ ಬಂದಿದೆ. ಬೆಂಗಳೂರಿನ ಕೊತ್ತನೂರು ವ್ಯಾಪ್ತಿಯಲ್ಲಿ ಹಣ ವರ್ಗಾವಣೆ ಮಾಡಲಾಗಿದೆ. ಈ ಅಕ್ರಮ ಹಣವನ್ನು ಧರ್ಮೋಪದೇಶ ಹಾಗೂ ಎಡಪಂಥೀಯ ಉಗ್ರವಾದದ ತರಬೇತಿಗೆ ಬಳಸಲಾಗುತ್ತಿತ್ತು ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಸದ್ಯ ಎಸಿಪಿ ನೇತೃತ್ವದ ಪೊಲೀಸ್ ತಂಡವು ತನಿಖೆ ನಡೆಸಿ ಇಡಿಗೆ ವರದಿ ಸಲ್ಲಿಸಲಿದೆ.

ನಾಳೆ ನವದೆಹಲಿಯಲ್ಲಿ ‘ಅಗತ್ತಿಯಾರ್– ದಿ ಯುನಿಫೈರ್’ ಪುಸ್ತಕ ಬಿಡುಗಡೆ

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭಾಗಿ

ಮೈಸೂರು,ಜೂ.13(ಪಿಎಂ)– ಚೆನ್ನೈ ಮಂಡವೇಲಿಯ ಕಲೈಮಗಲ್ ಪಬ್ಲಿಕೇಷನ್ಸ್ ವತಿಯಿಂದ ಜೂ.15ರಂದು ನವದೆಹಲಿಯಲ್ಲಿ ‘ಅಗತ್ತಿಯಾರ್ – ದಿ ಯುನಿಫೈರ್’ ತಮಿಳು ಅವತರಣಿಕೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದು ನವದೆಹಲಿಯ ವೈಸ್‌ಪ್ರೆಸಿಡೆಂಟ್ ಎನ್‌ಕ್ಲೇವ್‌ನಲ್ಲಿ ಕಾರ್ಯಕ್ರಮ ನಡೆಯಲಿದ್ದು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಗೌರವ ಅತಿಥಿಯಾಗಿ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಪಾಲ್ಗೊಳ್ಳಲಿದ್ದಾರೆ.



ಅಗಸ್ತ್ಯ ಆಸ್ಪತ್ರೆಯ ಡಾ.ಎಂ.ಎನ್. ಸುಧಾ ಈ ಕೃತಿಯ ಮೂಲ ಲೇಖಕರು. ಅಲ್ಲದೆ, ಹಿರಿಯ ವಕೀಲ ಓ.ಶ್ಯಾಮ್‌ಭಟ್ ಸಹ ಲೇಖಕರಾಗಿದ್ದಾರೆ (ಇಂಗ್ಲಿಷ್ ಮತ್ತು ಕನ್ನಡದಲ್ಲಿ). ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್.ಕೆ.ಕಲ್ಯಾಣಿ ಈ ಕೃತಿಯನ್ನು ತಮಿಳು ಭಾಷೆಗೆ ಅನುವಾದಿಸಿದ್ದಾರೆ. ಅಲ್ಲದೆ, ನವದೆಹಲಿಯ ಭಾರತೀಯ ಭಾಷಾ ಸಮಿತಿ ಸಮ್ಮೇಳನ ಸಭಾಂಗಣದಲ್ಲಿ ಜೂ.15ರಂದು ಬೆಳಗ್ಗೆ 9.30ಕ್ಕೆ ‘ಋಷಿ ಅಗಸ್ತ್ಯ ; ದಿ ಯೂನಿಫೈಯರ್’ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ಶಿಶುವಿಹಾರದಿಂದ ಪಿಜಿವರೆಗೆ ಉಚಿತ ಶಿಕ್ಷಣ: ಒಡಿಶಾ ಸರ್ಕಾರ ಮಹತ್ವದ ಘೋಷಣೆ

ಭುವನೇಶ್ವರ: ಸರ್ಕಾರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಯಾವುದೇ ಶುಲ್ಕ ಇರುವುದಿಲ್ಲ. ಕಿಂಡರ್‌ಗಾರ್ಟನ್‌ನಿಂದ ಸ್ನಾತಕೋತ್ತರ ಪದವಿವರೆಗೆ ಉಚಿತ ಶಿಕ್ಷಣ ನೀಡುವುದಾಗಿ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಘೋಷಿಸಿದ್ದಾರೆ.

ಶಿಕ್ಷಣವನ್ನು ಉಚಿತ ಮತ್ತು ಸಾರ್ವತ್ರಿಕಗೊಳಿಸುವುದಾಗಿ ಘೋಷಿಸಿರುವ ಮುಖ್ಯಮಂತ್ರಿಗಳು, ಇಡೀ ದೇಶದಲ್ಲೇ ಇಂತಹದ್ದೊಂದು ಮಹತ್ವದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯ ಒಡಿಶಾವಾಗಿದೆ. ಈ ಯೋಜನೆ ಪ್ರಮುಖವಾಗಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮತ್ತು ಉನ್ನತ ವಿದ್ಯಾಭ್ಯಾಸದಲ್ಲಿ ಸಂಶೋಧನೆಯ ಗುರಿ ಇಟ್ಟುಕೊಂಡವರಿಗೆ ವರದಾನವಾಗಲಿದೆ ಎಂದು ತಿಳಿಸಿದ್ದಾರೆ.

ಸರ್ಕಾರದ ಈ ಮಹತ್ವದ ನಿರ್ಧಾರದಿಂದಾಗಿ ರಾಜ್ಯದ 10 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಲಾಭವಾಗಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಒಡಿಶಾದಲ್ಲಿ ಈಗಾಗಲೇ 10ನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿತ್ತು. ಇದೀಗ ಅದನ್ನು ಉನ್ನತ ಶಿಕ್ಷಣಕ್ಕೂ ವಿಸ್ತರಿಸಿರುವುದರಿಂದ, ಆರ್ಥಿಕ ಸಂಕಷ್ಟದಿಂದ ಉನ್ನತ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದ ವಿದ್ಯಾರ್ಥಿಗಳಿಗೆ ಸರ್ಕಾರದ ಈ ಯೋಜನೆ ನೆರವಾಗಲಿದೆ.

ಶ್ರೀಮತಿ ಲಲಿತಾ ಅವರಿಗೆ ಲಾಗೈಡ್ ಬಳಗದಿಂದ ಅಭಿನಂದನೆ



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಧರ್ಮಪತ್ನಿ, ‘ಸಹಕಾರ ರತ್ನ’ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ ಅವರನ್ನು ಲಾಗೈಡ್ ಬಳಗದ ವತಿಯಿಂದ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರು ಅಭಿನಂದಿಸಿದರು. ಈ ವೇಳೆ ಹಿರಿಯ ವಕೀಲ ಹಾಗೂ ಉದ್ಯಮಿ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಪಬ್ಲಿಕ್ ಟಿವಿ ಹಿರಿಯ ವರದಿಗಾರ ಕೆ.ಪಿ.ನಾಗರಾಜ್, ಜಿಪಂ ಮಾಜಿ ಸದಸ್ಯ ಸಿಂಧುವಳ್ಳಿ ಕೆಂಪಣ್ಣ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಶ್ರೀಕೃಷ್ಣ ಮಠಕ್ಕೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ


ಉಡುಪಿ, ಜೂ.13– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದ್ದಾರೆ. ಕರ್ನಾಟಕ ಪ್ರವಾಸದ ಭಾಗವಾಗಿ ಸೀತಾರಾಮನ್ ಅವರು ಉಡುಪಿಗೆ ಆಗಮಿಸಿ ಶ್ರೀಕೃಷ್ಣನ ದರ್ಶನ ಪಡೆದಿದ್ದಾರೆ.



ಸದ್ಯ ಕೃಷ್ಣ ಮಠದ ಪರ್ಯಾಯ ಪೀಠವನ್ನು ಅಲಂಕರಿಸಿರುವ ಶಿರೂರು ಮಠದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿಯನ್ನು ಭೇಟಿಯಾದರು ಮತ್ತು ಭೇಟಿಯ ಸಮಯದಲ್ಲಿ ಅವರ ಆಶೀರ್ವಾದವನ್ನು ಪಡೆದರು. ಇಬ್ಬರೂ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಕೇಂದ್ರ ಸಚಿವರು ಉಚ್ಚಿಲದ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಮತ್ತು ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೂ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು. ಈ ಪ್ರದೇಶದಲ್ಲಿ ಅವರು ತಮ್ಮ ವಾಸ್ತವ್ಯದ ಸಮಯದಲ್ಲಿ ಬಿಜೆಪಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಈ ಭೇಟಿ ಭಕ್ತರು ಮತ್ತು ಪಕ್ಷದ ಕಾರ್ಯಕರ್ತರ ಗಮನ ಸೆಳೆಯಿತು. ದೇವಾಲಯದ ಆವರಣದ ಸುತ್ತಲೂ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಸೀತಾರಾಮನ್ ಅವರು ಮಠದ ಸಂಕೀರ್ಣದಲ್ಲಿ ಸ್ವಲ್ಪ ಸಮಯ ಕಳೆದರು ಮತ್ತು ದೇವಾಲಯದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ನಂತರ ಅವರ ಕಾರ್ಯಕ್ರಮಗಳಿಗೆ ತೆರಳಿದರು.

ಸರ್ಕಾರಿ ಶಾಲೆಗೆ ಕಂಪ್ಯೂಟರ್ ಕೊಡುಗೆ



ಮೈಸೂರಿನ ದೊಡ್ಡಪೇಟೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೈಸೂರು ಯೋಗೀಸ್ ಟ್ರಸ್ಟ್ ವತಿಯಿಂದ ಉಚಿತವಾಗಿ ಕಂಪ್ಯೂಟರ್ ಹಾಗೂ ಮಕ್ಕಳ ಜ್ಞಾನಾಭಿವೃದ್ಧಿಗಾಗಿ ಹಲವು ಪುಸ್ತಕಗಳನ್ನು ನೀಡಲಾಯಿತು. ಈ ವೇಳೆ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ತಿರುಮಲೈ ಯೋಗ ಪ್ರಕಾಶ್, ಗೌರವಾಧ್ಯಕ್ಷರಾದ ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಖಜಾಂಚಿ ಲಯನ್ ಸುರೇಶ್, ಶಾಲೆಯ ಮುಖ್ಯೋಪಾಧ್ಯಾಯ ರವೀಶ್, ಶಿಕ್ಷಕರಾದ ಪ್ರತಿಭಾ, ವಿಶ್ವನಾಥ್, ಸ್ವಾಮಿ ಉಪಸ್ಥಿತರಿದ್ದರು.

ಮನೆ ಬೀಗ ಒಡೆದು 3.12 ಲಕ್ಷ ಮೌಲ್ಯದ ಚಿನ್ನ–ಬೆಳ್ಳಿ ಆಭರಣ ಕಳ್ಳತನ

ಮೈಸೂರು,ಜೂ.13(ಪಿಎಂ)– ಮನೆಯ ಬೀಗ ಒಡೆದು ಒಳ ನುಗ್ಗಿರುವ ಖದೀಮರು, ಒಟ್ಟು 3.12 ಲಕ್ಷ ರೂ. ಮೌಲ್ಯದ 24 ಗ್ರಾಂ ಚಿನ್ನಾಭರಣ, 120 ಗ್ರಾಂ ಬೆಳ್ಳಿ ಆಭರಣಗಳನ್ನು ಕಳ್ಳತನ ಮಾಡಿರುವ ಘಟನೆ ಮೇಟಗಳ್ಳಿಯ ಬಿಎಂಶ್ರೀ ನಗರದ ಅಂಬೇಡ್ಕರ್ ಜ್ಞಾನ ಲೋಕದಲ್ಲಿ ನಡೆದಿದೆ. ಇಲ್ಲಿನ ಡಿ.ಸ್ವಾತಿ ಎಂಬುವವರ ಮನೆಯಲ್ಲಿ ಈ ಕಳ್ಳತನ ನಡೆದಿದ್ದು, ಈ ಸಂಬಂಧ ಅವರು ನೀಡಿರುವ ದೂರಿನನ್ವಯ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಜೂ.11ರಂದು ಎಫ್‌ಐಆರ್ ದಾಖಲಾಗಿದೆ. ಮನೆ ಲಾಕ್ ಮಾಡಿಕೊಂಡು ಜೂ.7ರಂದು ಮಧ್ಯಾಹ್ನ ಪತಿಯೊಂದಿಗೆ ಸಂಬಂಧಿಕರ ಮನೆಗೆ ಹೋಗಿದ್ದು, ಜೂ.10ರಂದು ರಾತ್ರಿ ಸುಮಾರು 11 ಗಂಟೆಯಲ್ಲಿ ವಾಪಸ್ ಮನೆಗೆ ಬಂದಾಗ, ಮನೆ ಬೀಗವನ್ನು ಒಡೆದು ಒಳನುಗ್ಗಿ ಬೀರುವಿನ ಡ್ರಾಯರ್‌ನಲ್ಲಿದ್ದ ಚಿನ್ನದ ಉಂಗುರ, ಚಿನ್ನದ ಓಲೆ, ಜುಮ್ಕಿ, ಬೆಳ್ಳಿ ಚೈನು ಸೇರಿದಂತೆ ವಿವಿಧ ರೀತಿ ಆಭರಣಗಳನ್ನು ಕಳ್ಳತನ ಮಾಡಲಾಗಿತ್ತು ಎಂದು ಸ್ವಾತಿ ದೂರಿನಲ್ಲಿ ತಿಳಿಸಿದ್ದಾರೆ.

ಸೂಕ್ಷ್ಮತೆ ಪ್ರಾಮಾಣಿಕರಿಸುವಲ್ಲಿ ಕ್ವಾಂಟಂ ಥಿಯರಿ ಯಶಸ್ವಿ

ಮೈಸೂರು ವಿವಿ ನಿವೃತ್ತಿ ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ.ಕೆ.ಎಸ್.ಮಲ್ಲೇಶ್ ಅಭಿಮತ



ಕ್ವಾಂಟಂ ಜಗತ್ತು; ಸಾಮಾನ್ಯ ಅನುಭವದಾಚೆ’ ವಿಷಯ ಕುರಿತು ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಎಸ್.ಮಲ್ಲೇಶ್ ವಿವರಿಸುತ್ತಿರುವ ದೃಶ್ಯ

ಮೈಸೂರು, ಜೂ.13(ಎಸ್‌ಪಿಎನ್)– ನಿತ್ಯ ಜೀವನದ ಅನುಭವದಾಚೆಗೂ ಮತ್ತೊಂದು ಲೋಕವಿದೆ ಎಂಬುದನ್ನು ಕ್ವಾಂಟಂ ವಿಜ್ಞಾನ ನಿರೂಪಿಸುತ್ತದೆ. ಅದನ್ನು ಪ್ರಾಮಾಣಿಕರಿಸುವಲ್ಲಿ ಕ್ವಾಂಟಂ ಥಿಯರಿ ಯಶಸ್ವಿಯಾಗಿದೆ ಎಂದು ಮೈಸೂರು ವಿವಿ ಭೌತಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಎಸ್. ಮಲ್ಲೇಶ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ(ಐಐಇಟಿ) ವತಿಯಿಂದ ಏರ್ಪಡಿಸಿದ್ದ ‘ಕ್ವಾಂಟಂ ಜಗತ್ತು; ಸಾಮಾನ್ಯ ಅನುಭವದಾಚೆ’ ವಿಷಯ ಕುರಿತು ಮಾತನಾಡಿದರು.

ಜನರಿಗೆ ತಮ್ಮ ಸುತ್ತಮುತ್ತಲಿನಲ್ಲಿ ಕಾಣುವ ವಸ್ತುಗಳ ಚಲನ–ವಲನದ ಹಿಂದೆ ವಿಜ್ಞಾನವಿದೆ ಎಂದು ನಂಬುತ್ತಾರೆ. ಅದರಿಂದಾಚೆ ಮತ್ತೊಂದು ವಿಜ್ಞಾನವಿದೆ ಎಂಬುದನ್ನು ನಂಬಲು ಕೆಲವರು ಹಿಂದೂ–ಮುಂದು ನೋಡುತ್ತಾರೆ. ಇಂತಹ ಅಪನಂಬಿಕೆಗಳನ್ನು ಮೀರಿ ವಿಜ್ಞಾನವಿದೆ ಎಂಬುದನ್ನು ಕ್ವಾಂಟಂ ಥಿಯರಿ ಪ್ರತಿಪಾದಿಸಿದೆ. ಅಂದರೆ, ಪರಮಾಣು ಮತ್ತು ಅದಕ್ಕಿಂತಲೂ ಚಿಕ್ಕದಾದ ಕಣಗಳ(ಉದಾ: ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳು) ವರ್ತನೆಯನ್ನು ಅಧ್ಯಯನ ಮಾಡುವುದೇ ಕ್ವಾಂಟಂ ಥಿಯರಿಯ ಪ್ರಮುಖ ಲಕ್ಷಣ ಎಂದು ತಿಳಿಸಿದರು.

ನಮ್ಮ ಕಣ್ಣಿಗೆ ಗೋಚರಿಸುವ ನ್ಯೂಟನ್‌ನ ಭೌತಶಾಸ್ತ್ರದ ನಿಯಮಗಳಿಗಿಂತ ಭಿನ್ನವಾಗಿದ್ದು, ವಸ್ತುಗಳು ಏಕಕಾಲದಲ್ಲಿ ಅಲೆಗಳಂತೆ ಮತ್ತು ಕಣಗಳಂತೆ ವರ್ತಿಸಬಲ್ಲ ಸೃಷ್ಟಿಯ ರಹಸ್ಯಗಳನ್ನು ಕ್ವಾಂಟಂ ಜಗತ್ತು ಒಳಗೊಂಡಿದೆ. ಅತೀ ಸೂಕ್ಷ್ಮ ಕಣಗಳು ಏಕಕಾಲದ ಅನೇಕ ಸ್ಥಿತಿಗಳಲ್ಲಿ ಅಥವಾ ಸ್ಥಳಗಳಲ್ಲಿ ಅಸ್ತಿತ್ವದಲ್ಲಿರಲು ಪ್ರಯತ್ನಿಸುವ ಪ್ರಸಂಗವನ್ನು ಎಳೆಎಳೆಯಾಗಿ ತಿಳಿಸಿದರು.

ಇಂದಿನ ಕಂಪ್ಯೂಟರ್ ತಂತ್ರಜ್ಞಾನ, ಸಂವಹನ ವ್ಯವಸ್ಥೆ, ವೈದ್ಯಕೀಯ ಸಾಧನ ಹಾಗೂ ಭವಿಷ್ಯದ ನವೀನ ಆವಿಷ್ಕಾರಗಳ ಹಿಂದೆ ಕಾರ್ಯನಿರ್ವಹಿಸುತ್ತಿರುವ ಕ್ವಾಂಟಂ ವಿಜ್ಞಾನದ ಮೂಲಭೂತ ತತ್ವಗಳನ್ನು ಪರಿಚಯಿಸಿದೆ. ಈಗಿನ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ, ಕುತೂಹಲ ಹಾಗೂ ಸಂಶೋಧನಾ ಮನೋಭಾವವನ್ನು ಬೆಳೆಸುವ ವಿದ್ಯಾರ್ಥಿ ದಿಸೆಯಿಂದಲೇ ಬೆಳೆಸಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಧರ್ಮಸ್ಥಳ ಬುರುಡೆ ಕೇಸ್: ಚಿನ್ನಯ್ಯನ ಬ್ರೈನ್ ಮ್ಯಾಪಿಂಗ್ ಮಾಡುವಂತೆ ಎಸ್‌ಐಟಿಗೆ ಗಿರೀಶ್ ಮಟ್ಟಣ್ಣನವರ್ ದೂರು

ಮಂಗಳೂರು, ಜೂ.13– ಧರ್ಮಸ್ಥಳದ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಸ್ಕ್‌ಮ್ಯಾನ್ ಚಿನ್ನಯ್ಯ, ತಮ್ಮದೇ ಬುರುಡೆ ಗ್ಯಾಂಗ್ ವಿರುದ್ಧ ತಿರುಗಿ ಬಿದ್ದಿದ್ದಾನೆ. 200 ಕೋಟಿ ರೂ ಫಂಡಿಂಗ್ ಮತ್ತು ನಟ ಪ್ರಕಾಶ್ ರಾಜ್ ಹೆಸರನ್ನು ಉಲ್ಲೇಖಿಸಿ ನ್ಯಾಯಾಲಯಕ್ಕೆ ರಿಟ್ ಅರ್ಜಿ ಕೂಡ ಸಲ್ಲಿಸಿದ್ದಾನೆ. ಇದೀಗ ಗಿರೀಶ್ ಮಟ್ಟಣ್ಣನವರ್, ಚಿನ್ನಯ್ಯ ಬ್ರೈನ್ ಮ್ಯಾಪಿಂಗ್ ಮತ್ತು ಆತ ಸಲ್ಲಿರುವ ರಿಟ್ ಅರ್ಜಿ ಮೇಲೆ ತನಿಖೆ ಮಾಡುವಂತೆ ಎಸ್‌ಐಟಿಗೆ ದೂರು ನೀಡಿದ್ದಾರೆ.

ಧರ್ಮಸ್ಥಳ ವಿರುದ್ಧ ಬುರುಡೆ ಗ್ಯಾಂಗ್ ಷಡ್ಯಂತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ದಿಢೀರ್ ಭೇಟಿ ನೀಡಿದ ಗಿರೀಶ್ ಮಟ್ಟಣ್ಣನವರ್, ಟಿ.ಜಯಂತ್ ಮತ್ತು ಯೂಟ್ಯೂಬರ್ ಅಭಿಷೇಕ್, ಚಿನ್ನಯ್ಯ ವಿರುದ್ಧ ದೂರು ನೀಡಿದ್ದಾರೆ.



ಚಿನ್ನಯ್ಯನ ಹೇಳಿಕೆ ಪ್ರಕಾರ ನಮ್ಮೆಲ್ಲರನ್ನು ತನಿಖೆಗೆ ಒಳಪಡಿಸಬೇಕು. ನನ್ನ ಬ್ರೈನ್ ಮ್ಯಾಪಿಂಗ್ ಅನ್ನು ಲೈವ್‌ನಲ್ಲಿ ಮಾಡಲಿ ಎಂದು ಹೇಳಿದ್ದಾರೆ. 200 ಕೋಟಿ ರೂ ಹಣದ ತನಿಖೆ ಸೇರಿದಂತೆ ಆತ ಸಲ್ಲಿಸಿರುವ ರಿಟ್ ಅರ್ಜಿ ಮೇಲೆ ತನಿಖೆ ಮಾಡುವಂತೆ ಒತ್ತಾಯಿಸಿದ್ದಾರೆ. ಆತನ ಜಾಮೀನು ಅರ್ಜಿ ರದ್ದು ಮಾಡಲು ನ್ಯಾಯಾಲಯಕ್ಕೆ ಎಸ್‌ಐಟಿ ಅರ್ಜಿ ಹಾಕಬೇಕು ಮತ್ತು ಚಿನ್ನಯ್ಯನಿಗೆ ಪೊಲೀಸ್ ಭದ್ರತೆ ನೀಡಬೇಕು ಎಂದು ಗಿರೀಶ್ ಮಟ್ಟಣ್ಣನವರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೂರು ನೀಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಗಿರೀಶ್ ಮಟ್ಟಣ್ಣನವರ್, ಚಿನ್ನಯ್ಯನ ಬೇಡಿಕೆಯಂತೆ ಚಂದ್ರಶೇಖರ್ ಸ್ವಾಮೀಜಿ ಬಳಿ ನಾವು ಹೋಗಿದ್ದು ನಿಜ. ಪಾಯಿಂಟ್ ತೋರಿಸುವಾಗ ಎಲ್ಲೆಲ್ಲೋ ಹೋಗುತ್ತಿದ್ದೇನೆ. ಕಣ್ಣು ಮಂಜು ಮಂಜಾಗುತ್ತಿದೆ ಅಂತಾ ಚಿನ್ನಯ್ಯ ಹೇಳಿದ್ದ. ಹೀಗಾಗಿ ಮಾಟ, ಮಂತ್ರ ಸಂಬಂಧ ಚಂದ್ರಶೇಖರ ಸ್ವಾಮೀಜಿ ಬಳಿ ಹೋಗಿದ್ವಿ. ಅವರು ಯಾವ ಪೊಲೀಸರಿಗೂ ಶಿಫಾರಸ್ಸು ಮಾಡಿಲ್ಲ ಎಂದಿದ್ದಾರೆ.

ಪ್ರಕಾಶ್ ರಾಜ್ ಅವರೇ ಅದನ್ನು ಹೇಳುತ್ತಾರೆ: ಚಿನ್ನಯ್ಯ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ನಟ ಪ್ರಕಾಶ್‌ರಾಜ್ ಬೆಂಬಲ ವಿಚಾರವಾಗಿ ಮಾತನಾಡಿದ ಅವರು, ಪ್ರಕಾಶ್ ರಾಜ್ ಕರೆ ಮಾಡಿದ್ದ ವಿಚಾರ ನಾನು ಹೇಳಲ್ಲ. ಪ್ರಕಾಶ್ ರಾಜ್ ಅವರೇ ಅದನ್ನು ಹೇಳುತ್ತಾರೆ. ನೈತಿಕವಾಗಿ ಸಾಕಷ್ಟು ಜನ ಬೆಂಬಲ ಕೊಟ್ಟಿದ್ದಾರೆ ಎಂದರು.

ಚಿನ್ನಯ್ಯನ ಬಳಿ ಕೈ–ಕಾಲು ಒತ್ತಿಸಿಕೊಂಡಿದ್ದು ನಿಜ ಎಂದ ಮಟ್ಟಣ್ಣನವರ್: ಇನ್ನು ಚಿನ್ನಯ್ಯನಿಗೆ ಹಿಂಸೆ ಕೊಟ್ಟು ಕೈ–ಕಾಲು ಒತ್ತಿಸಿಕೊಂಡ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚಿನ್ನಯ್ಯನ ಬಳಿ ಕೈ–ಕಾಲು ಒತ್ತಿಸಿಕೊಂಡಿದ್ದು ನಿಜ. ಆತ ನಮ್ಮ ಜೊತೆ ಬಹಳ ಪ್ರೀತಿಯಿಂದ ಇದ್ದ. ನಾವು ಬೇಡ ಅಂದ್ರು ಕಾಲು ಒತ್ತುತ್ತಿದ್ದ. ನನಗೆ ಕಾಲು ನೋವಿದ್ದು ನನ್ನ ಪತ್ನಿ ಒಂದು ತೈಲ ಕೊಟ್ಟಿದ್ದರು. ಅದು ಚಿನ್ನಯ್ಯನಿಗೆ ಗೊತ್ತಿತ್ತು. ಆದ್ದರಿಂದ ಆತನೇ ಹಿಂದೆ ಬಿದ್ದು ನನ್ನ ಕಾಲನ್ನು ಒತ್ತುತ್ತಿದ್ದ ಎಂದು ಹೇಳಿದ್ದಾರೆ.

ಬಲವಂತ ಹಣ ವಸೂಲಿ ವಿರೋಧಿಸಿ ಪೋಷಕರ ಪ್ರತಿಭಟನೆ

ಕೆ.ಆರ್.ಪೇಟೆ, ಜೂ.13–ಪಟ್ಟಣದ 116 ವರ್ಷಗಳ ಇತಿಹಾಸ ಇರುವ ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಬಲವಂತವಾಗಿ ಹಣ ವಸೂಲಿ ಮಾಡಲಾಗುತ್ತಿದೆ. 1ರಿಂದ 10ನೇ ತರಗತಿವರೆಗೆ ಸರ್ಕಾರ ಉಚಿತ ಶಿಕ್ಷಣ ನೀಡುವಂತೆ ಆದೇಶಿಸಿದ್ದರೂ ಶಾಲೆಯ ಎಸ್‌ಡಿಎಂಸಿ ಆಡಳಿತ ಮಂಡಳಿಯು ವಿದ್ಯಾರ್ಥಿಯಿಂದ ಸಾವಿರ ರೂ. ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಪೋಷಕರು ಪ್ರತಿಭಟನಾ ಮೆರವಣಿಗೆ ನಡೆಸಿದರು.


ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಪೋಷಕರಿಂದ ಬಲವಂತವಾಗಿ ಹಣ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಪೋಷಕರು ಪೊಲೀಸ್ ಠಾಣೆಯೆದುರು ಪ್ರತಿಭಟನೆ ನಡೆಸಿದರು.

ಪಟ್ಟಣದ ಕೆ.ಪಿ.ಎಸ್.ಶಾಲೆಯ ಆವರಣದಿಂದ ಪೊಲೀಸ್ ಠಾಣೆಯವರೆಗೆ ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ಮಹಿಳೆಯರೂ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಪೋಷಕರು ಭಾಗವಹಿಸಿ ಆಡಳಿತ ಮಂಡಳಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣ ಠಾಣೆಯ ಪೊಲೀಸರು ಕನ್ನಡಪರ ಸಂಘಟನೆ ಕಾರ್ಯಕರ್ತರು ಹಾಗೂ ಕೆಪಿಎಸ್ ಶಾಲೆಯವರು ಪೋಷಕರನ್ನು ಸಮಾಧಾನಪಡಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯುವಲ್ಲಿ ಯಶಸ್ವಿಯಾದರು. ದೇಣಿಗೆ ಸಂಗ್ರಹಕಾರರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಎಸ್.ಡಿ.ಎಂ.ಸಿ ಸದಸ್ಯರಾದ ಲಕ್ಷ್ಮೀಕಾಂತ್, ಎನ್.ಜೆ.ಮಂಜು, ಲೋಕೇಶ್, ಮಮತ, ಕಾವ್ಯ, ವಾಜಿಯಾಭಾನು ಸೇರಿದಂತೆ ನೂರಾರು ಪೋಷಕರು ಪ್ರತಿಭಟನೆಯಲ್ಲಿ ಭಾಗವಹಿಸಿ ದೇಣಿಗೆ ಸಂಗ್ರಹ ಮಾಡುತ್ತಿರುವುದಕ್ಕೆ ತೀವ್ರ ವಿರೋಧ ವನ್ನು ವ್ಯಕ್ತಪಡಿಸಿದರು.

ವಿವಿಧ ಕನ್ನಡಪರ ಸಂಘಟನೆಗಳಿಂದ ದೇಣಿಗೆ ಸಂಗ್ರಹಣೆ

ಪಟ್ಟಣದ ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯ ಎಸ್.ಡಿ.ಎಂ.ಸಿ. ಆಡಳಿತ ಮಂಡಳಿಯು ಉಚಿತ ಶಿಕ್ಷಣ ನೀಡುವ ಬದಲು ಪ್ರತಿ ವಿದ್ಯಾರ್ಥಿಯಿಂದ ಸಾವಿರ ರೂಪಾಯಿ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಜಯ ಕರ್ನಾಟಕ ಸಂಘಟನೆ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ, ಕೆ.ಆರ್.ಎಸ್ ಪಕ್ಷದ ಕಾರ್ಯಕರ್ತರು ಪಟ್ಟಣದಲ್ಲಿ ಅಂಗಡಿ ಮುಂಗಟ್ಟುಗಳು, ಫುಟ್‌ಪಾತ್ ವ್ಯಾಪಾರಿಗಳು, ಮೆಡಿಕಲ್ ಶಾಪ್‌ಗಳು, ವರ್ತಕರು ಹಾಗೂ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿದರು.

ಶೂ. ಪಾಲೀಶ್‌ನಿಂದ ಸಂಗ್ರಹವಾಗುವ ಹಣವನ್ನು ಕೆಪಿಎಸ್ ಶಾಲೆಯ ಖಾತೆಗೆ ಜಮಾ ಮಾಡಲು ನಿರ್ಧಾರ ಕೈಗೊಂಡರು. ಬಲವಂತವಾಗಿ ಹಣ ವಸೂಲಿ ನಿಲ್ಲಿಸಬೇಕು. ಸ್ವಯಂ ಪ್ರೇರಿತವಾಗಿ ಕೊಡುವವರಿಂದ ಪಡೆದುಕೊಂಡರೆ ನಮ್ಮದೇನು ಅಭ್ಯಂತರವಿಲ್ಲ ಎಂದರು.


ಪೋಷಕರಿಂದ ಬಲವಂತವಾಗಿ ಹಣ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ವಿವಿಧ ಸಂಘಟನೆಯ ಕಾರ್ಯಕರ್ತರು ಹಣ ಸಂಗ್ರಹ ಮಾಡಿ ವಿನೂತನ ಪ್ರತಿಭಟನೆ ನಡೆಸಿದರು.

ಈ ವೇಳೆ ದೇಣಿಗೆ ಸಂಗ್ರಹ ಕಾರ್ಯಕ್ರಮದಲ್ಲಿ ತಾಲೂಕು ಜಯಕರ್ನಾಟಕ ಸಂಘಟನೆಯ ಅಧ್ಯಕ್ಷ ಹೆಚ್. ಆರ್. ಸೋಮಶೇಖರ್, ಮಹಿಳಾ ಘಟಕದ ಅಧ್ಯಕ್ಷೆ ಜಯಲಕ್ಷ್ಮಿ, ಮಂಜುಳಾ, ಶಾರದಮ್ಮ ಕರವೇ ಸ್ವಾಭಿಮಾನಿ ಸೇನೆಯ ಜಿಲ್ಲಾಧ್ಯಕ್ಷ ಎ.ಸಿ. ಕಾಂತರಾಜು, ತಾಲೂಕು ಅಧ್ಯಕ್ಷ ವಿ.ಕಿರಣ್, ಮೈಸೂರು ಜಿಲ್ಲಾಧ್ಯಕ್ಷ ಸಮೀರ್, ಕೆ.ಆರ್.ಎಸ್. ಪಕ್ಷದ ಟಾಕೀಸ್ ಶ್ರೀನಿವಾಸ್, ನಾಗರಾಜು, ಸಾಮಾಜಿಕ ಹೋರಾಟಗಾರ ಹೆಚ್.ಬಿ. ಮಂಜುನಾಥ್, ಆರ್ಟ್ಸ್ ಮುರುಗೇಶ್, ಜಯಕರ್ನಾಟಕ ಸಂಘಟನೆಯ ಹಲವು ಹೋರಾಟಗಾರರು ಪ್ರತಿಭಟನೆಯಲಿದ್ದರು

ನೀರಿನ ಸಂಪಿಗೆ ಬಿದ್ದು ಮಗು ಸಾವು

ಪಾಂಡವಪುರ, ಜೂ.13–ಮನೆಯಂಗಳದಲ್ಲಿ ಆಟವಾಡುತ್ತಿದ್ದ ಮಗು ಆಕಸ್ಮಿಕವಾಗಿ ನೀರಿನ ಸಂಪಿಗೆ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಲಕ್ಷ್ಮೀಸಾಗರದಲ್ಲಿ ಶನಿವಾರ ನಡೆದಿದೆ.


ವಿನೀಶ್ ಮೃತ ಮಗು

ಗ್ರಾಮದ ಸುಷ್ಮಾ ಮತ್ತು ಹರೀಶ್ ದಂಪತಿಗಳ ಪುತ್ರ ವಿನೀಶ್ (2) ಮೃತ ಬಾಲಕ.

ಘಟನೆ ವಿವರ : ಮೃತ ಮಗುವಿನ ಪಾಲಕರು ಗ್ರಾಮದಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದು, ಘಟನೆಯ ಮುನ್ನ ಮಗುವಿನ ತಂದೆ ಹರೀಶ್ ಕೆಲಸ ನಿಮಿತ್ತ ಮನೆಯಿಂದ ಹೊರಗೆ ಹೋಗಿದ್ದು, ತಾಯಿ ಮನೆಗೆಲಸದಲ್ಲಿ ನಿರತರಾಗಿದ್ದರೆನ್ನಲಾಗಿದೆ. ಮಗು ಮನೆಯಲ್ಲಿ ಚೆಂಡಿನ ಆಟವಾಡುತ್ತಿದ್ದು, ಚೆಂಡು ಆಕಸ್ಮಿಕವಾಗಿ ಸಂಪಿಗೆ ಉರುಳಿದೆ. ಅದನ್ನು ಹಿಂಬಾಲಿಸುತ್ತಾ ಹೋದ ಮಗು ಆಕಸ್ಮಿಕವಾಗಿ ಸಂಪಿಗೆ ಬಿದ್ದು ಸಾವನ್ನಪ್ಪಿರುವುದಾಗಿ ತಿಳಿದು ಬಂದಿದೆ. ಮಗುವಿನ ಅಜ್ಜಿ ಮತ್ತು ತಾಯಿ ಮಗುವನ್ನು ತಂದೆ ಹೊರಗೆ ಕರೆದುಕೊಂಡು ಹೋಗಿರಬೇಕು ಎಂದು ಭಾವಿಸಿ ಸುಮ್ಮನಾಗಿದ್ದಾರೆ. ಹರೀಶ್ ಮನೆಗೆ ಹಿಂದಿರುಗಿದ ಕೂಡಲೇ ಮಗು ಕಾಣದಿರುವುದಕ್ಕೆ ಗಾಬರಿಗೊಂಡು ಹುಡುಕಾಟ ನಡೆಸಿದ್ದಾರೆ. ಈ ವೇಳೆ ಮಗು ಸಂಪಿನಲ್ಲಿ ಕಂಡು ಬಂದಿದೆ. ತಕ್ಷಣ ಮಗುವನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತ್ತಾದರೂ ಆ ವೇಳೆಗಾಗಲೇ ಮಗು ಸಾವನ್ನಪ್ಪಿರುವುದು ದೃಢಪಟ್ಟಿದೆ. ಗ್ರಾಮದಲ್ಲಿ ಶವ ಸಂಸ್ಕಾರ ನಡೆಸಲಾಯಿತು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಗ್ರಾಮಸ್ಥರ ಆಕ್ರಂದನ :ಎರಡು ವರ್ಷದ ಮಗು ಸಂಪಿಗೆ ಬಿದ್ದು ಸಾವನ್ನಪ್ಪಿದ ಸುದ್ದಿ ಹರಡುತ್ತಿದ್ದಂತೆ ಗ್ರಾಮದ ಜನರು ಮನೆ ಮುಂದೆ ಜಮಾವಣೆ ಗೊಂಡು ವಿಧಿಯಾಟಕ್ಕೆ ಶಪಿಸಿದರು. ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

ರೈತರು ವಾಣಿಜ್ಯ ಬೆಳೆಗಳನ್ನು ಬೆಳೆದು ಉದ್ಯಮಿಗಳಾಗಿ


ಮಾರಾಟಗಾರರ ಸಮಾವೇಶವನ್ನು ಶಾಸಕ ಪಿ.ರವಿಕುಮಾರ್ ಗಣಿಗ ಉದ್ಘಾಟಿಸಿದರು.

ಮಂಡ್ಯ: ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವನ್ನು ಬಳಸಿಕೊಂಡು ಹೆಚ್ಚು ರೈತರು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಮೂಲಕ ರೈತರು ಉದ್ಯಮಿಗಳಾಗಬೇಕು ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಮಂಡ್ಯ ಫಸ್ಟ್ ಸರ್ಕಲ್, ಕೃಷಿ ಇಲಾಖೆ, ಬೆಲ್ಲದ ನಾಡು ರೈತರ ಉತ್ಪಾದಕರ ಕಂಪನಿಗಳ ಒಕ್ಕೂಟ ಸಹಯೋಗದೊಂದಿಗೆ ಎರಡು ದಿನಗಳ ಕಾಲ ಕೃಷಿ ಉದ್ಯಮಶೀಲ ಅಧಿವೇಶನ ಏರ್ಪಡಿಸಿದ್ದರು. ಮಾರಾಟಗಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ರೈತರು ಸಂಸ್ಕರಣೆ, ಮೌಲ್ಯವರ್ಧನೆ, ಮಾರ್ಕೆಟಿಂಗ್ ಹಾಗೂ ಆರ್ಥಿಕ ನಿರ್ವಹಣೆ ಸೇರಿದಂತೆ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ರೈತರು ಕೇವಲ ಉತ್ಪಾದಕರಾಗಿಯೇ ಉಳಿಯದೆ ಕೃಷಿ ಉದ್ಯಮಿಗಳಾಗಿ ಬೆಳೆಯಬೇಕು ಎಂಬ ದೃಷ್ಟಿಯಿಂದ ಕಾರ್ಯಾಗಾರವನ್ನು ಆಯೋಜಿಸಿದ್ದು, ಉದ್ಯಮಿಗಳು ಕಾರ್ಯಾಗಾರ ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಫಸ್ಟ್ ಸರ್ಕಲ್‌ನ ಮಾರ್ಗದರ್ಶಕ ಜಯರಾಮ್ ರಾಯಪುರ ಮಾತನಾಡಿ, ಜಿಲ್ಲೆಯ ರೈತರು ನೀರಾವರಿ ಸೌಲಭ್ಯವನ್ನು ಬಳಸಿಕೊಂಡು ಆದಾಯ ಸಿಗುವಂತಹ ವಾಣಿಜ್ಯ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸುಬಲರಾಗಿಸುವುದು ಉದ್ದೇಶವಾಗಿದೆ ಎಂದರು.

ಬೆಂಗಳೂರು ಫಸ್ಟ್ ಸರ್ಕಲ್‌ನ ಅಧ್ಯಕ್ಷ ಡಾ.ಡಿ. ಮುನಿರಾಜು, ಕೋಲಾರ ಫಸ್ಟ್ ಸರ್ಕಲ್‌ನ ಅಧ್ಯಕ್ಷ ಸಿ.ಎಂ.ಆರ್.ಶ್ರೀನಾಥ್, ಖ್ಯಾತ ಉದ್ಯಮಿ ಜಯರಾಮ್ ಕಿಮ್ಮನೆ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್ ಅಶೋಕ್, ಫಸ್ಟ್ ಸರ್ಕಲ್ ಅಧ್ಯಕ್ಷ ಡಾ.ಬಿ.ಶಿವಲಿಂಗಯ್ಯ, ಕಾರ್ಯಾಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಕಾರಸವಾಡಿ ಮಹದೇವ್, ಉಪಾಧ್ಯಕ್ಷ ಪುಟ್ಟರಾಜು, ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್ ಗೌಡ ಉಪಸ್ಥಿತರಿದ್ದರು.


ಪಾಂಡವಪುರ ಪಟ್ಟಣದ ಆದಿತ್ಯ ಶಿಕ್ಷಣ ಸಂಸ್ಥೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಿತು.

ಹುಂಡಿ ಹಣ ಕಳವು: ಜೂ.16ರಂದು ವ್ಯವಸ್ಥಾಪನಾ ಸಮಿತಿಯ ತುರ್ತು ಸಭೆ

ಮೇಲುಕೋಟೆ, ಜೂ.13– ಇಲ್ಲಿನ ಪ್ರಖ್ಯಾತ ಯೋಗಾನರಸಿಂಹಸ್ವಾಮಿ ಬೆಟ್ಟದ ಹುಂಡಿಯಲ್ಲಿ ಕಳ್ಳತನ ನಡೆಯುತ್ತಿರುವ ಆರೋಪದ ಎಫ್.ಐ.ಆರ್ ಪ್ರಕರಣದ ಸಂಬಂಧ ಜೂ. 16ರಂದು ವ್ಯವಸ್ಥಾಪನಾ ಸಮಿತಿಯ ತುರ್ತುಸಭೆ ಕರೆಯಲಾಗಿದ್ದು ನಿಯಮ ಹಾಗೂ ಕಾನೂನಿನಂತೆ ಕ್ರಮ ಜರುಗಿಸಲಾಗುತ್ತದೆ ಎಂದು ಸಮಿತಿ ಅಧ್ಯಕ್ಷ ಕನಗೋನಹಳ್ಳಿ ಪರಮೇಶ್‌ಗೌಡ ತಿಳಿಸಿದ್ದಾರೆ.


ಪರಮೇಶ್‌ಗೌಡ

ಯೋಗನರಸಿಂಹಸ್ವಾಮಿ ಬೆಟ್ಟದ ಹುಂಡಿಯಲ್ಲಿ ಚಿನ್ನಬೆಳ್ಳಿ, ಕಾಣಿಕೆಹಣ ಕಳುವಾಗುತ್ತಿರುವ ಶಂಕೆಯಡಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ವ್ಯವಸ್ಥಾಪನಾ ಸಮಿತಿ ಅಸ್ತಿತ್ವಕ್ಕೆ ಬರುವ ಮೊದಲೇ ಪ್ರಕರಣ ನಡೆದಿದೆ. ಈ ವಿಚಾರ ಈವರೆಗೆ ನಡೆದ ವ್ಯವಸ್ಥಾಪನಾ ಯಾವುದೇ ಸಭೆಯಲ್ಲೂ ಚರ್ಚೆಯಾಗಿಲ್ಲ ಎಂದರು.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಮಂಗಳವಾರ ರಾತ್ರಿ ಪೊಲೀಸರಿಗೆ ದೂರು ನೀಡಿ ಎಫ್‌ಐಆರ್ ದಾಖಲಾದ ನಂತರವಷ್ಟೇ ನನಗೆ ಹಾಗೂ ಸಮಿತಿಯ ಸದಸ್ಯರ ಗಮನಕ್ಕೆ ಬಂದಿದೆ. ನಾವೆಲ್ಲಾ ಅನಪಚಾರಕ್ಕಾಗಿ ಸಭೆ ಸೇರಿ ಘಟನೆಯ ಸಂಪೂರ್ಣ ವಿವರ ಹಾಗೂ ದಾಖಲೆಗಳನ್ನು ಎರಡು ದಿನಗಳೊಳಗೆ ವ್ಯವಸ್ಥಾಪನಾ ಸಮಿತಿಯ ಎಲ್ಲಾ ಸದಸ್ಯರಿಗೆ ಒದಗಿಸಲು ದೇಗುಲದ ಇಒಗೆ ಸೂಚಿಸಿದ್ದೇವೆ. ದಾಖಲೆಗಳು ಬಂದ ನಂತರ ಜೂ.16ರಂದು ತುರ್ತು ಸಭೆ ಸೇರಿ ಧಾರ್ಮಿಕದತ್ತಿ ಕಾಯ್ದೆ ಹಾಗೂ ಕಾನೂನಿನಂತೆ ಕ್ರಮವಹಿಸಲಾಗುತ್ತದೆ ಎಂದರು.

ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ಸನ್ನಿಧಿಯ ಪಾವಿತ್ರತೆ ಮತ್ತು ಪರಂಪರೆಯನ್ನು ಕಾಪಾಡಲು ವ್ಯವಸ್ಥಾಪನಾ ಸಮಿತಿ ಬದ್ಧವಾಗಿದ್ದು, ಭಕ್ತರ ಭಾವನೆಗಳಿಗೆ ಧಕ್ಕೆ ತರುವ ಕಾರ್ಯವಾಗಬಾರದು. ಯೋಗನರಸಿಂಹಸ್ವಾಮಿ ಬೆಟ್ಟದ ದೇವಾಲಯದಲ್ಲಿ ನಡೆದಿದೆ ಎನ್ನಲಾದ ಹುಂಡಿಯಲ್ಲಿನ ಕಾಣಿಕೆ ಚಿನ್ನ, ಬೆಳ್ಳಿ ಕಳ್ಳತನವಾಗುತ್ತಿರುವ ಶಂಕೆಯ ಇಒ ದೂರಿನ ಸಂಬಂಧ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕಾನೂನಿನ ಪ್ರಕಾರ ಕ್ರಮವಹಿಸುತ್ತೇವೆ ಎಂದೂ ಅವರು ತಿಳಿಸಿದರು.

ಒಂದನೇ ಪುಟದಿಂದ

ಭ್ರಷ್ಟಾಚಾರ ಮುಕ್ತ ಕರ್ನಾಟಕ

ಭ್ರಷ್ಟಾಚಾರ ಮುಕ್ತ ಕರ್ನಾಟಕ: ಭ್ರಷ್ಟಾಚಾರ ಮುಕ್ತ ಕರ್ನಾಟಕ ನಿರ್ಮಾಣ ನಮ್ಮ ಸರ್ಕಾರದ ಗುರಿಯಾಗಿದೆ. ಯಾರು ಕೂಡ ತಾಲೂಕು ಹಾಗೂ ಜಿಲ್ಲಾ ಅಧಿಕಾರಿ ಗಳ ಕಚೇರಿಯಲ್ಲಿ 10 ರೂಪಾಯಿ ಕೂಡ ಲಂಚ ನೀಡಬಾರದು. ಇದರ ವಿರುದ್ಧ ದೂರು ನೀಡಲು ಸರ್ಕಾರಿ ಕಚೇರಿಗಳಲ್ಲಿ ದೂರವಾಣಿ ಸಂಖ್ಯೆ ಹಾಕಲಾಗಿರುತ್ತದೆ. ಕೆಲವರು ಸುಳ್ಳು ಪ್ರಕರಣ ದಾಖಲಿಸಿ ಸುಲಿಗೆ ಮಾಡುವವರು ಇದ್ದಾರೆ. ಅದರ ಬಗ್ಗೆಯೂ ನಾವು ಪರಿಶೀಲನೆ ಮಾಡುತ್ತೇವೆ. ನಾನೇ ಆಗಲಿ, ನಮ್ಮ ಸಚಿವರುಗಳೇ ಆಗಲಿ, ಶಾಸಕರುಗಳೇ ಆಗಲಿ ಯಾವುದಾದರೂ ತಪ್ಪನ್ನು ಮಾಡು ಎಂದರೆ ಮಾತು ಕೇಳಬೇಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಯಾರಾದರೂ ಕಾನೂನು ವಿರುದ್ಧ ಕೆಲಸ ಮಾಡಲು ಒತ್ತಡ ಹಾಕಲು ಬಂದರೆ ಕೂಡಲೇ ನನಗೆ ಮಾಹಿತಿ ನೀಡಿ ಎಂದು ತಿಳಿಸಿದ್ದೇನೆ ನಾನು ಏಕಾಏಕಿ ಎಲ್ಲವನ್ನು ಒಂದೇ ಬಾರಿಗೆ ಬದಲಿಸುತ್ತೇನೆ ಎಂದು ಹೇಳುತ್ತಿಲ್ಲ. ಈ ಪ್ರಯತ್ನದಲ್ಲಿ ನಿಮ್ಮ ಸಹಕಾರ ಬೇಕಿದೆ ಎಂದು ಮನವಿ ಮಾಡಿದ್ದೇನೆ. ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತಹ ಕೆಲಸಕ್ಕೆ ಅವಕಾಶ ನೀಡಬೇಡಿ ಎಂದಿದ್ದೇನೆ. ಹಾಗೆಯೇ ಅಧಿಕಾರಿಗಳ ವರ್ಗದಲ್ಲಿ ನಾವು ಸಾಮಾಜಿಕ ನ್ಯಾಯವನ್ನು ಪಾಲಿಸುತ್ತೇವೆ ಎಂದು ಹೇಳಿದರು.

ತಾಲೂಕು ಮಟ್ಟದಲ್ಲಿ ರಿಂಗ್ ರಸ್ತೆ ಗ್ರಿಡ್: ಸಂಚಾರ ಯೋಜನೆ ಸುಲಭಗೊಳಿಸಲು ಈಗಿನಿಂದಲೇ ಎಲ್ಲಾ ತಾಲೂಕುಗಳಲ್ಲಿ ವರ್ತುಲ ರಸ್ತೆ ನಿರ್ಮಿಸಲು ಯೋಜನೆ ರೂಪಿಸಬೇಕು. ನಾವು ಕೂಡಲೇ ರಸ್ತೆ ಮಾಡದಿದ್ದರೂ ಇದಕ್ಕಾಗಿ ಗ್ರಿಡ್ ರೂಪಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ತಾಲೂಕು ಹಾಗೂ ಜಿಲ್ಲಾ ಕೇಂದ್ರ ಪ್ರದೇಶಗಳಲ್ಲಿ ಇದಕ್ಕೆ ಯೋಜನೆ ರೂಪಿಸಲು ನಿರ್ದೇಶನ ನೀಡಲಾಗಿದೆ ಎಂದರು.

ತಿಂಗಳಲ್ಲಿ ಮಕ್ಕಳಿಗೆ ಸಮವಸ್ತ್ರ: ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಮಕ್ಕಳನ್ನು ಶಾಲೆಗೆ ಕರೆತರುವಂತೆ ಮಾಡಬೇಕು. ಎಷ್ಟು ಶಾಲೆಗಳಲ್ಲಿ ಶೂನ್ಯ ಹಾಜರಾತಿಗಳಿವೆ ಎಂಬ ಬಗ್ಗೆ ಮಾಹಿತಿ ಇದ್ದು, ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು. ವಿದ್ಯಾರ್ಥಿಗಳ ಸಮವಸ್ತ್ರ, ಶೂ, ಪಠ್ಯ ಪುಸ್ತಕ ಮುಂದಿನ ಒಂದು ತಿಂಗಳಲ್ಲಿ ವಿತರಣೆಯಾಗಬೇಕು. ಶೂನ್ಯ ದಾಖಲಾತಿ 964 ಶಾಲೆಗಳಿವೆ. 1–5 ಮಕ್ಕಳ ದಾಖಲಾತಿ ಇರುವ ಶಾಲೆಗಳು 3,542 ಶಾಲೆಗಳು, 6–20 ವಿದ್ಯಾರ್ಥಿಗಳ ದಾಖಲಾತಿ ಇರುವ ಶಾಲೆಗಳ ಪ್ರಮಾಣ 12,696 ಶಾಲೆಗಳಿವೆ. 21–30 ಮಕ್ಕಳ ದಾಖಲಾತಿ ಇರುವ 4,997 ಶಾಲೆಗಳಿರುವ ಮಾಹಿತಿ ನಮ್ಮ ಬಳಿ ಇದೆ ಎಂದರು.

ಮಳೆ ಕೊರತೆ; ಮುಂಜಾಗ್ರತೆ: ಮಳೆಗಾಲ ಆರಂಭವಾಗುತ್ತಿದ್ದು, ಬಿತ್ತನೆ ಕಾರ್ಯ ಶುರುವಾಗುತ್ತಿದೆ. ಬಿತ್ತನೆ ಬೀಜ, ರಸಗೊಬ್ಬರ ಲಭ್ಯತೆಗೆ ಕ್ರಮವಹಿಸಬೇಕು. ಎಲ್ ನಿನೋ ಪ್ರಭಾವ ಬೀರುವ ಸಾಧ್ಯತೆ ಇದ್ದು, ಅಲ್ಪಾವಧಿ ಮಳೆ ಮುನ್ಸೂಚನೆ ಇದೆ. ಇದನ್ನು ನಿಭಾಯಿಸಲು ಕ್ರಮ ವಹಿಸಬೇಕು. ಮಳೆ ಕೊರತೆ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಶೇ.30 ಮಳೆ ಕೊರತೆ ಇದ್ದು, ಮೇವಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಪ್ರತಿ ಹಾಸ್ಟೆಲ್‌ಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭೇಟಿ ನೀಡಿ ಅಲ್ಲಿನ ಆಹಾರ ಗುಣಮಟ್ಟ ಪರಿಶೀಲಿಸಲು ಸೂಚಿಸಲಾಗಿದೆ ಎಂದರು.

ನಕಲಿ ಫೈನಾನ್ಸ್ ಸ್ಕೀಂ ನಿಗ್ರಹ: ನಕಲಿ ಫೈನಾನ್ಸ್‌ಗಳ ನಿಗ್ರಹಕ್ಕೆ ಸರ್ಕಾರ ಮಸೂದೆ ಜಾರಿಗೆ ತಂದಿದ್ದರೂ ಇಂತಹ ಪ್ರಕರಣ ಬೆಳಕಿಗೆ ಬರುತ್ತಿದ್ದು, ಎಸ್ಪಿ ಹಾಗೂ ಜಿಲ್ಲಾಧಿಕಾರಿಗಳು ತಮ್ಮ ಗುಪ್ತಚರವನ್ನು ಬಳಸಿ ಇಂತಹ ಸ್ಕೀಂಗಳಿಗೆ ಕಡಿವಾಣ ಹಾಕಬೇಕು ಎಂದು ಸೂಚಿಸಲಾಗಿದೆ. ಗಾಂಜಾ, ಡ್ರಗ್ಸ್ ಪ್ರಕರಣಗಳಿಗೆ ಕಡಿವಾಣ ಹಾಕಲು ಸರ್ಕಾರ ತೀರ್ಮಾನಿಸಿದೆ. ನಮ್ಮ ಪೊಲೀಸ್ ಅಧಿಕಾರಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಡ್ರಗ್ ಪೆಡ್ಲರ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

ಜನಸಂಪರ್ಕ ಸಭೆ: ಪ್ರತಿ ಪೊಲೀಸ್ ಠಾಣೆಯಲ್ಲಿ ಐದು ಪೊಲೀಸರ ತಂಡವನ್ನು ರಚಿಸಿ ರೌಡಿಗಳನ್ನು ನಿಗ್ರಹಿಸಲು ಸೂಚಿಸಲಾಗಿದೆ. ಸೈಬರ್ ಅಪರಾಧ ತಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ. ಜಿಲ್ಲಾ ಮಟ್ಟದಲ್ಲೇ ಜನರ ಸಮಸ್ಯೆ ಬಗೆಹರಿಸಿ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಬೇಕು. ಶಾಸಕರು ಪಂಚಾಯ್ತಿ ಹಾಗೂ ಹೋಬಳಿ ಮಟ್ಟದಲ್ಲಿ ಜನಸಂಪರ್ಕ ಸಭೆ ಮಾಡಬೇಕು. ಅದಕ್ಕೆ ಅಗತ್ಯವಿರುವ ಆರ್ಥಿಕ ವ್ಯವಸ್ಥೆ ಮಾಡಲಾಗುವುದು. ಆಗ ಜನ ಜಿಲ್ಲಾ ಕೇಂದ್ರ ಹಾಗೂ ಬೆಂಗಳೂರಿಗೆ ಬರುವುದು ಕಡಿಮೆ ಯಾಗುತ್ತದೆ. ಇದರಿಂದ ಈ ಜನಪರ ಸರ್ಕಾರ ಜನರ ಬಳಿಗೆ ಹೋಗಲು ಸಾಧ್ಯವಾಗುತ್ತದೆ ಎಂದರು.

ಮತದಾನದ ಹಕ್ಕು ರಕ್ಷಣೆಗೆ ಜಾಗೃತಿ: ಎಸ್‌ಐಆರ್ ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಪ್ರತಿ ತಾಲೂಕಿಗೆ ಹೋಗಿ, ಬಿಎಲ್‌ಒಗಳಿಗೆ ಮಾರ್ಗದರ್ಶನ ನೀಡಿ, ಎಲ್ಲಾ ಪಕ್ಷಗಳ ಬಿಎಲ್‌ಎಗಳ ಜೊತೆ ಸಂಪರ್ಕ ಇಟ್ಟುಕೊಂಡು ಜನರ ಮತದಾನದ ಹಕ್ಕು ರಕ್ಷಣೆ ಮಾಡಬೇಕು. ಮ್ಯಾಪಿಂಗ್ ಕೇವಲ ಅಧಿಕಾರಿಗಳಿಗೆ ಮಾತ್ರ, ಅದು ನಮಗೆ ಲೆಕ್ಕವಿಲ್ಲ. ನಾನು ಹಾಗೂ ನಮ್ಮ ಸಚಿವರುಗಳೂ ಸೇರಿದಂತೆ ಪ್ರತಿಯೊಬ್ಬ ಮತದಾರರು ತಮ್ಮ ಮತ ಉಳಿಸಿಕೊಳ್ಳಬೇಕಾದರೆ, ಕಡ್ಡಾಯವಾಗಿ ಬಿಎಲ್‌ಒಗಳು ನೀಡುವ ಎನ್ಯುಮರೇಷನ್ ಅರ್ಜಿಯನ್ನು ತುಂಬಿ ಸಲ್ಲಿಸಬೇಕು. ಆಗ ಮಾತ್ರ ಮತದಾನದ ಹಕ್ಕು ಉಳಿಯುತ್ತದೆ. ಬಿಎಲ್‌ಎಗಳು ಮನೆ ಬಾಗಿಲಿಗೆ ಬಂದು ಭೇಟಿ ನೀಡುತ್ತಾರೆ. ನೀವು ಭೇಟಿಯಾಗದಿದ್ದರೆ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸುತ್ತಾರೆ. ಇದಕ್ಕೆ ಅವಕಾಶ ನೀಡಬೇಡಿ. ಯಾರೇ ಆಗಲಿ ತಮ್ಮ ಊರಿನಿಂದ ಹೊರಗೆ ಕೆಲಸ ಮಾಡುತ್ತಿದ್ದರೆ, ಅವರ ದಾಖಲೆಗಳನ್ನು ಸಂಗ್ರಹಿಸಿ ಅರ್ಜಿ ಸಲ್ಲಿಸಬೇಕು ಎಂದು ವಿವರಿಸಿದರು.

ಪಾರ್ಕಿಂಗ್‌ಗೆ ಪರ್ಯಾಯ ಜಾಗಕ್ಕೆ ಶೋಧ!

ಚಾಮುಂಡಿಬೆಟ್ಟಕ್ಕೆ ತೆರಳಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಆದರೆ, ಲಲಿತಮಹಲ್ ಪ್ಯಾಲೆಸ್ ಹೋಟೆಲ್ ಮೈದಾನಕ್ಕೆ ರಾಜವಂಶಸ್ಥರು ಈಗ ಬೇಲಿ ಹಾಕಿ ತಮ್ಮ ಸುಪರ್ದಿಗೆ ತೆಗೆದುಕೊಂಡಿರುವುದರಿಂದ ಇದೀಗ ಆಷಾಢ ಮಾಸದ ವಿಶೇಷ ಪೂಜೆಗೆ ಆಗಮಿಸುವ ಭಕ್ತರ ವಾಹನ ನಿಲುಗಡೆಗೆ ಸ್ಥಳದ ಅಭಾವ ಎದುರಾಗಿದೆ. ರಾಜವಂಶಸ್ಥರು ಮೊದಲು ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್ ಮೈದಾನಕ್ಕೆ ಬೇಲಿ ಹಾಕಿದ್ದರಿಂದ ಬಸ್‌ಗಳ ಸಂಚಾರ ವ್ಯವಸ್ಥೆಯನ್ನ ಲಲಿತಮಹಲ್ ಪ್ಯಾಲೆಸ್ ಹೋಟೆಲ್ ಪಕ್ಕದ ಮೈದಾನಕ್ಕೆ ಸ್ಥಳಾಂತರ ಮಾಡಲಾಗಿತ್ತು. ಈಗ ಇಲ್ಲೂ ಸ್ಥಳ ಲಭ್ಯವಿಲ್ಲದ ಕಾರಣ ಖಾಸಗಿ ವಾಹನ ನಿಲುಗಡೆ ಹಾಗೂ ಉಚಿತ ಬಸ್ ವ್ಯವಸ್ಥೆಗೆ ಸ್ಥಳ ಹುಡುಕಬೇಕಾದ ಅನಿವಾರ್ಯತೆ ಎದುರಾಗಿದೆ. ಈ ವರ್ಷದ ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವವು ಜುಲೈ 14ರ ಮಣ್ಣೆತ್ತಿನ ಅಮಾವಾಸ್ಯೆಯ ದಿನದಂದು ಆರಂಭವಾಗಲಿದ್ದು, ಅದಕ್ಕಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸಿದ್ಧತೆ ಆರಂಭಿಸಿದೆ.

ಸಂಭವನೀಯ ಸ್ಥಳ: ಈ ವರ್ಷ ಆಷಾಢ ಮಾಸದ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವಕ್ಕೆ ಖಾಸಗಿ ವಾಹನಗಳಲ್ಲಿ ಬರುವ ಭಕ್ತರನ್ನು ಚಾಮುಂಡಿ ಬೆಟ್ಟಕ್ಕೆ ಉಚಿತವಾಗಿ ಬಸ್‌ಗಳಲ್ಲಿ ಕರೆದೊಯ್ಯಲು ಮೈಸೂರಿನ ಮಹಾರಾಜ ಕಾಲೇಜು ಮೈದಾನ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಈ ಎರಡು ಮೈದಾನ ವಿಶಾಲವಾಗಿರುವುದರಿಂದ ಖಾಸಗಿ ವಾಹನ ನಿಲುಗಡೆ ಮತ್ತು ಬಸ್ ವ್ಯವಸ್ಥೆಗೂ ಸ್ಥಳಾವಕಾಶ ಲಭ್ಯವಿದೆ.

ಎಐ ಲ್ಯಾಬ್ ಸ್ಥಾಪನೆ

ಸರ್ಕಾರ ಹಸಿರು ನಿಶಾನೆ ತೋರಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಮುಂದಿನ ದಿನಗಳಲ್ಲಿ ಉದ್ಯೋಗದ ಭವಿಷ್ಯವನ್ನು ತಂತ್ರಜ್ಞಾನವೇ ನಿರ್ಧರಿಸಲಿದೆ. ಹೀಗಾಗಿ ಇಂತಹ ಅತ್ಯಾಧುನಿಕ ತಾಂತ್ರಿಕ ಕೌಶಲ್ಯಗಳನ್ನು ಕಲಿಯುವ ಅವಕಾಶಗಳು ಕೇವಲ ದೊಡ್ಡ ನಗರಗಳಿಗೆ ಮಾತ್ರ ಸೀಮಿತವಾಗದೆ ಎಲ್ಲರಿಗೂ ಸಿಗಬೇಕು ಎನ್ನುವುದು ನಮ್ಮ ಆಶಯವಾಗಿದೆ. ಈ AI ಪ್ರಯೋಗಾಲಯಗಳ ಮೂಲಕ ಸಣ್ಣ ನಗರಗಳ ಯುವಜನರು ಜಾಗತಿಕ ಡಿಜಿಟಲ್ ಆರ್ಥಿಕತೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ!

ರಾತ್ರಿ ತನಕ ಆಕ್ರಮಿಸಿಕೊಂಡಿರುತ್ತಾರೆ. ಇದರಿಂದ ಗ್ರಾಹಕರು ಮತ್ತು ಸಾರ್ವಜನಿಕರಿಗೆ ವಾಹನ ನಿಲುಗಡೆಗೆ ಅವಕಾಶವಿಲ್ಲದಂತಾಗಿದೆ. ಈ ರೀತಿಯ ಪಾರ್ಕಿಂಗ್ ಸಮಸ್ಯೆಯಿಂದಾಗಿ ವಾಹನಗಳು ಡಬಲ್ ಪಾರ್ಕಿಂಗ್ ಮಾಡುವುದು, ಪಾರ್ಕಿಂಗ್‌ಗಾಗಿ ರಸ್ತೆಯಲ್ಲೇ ವಾಹನಗಳನ್ನು ನಿಲ್ಲಿಸಿಕೊಂಡು ಕಾಯುವುದು ಸಾಮಾನ್ಯವಾಗಿದೆ. ಹೀಗೆ ವಾಹನಗಳು ಮತ್ತು ಸವಾರರು ರಸ್ತೆಯಲ್ಲಿ ನಿಲ್ಲುವುದರಿಂದ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸುವುದರಿಂದ ಪಾರ್ಕಿಂಗ್ ಶಿಸ್ತು ತರುವುದರ ಜೊತೆಗೆ ಸಂಚಾರ ದಟ್ಟಣೆ ಕಡಿಮೆಯಾಗಲಿದೆ ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಸಂಚಾರ ವಿಭಾಗದ ಎಸಿಪಿ ಶಿವಶಂಕರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವ್ಯಾಪಾರಿಗಳೊಂದಿಗೆ ಈಗಾಗಲೇ ಎರಡು ಸುತ್ತಿನ ಸಭೆ ನಡೆಸಲಾಗಿದೆ. ಅವರು ಈ ಯೋಜನೆಗೆ ಸಮ್ಮತಿ ಸೂಚಿಸಿದ್ದಾರೆ. ಟೌನ್ ಹಾಲ್ ಪಾರ್ಕಿಂಗ್ ನಿರ್ವಹಿಸುತ್ತಿರುವ ಗುತ್ತಿಗೆದಾರ, ಎಂಸಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ, ವಾಹನ ನಿಲುಗಡೆ ಅವಧಿಗೆ ಅನುಗುಣವಾಗಿ ಮಾತ್ರ ಶುಲ್ಕ ನಿಗದಿಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಬಹಿರಂಗವಾಗೇ ಅಸಮಾಧಾನ


ಖಾತೆ ಬದಲಾವಣೆಗಾಗಿ ಕಳೆದ 4 ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಕೃಷ್ಣಬೈರೇಗೌಡ ಅವರಿಗೆ ವರಿಷ್ಠರಿಂದ ಯಾವುದೇ ಭರವಸೆ ದೊರೆತಿಲ್ಲ. ಈ ವಿಷಯದಲ್ಲಿ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿ ಮಾಡಲೂ ಬೈರೇಗೌಡ ಅವರಿಂದ ಸಾಧ್ಯವಾಗಿಲ್ಲ.

ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು. ಖಾತೆ ಹಂಚಿಕೆ ವಿಷಯವನ್ನು ಮುಖ್ಯಮಂತ್ರಿ ಬಳಿಯೇ ಬಗೆಹರಿಸಿಕೊಳ್ಳಿ ಎಂಬುದಾಗಿ ವೇಣುಗೋಪಾಲ್ ಸಲಹೆ ಮಾಡಿ, ಕೃಷ್ಣಬೈರೇಗೌಡ ಅವರನ್ನು ಕಳುಹಿಸಿಕೊಟ್ಟಿದ್ದಾರೆ. ವರಿಷ್ಠರ ಸಲಹೆ ಮೇರೆಗೆ ಇಂದು ಬೆಳಗ್ಗೆ ಮುಖ್ಯಮಂತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದ ಕೃಷ್ಣಬೈರೇಗೌಡರಿಗೆ, ಸಮಸ್ಯೆ ಪರಿಹರಿಸುವೆ, ಸ್ವಲ್ಪ ಸಮಯ ನೀಡಿ ಎಂಬ ಭರವಸೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ್ದಾರೆ.

ಶಾಂತಿ ಒಪ್ಪಂದಕ್ಕೆ ಸಹಿ ಹಾಕಲ್ಲ: ಇರಾನ್

ಹಾಕುವ ನಿರ್ದಿಷ್ಟ ದಿನಾಂಕದ ಬಗ್ಗೆ ಈಗಲೇ ಹೇಳುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ. ಈ ನಡುವೆ, ಅಮೆರಿಕ ಮತ್ತು ಇರಾನ್ ಶಾಂತಿ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಿದ್ದು, ಅದಕ್ಕೆ ಅಂತಿಮ ರೂಪ ನೀಡಲು ಸಂಧಾನಕಾರರು ಎರಡೂ ಕಡೆಯವರೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಶುಕ್ರವಾರ ತಿಳಿಸಿದ್ದರು. ಈ ಬಗ್ಗೆ 'ಎಕ್ಸ್' ಪೋಸ್ಟ್‌ನಲ್ಲಿ ಮಾಹಿತಿ ನೀಡಿರುವ ಅವರು, ಉಭಯ ದೇಶಗಳ ನಡುವಿನ ಒಪ್ಪಂದ ಅಂತಿಮ ಘಟ್ಟ ತಲುಪಿದ್ದು, ಸಂಧಾನದ ಮುಂದಾಳತ್ವ ವಹಿಸಿರುವ ಪಾಕಿಸ್ತಾನವು ಮುಂದಿನ ಕ್ರಮಗಳ ಕುರಿತು ಕಾರ್ಯನಿರ್ವಹಿಸುತ್ತಿದೆ ಎಂದಿದ್ದಾರೆ.

ಶ್ರೀಮತಿ ಭಾಗ್ಯ ನಿಧನ



ಮೈಸೂರು, ಜೂ.13– ಮೈಸೂರಿನ ಬೋಗಾದಿ ನಿವಾಸಿ ಶ್ರೀಮತಿ ಭಾಗ್ಯ(68) ಅವರು ಶನಿವಾರ ನಿಧನರಾದರು. ಇವರು ನಗರದ ಮಹಾರಾಜ ಕಾಲೇಜಿನ ನಿವೃತ್ತ ಇತಿಹಾಸ ಪ್ರಾಧ್ಯಾಪಕ, ವಿಜಯನಗರ 3ನೇ ಹಂತ ಗೆಳೆಯರ ಬಳಗ ಸಹಕಾರ ಸಂಘದ ಅಧ್ಯಕ್ಷ ಡಾ.ವಸಂತ ಅವರ ಧರ್ಮಪತ್ನಿ.

ಬೋಗಾದಿ 2ನೇ ಹಂತ ನಿರ್ಮಿತಿ ಕೇಂದ್ರ ಬಸ್ ನಿಲ್ದಾಣದ ಹಿಂಭಾಗದ ರಸ್ತೆಯಲ್ಲಿರುವ ಸ್ವಗೃಹದಲ್ಲಿ ಭಾಗ್ಯ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಿಡಲಾಗಿದ್ದು, ಭಾನುವಾರ(ಜೂ.14) ಮಧ್ಯಾಹ್ನ 12ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೂನ್ 22ರಂದು ಬೃಹತ್ ಪ್ರತಿಭಟನೆ

ರಾಮನಗರ, ಜೂ.13– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕನಸಿನ ಯೋಜನೆಯಾದ ಬಿಡದಿ ಟೌನ್‌ಶಿಪ್ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಿದೆ. ಆದರೆ, ಈ ಯೋಜನೆಗೆ ಅನ್ನದಾತರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಯೋಜನೆಯ ಅಂತಿಮ ಅಧಿಸೂಚನೆ ಹೊರಡಿಸಿರುವ ಸರ್ಕಾರದ ನಡೆ ಖಂಡಿಸಿ ರೈತರು ಬೃಹತ್ ಹೋರಾಟಕ್ಕೆ ಸಜ್ಜಾಗಿದ್ದಾರೆ.

ರಾಮನಗರದ ಎಪಿಎಂಸಿ ಆವರಣದ ರೈತಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ, ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಜೂನ್ 22ರಂದು 'ಬೈರಮಂಗಲ ಚಲೋ' ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಬಿಡದಿಯ ಬಿಜಿಎಸ್ ವೃತ್ತದಿಂದ ಬೈರಮಂಗಲ ಗ್ರಾಮದವರೆಗೂ ಬೃಹತ್ ಬೈಕ್ ರ್ಯಾಲಿ ಮತ್ತು ಮೆರವಣಿಗೆಯನ್ನು ಆಯೋಜಿಸಲಾಗಿದೆ.

ಕೇಂದ್ರೀಯ ವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗ ಕಡ್ಡಾಯ

ನವದೆಹಲಿ: 2026–27ನೇ ಸಾಲಿನ ಶೈಕ್ಷಣಿಕ ವರ್ಷದ ತೃತೀಯ ಭಾಷಾ ಅನುಷ್ಠಾನದ ಚೌಕಟ್ಟಿನ ಅಡಿಯಲ್ಲಿ 6 ಹಾಗೂ 9ನೇ ತರಗತಿಯುವರೆಗೆ ಮೂರನೇ ಭಾಷೆಯ ಭಾಗವಾಗಿ ಸಂಸ್ಕೃತದ ಒಂದು ವಿಭಾಗ ಇರುವುದನ್ನು ಕೇಂದ್ರೀಯ ವಿದ್ಯಾಲಯ ಸಂಘಟನೆ ಕಡ್ಡಾಯಗೊಳಿಸಿದೆ.

ಮೇ 29ರಂದು ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಪೋಷಕರು ಹಾಗೂ ಮಕ್ಕಳಿಂದ ತೃತೀಯ ಭಾಷೆಯ ಆಯ್ಕೆಯ ಚೌಕಟ್ಟನ್ನು ಪೂರ್ಣಗೊಳಿಸಿರಬೇಕು ಎಂದು ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯು ತಿಳಿಸಿದೆ.

ಮೂರನೇ ಭಾಷೆಯಾಗಿ ಹಿಂದಿ ಅಥವಾ ಇಂಗ್ಲಿಷ್ ಹೊರತುಪಡಿಸಿ ಸಂಸ್ಕೃತ ಅಥವಾ ರಾಜ್ಯಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸ್ಪಷ್ಟಪಡಿಸಿದೆ.

ವಿದ್ಯಾರ್ಥಿಗಳು ತಮ್ಮ ಆಯ್ಕೆಗೆ ತಕ್ಕಂತೆ ಸಂಸ್ಕೃತ ಅಥವಾ ಪ್ರಾದೇಶಿಕ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ವರ್ಗಾವಣೆ ಹೊಂದುವ ಉದ್ಯೋಗಿಗಳ ಮಕ್ಕಳ ಅನುಕೂಲಕ್ಕಾಗಿ ಪ್ರತಿ ಶಾಲೆಯಲ್ಲಿಯೂ ಒಂದು ಸಂಸ್ಕೃತ ವಿಭಾಗ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಾಲಾ ಮಟ್ಟದಲ್ಲಿ ಸಿಬ್ಬಂದಿಯನ್ನು ಅಗತ್ಯಕ್ಕೆ ತಕ್ಕಂತೆ ವ್ಯವಸ್ಥೆ ಮಾಡಲು ಅನುಕೂಲವಾಗುವಂತೆ, ಮೂರನೇ ಭಾಷೆಯಾಗಿ ಆಯ್ಕೆ ಮಾಡುವ ವಿದ್ಯಾರ್ಥಿಗಳು ಈ ಮಾಹಿತಿಯನ್ನು 'ಸಮಾಗಮ್ ಪೋರ್ಟಲ್'ನಲ್ಲಿ ದಾಖಲಿಸುವಂತೆ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಉಚಿತ ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು: ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ, ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಹಯೋಗದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರವನ್ನು, ಜೂ.21 ರಂದು ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಮೈಸೂರಿನ ಮಂಡಿಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ: 9448753597, 9916155453, 9448738657 ಮೂಲಕ ಸಂಪರ್ಕಿಸಬಹುದು.

ಸಾಮಾಜಿಕ ಜಾಲತಾಣದಲ್ಲಿ ಮಹಿಳೆಯ ಅಶ್ಲೀಲ ಫೋಟೋ ಹರಿಬಿಟ್ಟಿರುವ ಕಿಡಿಗೇಡಿಗಳು ; ಪ್ರಕರಣ ದಾಖಲು

ಮೈಸೂರು,ಜೂ.13(ಪಿಎಂ)– ಮಹಿಳೆ ಮತ್ತು ಅವರ ಕುಟುಂಬದ ಫೋಟೋ ಹಾಗೂ ವಿಡಿಯೋಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ ಅಪಮಾನ ಮಾಡುತ್ತಿರುವ ಸಂಬಂಧ ಮೈಸೂರು ನಗರ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತರು ಫೇಕ್ ಅಕೌಂಟ್ ಕ್ರಿಯೇಟ್ ಮಾಡಿಕೊಂಡು ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ನನ್ನ ಹಾಗೂ ನನ್ನ ಕುಟುಂಬದ ಫೋಟೋ ಹಾಗೂ ವಿಡಿಯೋಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಹಾಕುವ ಮೂಲಕ ಅವಮಾನ ಮಾಡುತ್ತಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ನೀಡಿದ ದೂರಿನನ್ವಯ ಜೂ.12ರಂದು ಎಫ್‌ಐಆರ್ ದಾಖಲಾಗಿದೆ.

ಮೈಸೂರು ಮಿತ್ರ
ಭಾನುವಾರ 14 ಜೂನ್ 2026

ಬಿಡದಿ ಟೌನ್‌ಶಿಪ್‌ಗೆ ಭೂಮಿ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ವಿವಾದ

ಕಾಂಗ್ರೆಸ್ ನಿಜ ಬಣ್ಣ ಬಯಲು

ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ



ಬೆಂಗಳೂರು, ಜೂ.13(ಕೆಎಂಶಿ)– ಕಳೆದ 470 ದಿನಗಳಿಂದ ರೈತರು ನಡೆಸುತ್ತಿರುವ ಹೋರಾಟ ಲೆಕ್ಕಿಸದೆ ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ಫಲವತ್ತಾದ ಕೃಷಿ ಭೂಮಿ ಕಬಳಿಕೆಗೆ ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿರುವುದು ಕಾಂಗ್ರೆಸ್‌ನ ನಿಜ ಬಣ್ಣ ಬಯಲು ಮಾಡಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ರೈತರ ಜಮೀನಿನ ಮೇಲೆ ಬುಲ್ಡೋಜರ್ ಓಡಿಸಿ, ರಿಯಲ್ ಎಸ್ಟೇಟ್ ಸಾಮ್ರಾಜ್ಯ ಕಟ್ಟಲು ಹೊರಟಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಮಿಷನ್ ಮುಖ್ಯಮಂತ್ರಿ ಆಗಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಸಂಬಂಧ ತಮ್ಮ ಜಾಲತಾಣ ಖಾತೆಯಲ್ಲಿ ಟ್ವೀಟ್ ಮಾಡಿರುವ ಅವರು, ರಾಜ್ಯದ ರೈತರನ್ನು ಮುಖ್ಯಮಂತ್ರಿ ದುರ್ಬಲರೆಂದು ಭಾವಿಸಿದ್ದರೆ ದೊಡ್ಡ ತಪ್ಪಾಗಲಿದೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಆಡಳಿತಕ್ಕೆ ತಕ್ಕ ಪಾಠ ಕಲಿಸಲಿದ್ದು, ಸರ್ಕಾರ ಇತಿಹಾಸದ ಪುಟ ಸೇರಲಿದೆ ಎಂದಿದ್ದಾರೆ.

ಬಿಜೆಪಿ ಸರ್ಕಾರ 2028ರಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆ ಬಿಡದಿ ಟೌನ್‌ಶಿಪ್‌ಗೆ ಮಾಡಿರುವ ಅಕ್ರಮ ಭೂಸ್ವಾಧೀನ ಪ್ರಕ್ರಿಯೆಯನ್ನು ಅಧಿಕೃತವಾಗಿ ರದ್ದುಪಡಿಸಲಾಗುವುದು, ರೈತರಿಗೆ ಕೊಟ್ಟಿರುವ ಮಾತನ್ನು ನಾವು ಉಳಿಸಿಕೊಳ್ಳುತ್ತೇವೆ. ರೈತರ ತೀವ್ರ ವಿರೋಧದ ನಡುವೆಯೂ ಆತುರಾತುರವಾಗಿ ಭೂಮಿ ಕಬಳಿಸಲು ಹೊರಟಿರುವುದರ ಹಿಂದಿನ ಅಸಲಿ ರಹಸ್ಯವೇನು, ಬಿಲ್ಡರ್ ಮಾಫಿಯಾದ ಜೇಬು ತುಂಬಿಸುವ ರಿಯಲ್ ಎಸ್ಟೇಟ್ ಅಜೆಂಡಾ ಇದಕ್ಕೆ ಕಾರಣವಲ್ಲವೇ ಎಂದು ಪ್ರಶ್ನಿಸಿದ್ದಾರೆ. ಬೆಂಗಳೂರಿನ ಕಸದ ಟೆಂಡರ್ ನಲ್ಲೂ ಸಾವಿರಾರು ಕೋಟಿ ರೂ. ಕಮಿಷನ್ ವಾಸನೆ ಬಡಿಯುತ್ತಿದ್ದು, ಲಜ್ಜೆಗೆಟ್ಟ ಕಾಂಗ್ರೆಸ್ ಸರ್ಕಾರ, ಅನ್ನದಾತರ ಜಮೀನಿನಲ್ಲೂ ರಿಯಲ್ ಎಸ್ಟೇಟ್ ಬಂಗಾರ ಹುಡುಕಲು ಹೊರಟಿದೆ.

ಡಿ.ಕೆ.ಶಿವಕುಮಾರ್ ಆಡಳಿತದಲ್ಲಿ ಸಿಎಂ ಎಂದರೆ ಮುಖ್ಯಮಂತ್ರಿ ಅಲ್ಲ, 'ಕಮಿಷನ್ ಮಿನಿಸ್ಟರ್' ಹಾಗೂ 'ಕರಪ್ಟ್ ಮಿನಿಸ್ಟರ್' ಆಗಿದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಅನ್ನದಾತರ ಹೊಟ್ಟೆಗೆ ಹೊಡೆದು ಕಟ್ಟುವ ಯಾವುದೇ ಟೌನ್‌ಶಿಪ್ ಅಭಿವೃದ್ಧಿಯಲ್ಲ, ರೈತರ ಭವಿಷ್ಯದ ಸಮಾಧಿಯಾಗುತ್ತದೆ. ಪ್ರತಿ ಪಕ್ಷ ಬಿಜೆಪಿ ಹಾಗೂ ರೈತರ ಈ ಹೋರಾಟ ಕೇವಲ 499 ಎಕರೆ ಜಮೀನಿಗಾಗಿ ಅಲ್ಲ, ಕೃಷಿಕರ ಹಕ್ಕು, ಗೌರವ ಮತ್ತು ಬದುಕಿನ ಹೋರಾಟವಾಗಿದೆ. ಕೂಡಲೇ ಭೂಸ್ವಾಧೀನ ಪ್ರಕ್ರಿಯೆ ಹಿಂಪಡೆಯ ಬೇಕು, ಇಲ್ಲವಾದಲ್ಲಿ ರೈತರ ಆಕ್ರೋಶದ ಜ್ವಾಲೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಭಸ್ಮವಾಗುವುದು ಖಂಡಿತ ಎಂದು ಎಚ್ಚರಿಸಿದ್ದಾರೆ.

ಮೈಸೂರಲ್ಲಿ ಎರಡು ದಿನಗಳ ದೇಸಿ ಬೀಜೋತ್ಸವಕ್ಕೆ ಚಾಲನೆ

ಸಾವಿರಕ್ಕೂ ಹೆಚ್ಚು ಬೀಜಗಳು, ಗೆಡ್ಡೆ–ಗೆಣಸುಗಳು, ಸೊಪ್ಪಿನ ತಳಿಗಳು, ಅಪರೂಪದ ಹಣ್ಣುಗಳ ಪ್ರದರ್ಶನ

ಮೈಸೂರು, ಜೂ.13(ಜಿಎ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಹಾಗೂ ಸಹಜ ಸೀಡ್ಸ್ ಸಹಯೋಗದಲ್ಲಿ ಆಯೋಜಿಸಿರುವ ಎರಡು ದಿನಗಳ ದೇಸಿ ಬೀಜೋತ್ಸವಕ್ಕೆ ಶನಿವಾರ ಚಾಲನೆ ದೊರೆಯಿತು.

ಈ ಉತ್ಸವದಲ್ಲಿ ಧಾರವಾಡ, ಹಾವೇರಿ, ಕೋಲಾರ, ಮೈಸೂರು, ಮಂಡ್ಯ ಹಾಗೂ ಬೆಳಗಾವಿ ಜಿಲ್ಲೆಗಳ 30ಕ್ಕೂ ಹೆಚ್ಚು ಬೀಜ ಸಂರಕ್ಷಕರು ಮತ್ತು ಸಮುದಾಯ ಬೀಜ ಬ್ಯಾಂಕ್ ಸದಸ್ಯರು ಭಾಗವಹಿಸಿ, 1,000ಕ್ಕೂ ಹೆಚ್ಚು ಸ್ಥಳೀಯ ಬೀಜಗಳು, ಗೆಡ್ಡೆ–ಗೆಣಸುಗಳು, ಸೊಪ್ಪಿನ ತಳಿಗಳು ಹಾಗೂ ಅಪರೂಪದ ಹಣ್ಣುಗಳನ್ನು ಪ್ರದರ್ಶಿಸಿದರು. ಕುಡಗೋಳದ ರೈತರು ಸಿಂಧೂ ಕಣಿವೆ ನಾಗರಿಕತೆಯ ಕಾಲಕ್ಕೆ ಸೇರಿದೆಯೆಂದು ನಂಬಲಾಗಿರುವ ಪಿಗಂಬೇರಿ ಸೇರಿದಂತೆ 25 ಬಗೆಯ ಗೋಧಿ ತಳಿಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ.

ಕೇವಲ ಬೀಜಗಳು ಮಾತ್ರವಲ್ಲದೇ ಜ್ಯೂಸ್ ಬಿಲ್ವ, ಶಂಕರ ರೆಡ್ ಜಾಕ್, ಪೀನಟ್ ಬಟರ್ ಫ್ರೂಟ್ ಹಾಗೂ ಮಲ್ಬೆರಿ ಸೇರಿದಂತೆ ಅಪರೂಪದ ಹಣ್ಣಿನ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ಕಪ್ಪು ಗೋಧಿ, ಕಪ್ಪು ಕಡಲೆ, ಜೋಳ, ಹೆಸರುಕಾಳು ಸೇರಿದಂತೆ ವಿವಿಧ ಸಾಂಪ್ರದಾಯಿಕ ಧಾನ್ಯ ಮತ್ತು ಕಾಳುಗಳಿಂದ ತಯಾರಿಸಿದ ಹಿಟ್ಟುಗಳನ್ನೂ ಮಾರಾಟ ಮಾಡಲಾಗುತ್ತಿದೆ.

ಮೈಸೂರಿನ ಸಸ್ಯಧಾಮ ನರ್ಸರಿ ಹಾಗೂ ಬೆಳುವಾಳ ತೋಟದಲ್ಲಿ ವಿವಿಧ ದೇಶೀ ಹಣ್ಣಿನ ಸಸಿಗಳು ಮಾರಾಟಕ್ಕಿದೆ. ರಾಗಿ, ಭತ್ತ, ಸಿರಿಧಾನ್ಯಗಳು, ಕಾಳುಗಳು ಹಾಗೂ ತರಕಾರಿ ಬೀಜಗಳ ಮಾರಾಟವೂ ನಡೆಯುತ್ತಿದೆ.

ಉತ್ಸವದಲ್ಲಿ 'ಬಿದಿರು ಕೃಷಿ: ಅವಕಾಶಗಳು ಮತ್ತು ಮಾರುಕಟ್ಟೆ' ವಿಷಯದ ಕುರಿತು ರೈತ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದಾವಣಗೆರೆಯ ಬಿದಿರು ತಜ್ಞ ಜಬಿವುಲ್ಲಾ ಅವರು ಬಿದಿರು ಕೃಷಿ, ಅದರ ಉಪಯೋಗಗಳು, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಅವಕಾಶಗಳ ಕುರಿತು ಮಾಹಿತಿ ನೀಡಿದರು. ವಿವಿಧ ಬಿದಿರು ತಳಿಗಳ ಮಾರಾಟವೂ ನಡೆಯುತ್ತಿದೆ.

ಈ ವೇಳೆ ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ ಜಗದೀಶ್ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಖ್ಯಾತ ಬೀಜ ಸಂರಕ್ಷಕಿ ಬೀಜ ಮಾತೆ ಪದ್ಮಮ್ಮ, ಪರಿಸರವಾದಿ ವಿಜಯಲಕ್ಷ್ಮಿ, ಬೀಜ ಸಂರಕ್ಷಕ ಸಿದ್ದನ ಹುಂಡಿ ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು.



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಎರಡು ದಿನಗಳ ದೇಸಿ ಬೀಜೋತ್ಸವಕ್ಕೆ ಶನಿವಾರ ಚಾಲನೆ ದೊರೆಯಿತು.

ನಾಳೆ(ಜೂ.14) ಮಧ್ಯಾಹ್ನ 12 ಗಂಟೆಗೆ 'ಬೀಜ ಸಂರಕ್ಷಣೆ ಮತ್ತು ಸಾವಯವ ಬೀಜ ಉತ್ಪಾದನೆ'' ಕುರಿತ ವಿಶೇಷ ತರಬೇತಿ ಕಾರ್ಯಕ್ರಮ ನಡೆಯಲಿದೆ. 14ರಂದು ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೆ ಉತ್ಸವ ನಡೆಯಲಿದೆ.

ಯಾವುದೇ ಸಂಘಟನೆ, ಐತಿಹಾಸಿಕ ವಿಚಾರಗಳ ಮೇಲಿನ ಚರ್ಚೆ ವಾಸ್ತವದ ಚೌಕಟ್ಟಿನಲ್ಲಿರಲಿ

ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ಹಿನ್ನೆಲೆ ಮಾಜಿ ಉಪಮೇಯರ್ ವಿ.ಶೈಲೇಂದ್ರ ಅಭಿಮತ

ಮೈಸೂರು, ಜೂ.13– ಯಾವುದೇ ಸಂಘಟನೆ ಅಥವಾ ವ್ಯಕ್ತಿ ಕುರಿತು ಹೇಳಿಕೆ ನೀಡುವ ಮುನ್ನ ವಾಸ್ತವಾಂಶ ಪರಿಶೀಲಿಸುವುದು ಪ್ರಜಾಪ್ರಭುತ್ವದ ಆರೋಗ್ಯಕರ ಸಂಸ್ಕೃತಿಗೆ ಪೂರಕ ಎಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ಹೇಳಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕುರಿತು ನೀಡುತ್ತಿರುವ ಹೇಳಿಕೆಗಳ ಬಗ್ಗೆ ವ್ಯಾಪಕ ಚರ್ಚೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಶೈಲೇಂದ್ರ, ದೇಶದ ಇತಿಹಾಸ, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಾಮಾಜಿಕ ಸಂಘಟನೆಗಳ ಬಗ್ಗೆ ಸಾರ್ವಜನಿಕ ಹುದ್ದೆಯಲ್ಲಿರುವವರು ಅತ್ಯಂತ ಜವಾಬ್ದಾರಿಯುತವಾಗಿ ಮಾತನಾಡಬೇಕು ಎಂದಿದ್ದಾರೆ.

ಹಲವು ದಶಕಗಳಿಂದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಂಘದ ಬಗ್ಗೆ ಚರ್ಚಿಸುವಾಗ ಅದರ ವಿವಿಧ ಆಯಾಮ ಹಾಗೂ ಹಿನ್ನೆಲೆಯನ್ನು ಪರಿಗಣಿಸುವುದು ಅವಶ್ಯ. ಹೀಗೆಯೇ ವಿನಾಯಕ ದಾಮೋದರ ಸಾವರ್ಕರ್ ಬಗ್ಗೆಯೂ ಚರ್ಚೆಯಾಗುತ್ತಿದೆ. ಆದರೆ, ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಅವರು ವಹಿಸಿದ ಪಾತ್ರ, ಅಂಡಮಾನ್‌ನ ಸೆಲ್ಯುಲಾರ್ ಜೈಲಿನಲ್ಲಿ ಅನುಭವಿಸಿದ ಕಠಿಣ ಕಾರಾಗೃಹ ಶಿಕ್ಷೆ, ಸಾಮಾಜಿಕ ಸುಧಾರಣೆಗೆ ನೀಡಿದ ಕೊಡುಗೆ ಹಾಗೂ ರಾಷ್ಟ್ರಭಕ್ತಿಯ ನಿಲುವುಗಳನ್ನು ಪರಿಗಣಿಸಿ ಸಮತೋಲಿತ ದೃಷ್ಟಿಕೋನದಿಂದ ನೋಡಬೇಕು ಎಂದು ಶೈಲೇಂದ್ರ ಅಭಿಪ್ರಾಯಿಸಿದ್ದಾರೆ.



ವಿ.ಶೈಲೇಂದ್ರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆದರೆ, ಸಾರ್ವಜನಿಕ ಜೀವನದಲ್ಲಿರುವ ನಾಯಕರು ನೀಡುವ ಹೇಳಿಕೆಗಳು ಸಮಾಜದಲ್ಲಿ ಅನಗತ್ಯ ಗೊಂದಲ ಅಥವಾ ವಿಭಜನೆಗೆ ಕಾರಣವಾಗಬಾರದು. ಜನಪ್ರತಿನಿಧಿಗಳು ನೀಡುವ ಪ್ರತಿಯೊಂದು ಹೇಳಿಕೆಯೂ ಸಮಾಜದ ಮೇಲೆ ಪರಿಣಾಮ ಬೀರುವುದರಿಂದ ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಯುವಜನರು ಮತ್ತು ವಿದ್ಯಾರ್ಥಿಗಳು ಇತಿಹಾಸವನ್ನು ರಾಜಕೀಯ ದೃಷ್ಟಿಯಿಂದ ನೋಡುವ ಬದಲು ದಾಖಲೆಗಳು, ಸಂಶೋಧನೆಗಳು ಮತ್ತು ಪ್ರಮಾಣಿತ ಮಾಹಿತಿಗಳ ಆಧಾರದ ಮೇಲೆ ಅರ್ಥಮಾಡಿಕೊಳ್ಳುವ ವಾತಾವರಣ ನಿರ್ಮಾಣವಾಗಬೇಕು ಎಂದು ಆಶಿಸಿದ್ದಾರೆ.

ಶ್ರೀಮತಿ ಉಷಾ ಲಕ್ಷ್ಮಣ್‌ಗೆ ಎಂ.ವಿ.ನಾಗೇಂದ್ರಬಾಬು ಪುಸ್ತಕ ಹಸ್ತಾಂತರ



ಇತ್ತೀಚೆಗೆ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ನಡೆದ ಆರ್.ಕೆ.ಲಕ್ಷ್ಮಣ್ ಅವರು ಬರೆದಿರುವ ರೇಖಾಚಿತ್ರಗಳ ಪುಸ್ತಕ ಬಿಡುಗಡೆ ಮತ್ತು ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೈಸೂರಿನ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟ್ ಪ್ರಶಸ್ತಿ ಪುರಸ್ಕೃತ ಎಂ.ವಿ. ನಾಗೇಂದ್ರಬಾಬು ತಾವು ಬರೆದಿರುವ "Babu's Banter: A Cartoonist Retrospect" ಕೃತಿಯನ್ನು ಅಂತರರಾಷ್ಟ್ರೀಯ ಖ್ಯಾತ ವ್ಯಂಗ್ಯಚಿತ್ರಕಾರ ದಿವಂಗತ ಆರ್.ಕೆ. ಲಕ್ಷ್ಮಣ್ ಅವರ ಸೊಸೆ ಹಾಗೂ ಆರ್.ಕೆ. ಐಪಿಆರ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಉಷಾ ಲಕ್ಷ್ಮಣ್ ಅವರಿಗೆ ಸಲ್ಲಿಸಿದರು.

ಕೆ.ಆರ್.ಕ್ಷೇತ್ರದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾಹಿತಿ



ಮೈಸೂರಿನ ಪತ್ರಕರ್ತರ ಭವನದಲ್ಲಿ ಶನಿವಾರ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.13(ಬಿಎಲ್‌ಯು)– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮೈಸೂರಿನ ಕೆ.ಆರ್.ಕ್ಷೇತ್ರದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಎಚ್.ವಿ. ರಾಜೀವ್ ಸ್ನೇಹ ಬಳಗದಿಂದ ಆಯೋಜಿಸಲಾಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸಕ್ತರು ವಿದ್ಯಾರಣ್ಯಪುರಂ 2ನೇ ಮೈನ್, 2ನೇ ಕ್ರಾಸ್‌ನಲ್ಲಿರುವ ಬಳಗದ ಕಚೇರಿಗೆ ಅರ್ಜಿ ಹಾಗೂ ದಾಖಲಾತಿ ಸಲ್ಲಿಸಬಹುದು ಎಂದು ಸಲಹೆ ನೀಡಿದರು.

ಇಲ್ಲವೆ ವಾಟ್ಸಾಪ್ ಸಂಖ್ಯೆ 951318 3888ಗೆ ಹಾಯ್ ಎಂದು ಸಂದೇಶ ಕಳುಹಿಸಿದರೆ, ಗೂಗಲ್ ಸ್ಪ್ರೆಡ್ ಶೀಟ್ ಲಿಂಕ್ ಕಳುಹಿಸಲಾಗುವುದು. ಆ ಲಿಂಕ್ ಮೂಲಕವು ಅರ್ಜಿ ಸಲ್ಲಿಸಿ, ಅಂಕಪಟ್ಟಿ ಹಾಗೂ ಇತರೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬಹುದು ಎಂದರು.

ಜೂ.30ರಂದು ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಬೇಕು. ತರುವಾಯ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಎಐ ಕುರಿತಂತೆ ವಿದ್ಯಾರ್ಥಿಗಳಿಗೆ ವಿಷಯ ತಜ್ಞರು ಮಾಹಿತಿ ನೀಡಲಿದ್ದಾರೆ ಎಂದರು.

ಮಾಜಿ ಮೇಯರ್ ಭೈರಪ್ಪ, ಮಾಜಿ ಕಾರ್ಪೋರೇಟರ್ ಮಲ್ಲೇಶ್, ಡಾ.ಅಚ್ಯುತರಾವ್, ಎಸ್.ನಂದೀಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಯಂಗ್ ಇಂಡಿಯನ್ ಪಾರ್ಲಿಮೆಂಟ್ ಕಾರ್ಯಕ್ರಮ

ಮೈಸೂರು, ಜೂ.13(ಬಿಎಲ್‌ಯು)– ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಅಂಗ ಸಂಸ್ಥೆ ಯಂಗ್ ಇಂಡಿಯನ್ಸ್ ಮೈಸೂರು ಚಾಪ್ಟರ್ ಜೂನ್ 26 ಮತ್ತು 27ರಂದು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮೈಸೂರಿನಲ್ಲಿ ಯಂಗ್ ಇಂಡಿಯನ್ ಪಾರ್ಲಿಮೆಂಟ್–ಚಾಪ್ಟರ್ ರೌಂಡ್ ಕಾರ್ಯಕ್ರಮ ಆಯೋಜಿಸಿದೆ ಎಂದು ಚಾಪ್ಟರ್ ಅಧ್ಯಕ್ಷೆ ಪ್ರಿಯಾಂಕ ಶ್ರೀಧರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೋರಂ ಹೋಟೆಲ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ನಾಯಕತ್ವ ಗುಣ, ಪ್ರಜಾಪ್ರಭುತ್ವದ ಮೌಲ್ಯ ಹಾಗೂ ರಾಷ್ಟ್ರ ನಿರ್ಮಾಣದ ಚಿಂತನೆ ಬೆಳೆಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಂಸತ್ತಿನ ಕಾರ್ಯ ವಿಧಾನ, ಸಮಕಾಲೀನ ರಾಷ್ಟ್ರೀಯ ವಿಚಾರ ಕುರಿತು ಚರ್ಚೆ ನಡೆಯಲಿದ್ದು, ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಕೂಡ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಮೈಸೂರಿನ 10, 11 ಹಾಗೂ 12ನೇ ತರಗತಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶವಿದೆ. ಎರಡು ದಿನಗಳ ಊಟ, ಅಧ್ಯಯನ ಸಾಮಗ್ರಿ, ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ಪ್ರಿಯಾಂಕ ಶ್ರೀಧರ್ ತಿಳಿಸಿದರು. ಸಂಸ್ಥೆಯ ಪದಾಧಿಕಾರಿಗಳಾದ ಚರಣ್, ಸುಕೃತ, ಅಮೃತ್, ಮರಿಯಾ ಆಂಡ್ರ್ಯೂಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರೈತರು, ಜನಸಾಮಾನ್ಯರ ಪಾಲಿಗೆ ಕೇಂದ್ರ ಸರ್ಕಾರ 'ದುಬಾರಿ'

ಡೀಸೆಲ್ ಖರೀದಿ 200 ಲೀಟರ್‌ಗೆ ಮಿತಿ; ಬಲ್ಕ್ ಬೈಯರ್‌ನಲ್ಲಿ ಖರೀದಿಗೆ ದರ ಏರಿಕೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ತೀವ್ರ ಆಕ್ರೋಶ

ಬೆಂಗಳೂರು, ಜೂ. 13(ಕೆಎಂಶಿ)–ಭಾರತದ ಇತಿಹಾಸದಲ್ಲಿಯೇ ರೈತರು, ಜನಸಾಮಾನ್ಯರು, ವೇತನ ವರ್ಗ, ಸಾರಿಗೆದಾರರು, ಸಣ್ಣ ಉದ್ಯಮದವರ ಪಾಲಿಗೆ ಕೇಂದ್ರದ ಎನ್‌ಡಿಎ ಸರ್ಕಾರ ಅತ್ಯಂತ ದುಬಾರಿ ಎಂಬುದು ಸಾಬೀತಾಗಿದೆ ಎಂದು ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಟೀಕಿಸಿದ್ದಾರೆ.



ಸುರ್ಜೇವಾಲ

ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವಾಲಯ ಜೂನ್ 12ರಂದು ಆದೇಶವೊಂದನ್ನು ಹೊರಡಿಸಿದ್ದು, ಇನ್ನು ಮುಂದೆ ಪೆಟ್ರೋಲ್ ಬಂಕ್‌ಗಳಲ್ಲಿ ಒಬ್ಬ ಗ್ರಾಹಕರಿಗೆ 200 ಲೀಟರ್‌ಗಿಂತ ಹೆಚ್ಚು ಡೀಸೆಲ್, ಪೆಟ್ರೋಲ್ ಮಾರಾಟ ಮಾಡದಂತೆ ನಿರ್ಬಂಧಿಸಿದೆ.

ನಿಗದಿತ ಮಿತಿಗಿಂತ ಹೆಚ್ಚು ಡೀಸೆಲ್ ಮತ್ತು ಪೆಟ್ರೋಲ್ ಬೇಕೆಂದರೆ 'ಬಲ್ಕ್ ಬೈಯರ್' ಬಳಿ ದೊಡ್ಡ ಪ್ರಮಾಣದಲ್ಲಿ ಖರೀದಿಸಬೇಕು.

ಪೆಟ್ರೋಲ್ ಬಂಕ್‌ನಲ್ಲಿ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 95ರಿಂದ 97 ರೂ. ಇದ್ದು, ಬಲ್ಕ್ ಬೈಯರ್ ಬಳಿ ಖರೀದಿಸುವಾಗ ಪ್ರತಿ ಲೀಟರ್ ಡೀಸೆಲ್ ಬೆಲೆ 135ರಿಂದ 140 ರೂ. ಆಗಲಿದೆ, ಅಂದರೆ ಪ್ರತಿ ಲೀಟರ್‌ಗೆ 40 ರೂ. ಹೆಚ್ಚಳವಾಗಲಿದೆ.

ಕೇಂದ್ರ ಸರ್ಕಾರದ ಈ ತೀರ್ಮಾನದಿಂದ ಮೊದಲನೆಯದಾಗಿ ರೈತನ ಮೇಲೆ ಭಾರೀ ಹೊರೆ ಬೀಳಲಿದೆ, ಪ್ರತಿ ರೈತ ಒಂದು ಎಕರೆಗೆ ಸುಮಾರು 300 ಲೀಟರ್ ಡೀಸೆಲ್ ಬಳಸುತ್ತಾನೆ, ಭಾರತದಲ್ಲಿ ಸರಾಸರಿ ಒಬ್ಬ ರೈತನಿಗೆ 5 ಎಕರೆ ಭೂಮಿ ಇದ್ದು, ಒಂದು ಬೆಳೆ ಋತುವಿಗೆ ಕನಿಷ್ಠ 1,500 ಲೀಟರ್ ಡೀಸೆಲ್ ಬೇಕಾಗುತ್ತದೆ. ಇದು 'ಬಲ್ಕ್ ಖರೀದಿ' ನಿಯಮಕ್ಕೆ ಒಳಪಡಲಿದ್ದು, ರೈತರಿಗೆ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 40 ರೂ. ಹೆಚ್ಚಾಗಲಿದೆ ಎಂದಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸುರ್ಜೇವಾಲ, ನಗರವಾಸಿಗಳು, ಅದರಲ್ಲೂ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರಿಗೆ ಹೆಚ್ಚಿನ ಹೊರೆ ಬೀಳಲಿದೆ. ಈ ವರ್ಗದ ಜನ ದೈನಂದಿನ ವಿದ್ಯುತ್ ಅಗತ್ಯಕ್ಕೆ ಜನರೇಟರ್‌ಗಳನ್ನು ಬಳಸುತ್ತಾರೆ.

ಇವರು ಬಲ್ಕ್ ಖರೀದಿದಾರರಿಂದ ಪ್ರತಿದಿನ 2,000 ದಿಂದ 5,000 ಲೀಟರ್ ಡೀಸೆಲ್ ಖರೀದಿಸುತ್ತಾರೆ, ಇವರಿಗೂ ಲೀಟರ್‌ಗೆ 40 ರೂ. ಹೆಚ್ಚಿನ ಹೊರೆ ಆಗಲಿದೆ, ಇದರಿಂದ ಇವರುಗಳ ದೈನಂದಿನ ವಿದ್ಯುತ್ ಬಳಕೆ ವೆಚ್ಚ ಭಾರೀ ಪ್ರಮಾಣದಲ್ಲಿ ಏರಿಕೆಯಾಗಲಿದೆ. ವೇತನ ವರ್ಗ ಮತ್ತು ಮಧ್ಯಮ ವರ್ಗದ ಮೇಲೂ ಇದೇ ಪರಿಣಾಮ ಬೀರಲಿದ್ದು, ಸಾಮಾನ್ಯ ಜನರ ಸಾರಿಗೆ ವೆಚ್ಚವೂ ಹೆಚ್ಚಾಗಲಿದೆ.

ಒಂದು ಬಸ್ ಟ್ಯಾಂಕ್‌ನಲ್ಲಿ 200 ಲೀಟರ್‌ಗಿಂತ ಹೆಚ್ಚು ಇಂಧನ ತುಂಬಿದರೆ, ಪ್ರತಿ ಲೀಟರ್ ಡೀಸೆಲ್‌ಗೆ 40 ರೂ. ಹೆಚ್ಚು ನೀಡಬೇಕಾಗುತ್ತದೆ, ಇದರಿಂದ ಬಸ್ ಪ್ರಯಾಣ ದರ ಹೆಚ್ಚಳವಾಗುವುದರಲ್ಲಿ ಸಂಶಯವಿಲ್ಲ.

ಇನ್ನು ಟ್ರಕ್‌ಗಳ ಬಗ್ಗೆ ಹೇಳುವುದಾದರೆ, ಪ್ರತಿ ಟ್ರಕ್ 500ರಿಂದ 1000 ಲೀಟರ್ ಸಾಮರ್ಥ್ಯದ ಟ್ಯಾಂಕ್ ಹೊಂದಿರುತ್ತದೆ, ಚಾಲಕರು, ಪ್ರತಿ ಲೀಟರ್‌ಗೆ 40 ರೂ. ಹೆಚ್ಚು ನೀಡಿ ಡೀಸೆಲ್ ಖರೀದಿಸಿದಾಗ, ಸಾರ್ವಜನಿಕರ ದಿನಬಳಕೆ ಸಾಮಗ್ರಿ ಸಾಗಣೆ ವೆಚ್ಚವೂ ಸಹಜವಾಗಿ ಹೆಚ್ಚಾಗುತ್ತದೆ. ಅಂತಿಮವಾಗಿ ಈ ಆರ್ಥಿಕ ಹೊರೆಯನ್ನು ಸಾಮಾನ್ಯ ಜನರೇ ಹೊರಬೇಕಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೂ ಬಲ್ಕ್ ಖರೀದಿ ಬಿಸಿ ತಟ್ಟಲಿದ್ದು, ವಿದ್ಯುತ್ ಪೂರೈಕೆಯ ಪ್ರತಿ 12, 14, 18 ಗಂಟೆ ನಂತರದ ವಿದ್ಯುತ್‌ಗೆ ಜನರೇಟರ್‌ಗಳನ್ನು ಅವಲಂಬಿಸಬೇಕಿದ್ದು, ಇವರೂ ಬಲ್ಕ್ ಖರೀದಿ ವ್ಯಾಪ್ತಿಗೆ ಬರುತ್ತಾರೆ. ಕೈಗಾರಿಕೆಯವರು 200 ಲೀಟರ್‌ಗಿಂತ ಹೆಚ್ಚಿನ, ಅಂದರೆ, 5,000, 10,000 ಮತ್ತು 15,000 ಲೀಟರ್ ಡೀಸೆಲ್ ಖರೀದಿಸಲು, ಪ್ರತಿ ಲೀಟರ್‌ಗೆ 40 ರೂ. ತೆರಬೇಕಿದ್ದು, ಸಾಮಾನ್ಯ ಜನರ ಬಳಕೆಯ ವಸ್ತುಗಳ ಉತ್ಪಾದನಾ ವೆಚ್ಚವೂ ಹೆಚ್ಚಲಿದೆ. ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜನರಿಂದ ಈ ವಿಷಯವನ್ನು ಮರೆಮಾಚುತ್ತಿದೆ. ದೈನಂದಿನ ಈ ದುಬಾರಿ ಬದುಕು ವಿರೋಧಿಸುವ ಸಮಯ ಬಂದಿದ್ದು, ಸಾಮಾನ್ಯ ಜನರ ಬಜೆಟ್ ಮೇಲೆ ದೈನಂದಿನ ಹೊರೆ ಹಾಕಿರುವುದನ್ನು ಖಂಡಿಸಬೇಕಿದೆ, ಜನತೆ ತಮ್ಮ ಸುತ್ತಮುತ್ತಲಿನ ಬಿಜೆಪಿ ನಾಯಕರು, ಕಾರ್ಪೋರೇಟರ್, ಶಾಸಕರು, ಸಂಸದರು, ಬಿಜೆಪಿ ಸಚಿವರನ್ನು ಈ ಬಗ್ಗೆ ಪ್ರಶ್ನಿಸ ಬೇಕು. ರಾಜ್ಯ ಹಾಗೂ ಕೇಂದ್ರ ಎರಡೂ ಕಡೆ ಆಡಳಿತ ಇರುವ ರಾಜ್ಯಗಳ ಬಿಜೆಪಿ ಸರ್ಕಾರಗಳನ್ನು ಜನತೆ ಪ್ರಶ್ನಿಸಲು ಪ್ರಾರಂಭಿಸಬೇಕಿದೆ, ಇದು ರಾಜಕೀಯ ಪಕ್ಷಗಳ ನಡುವಿನ ಹೋರಾಟವಲ್ಲ, ಇದು ಜನಸಾಮಾನ್ಯರ ಬಜೆಟ್ ಉಳಿವಿನ ಹೋರಾಟ ಎಂದಿದ್ದಾರೆ.

ದಿವ್ಯಾಂಗ ರೈಲ್ವೆ ಪ್ರಯಾಣಿಕರಿಗೆ ಆನ್‌ಲೈನ್ ಮೂಲಕ ರಿಯಾಯಿತಿ ಗುರುತಿನ ಚೀಟಿ ವಿತರಣೆ

ಮೈಸೂರು, ಜೂ.13(ಬಿಎಲ್‌ಯು)– ರೈಲುಗಳಲ್ಲಿ ಸಂಚರಿಸುವ ದಿವ್ಯಾಂಗ ಜನ ಪ್ರಯಾಣಿಕರಿಗೆ ಭಾರತೀಯ ರೈಲ್ವೆ ರಿಯಾಯಿತಿ ಗುರುತಿನ ಚೀಟಿಗಳನ್ನು ಆನ್ ಲೈನ್ ಮೂಲಕ ವಿತರಿಸುವ ವ್ಯವಸ್ಥೆಯನ್ನು ಪರಿಚಯಿಸಿದೆ.

ಈ ಕುರಿತಂತೆ ಮಾಹಿತಿ ನೀಡಿರುವ ಮೈಸೂರಿನ ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ಅವರು, ಇದರ ಸೌಲಭ್ಯ ಪಡೆಯುವ ದಿವ್ಯಾಂಗ ಪ್ರಯಾಣಿಕರು ಇನ್ನು ಮುಂದೆ ರೈಲ್ವೆ ಕಚೇರಿಗಳಿಗೆ ನೇರವಾಗಿ ಭೇಟಿ ನೀಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅಗತ್ಯ ದಾಖಲಾತಿಗಳನ್ನು ರೈಲ್ವೆ ಇಲಾಖೆಯ ಅಧಿಕೃತ ದಿವ್ಯಾಂಗ ಜನ ಐಡಿ ಪೋರ್ಟಲ್ https://divyangiand.indianrail.gov.in ಮೂಲಕ ಸುಲಭವಾಗಿ ಮನೆಯಿಂದಲೇ ಅರ್ಜಿ ಸಲ್ಲಿಸಬಹುದು ಎಂದು ಸಲಹೆ ನೀಡಿದ್ದಾರೆ. ಗುರುತಿನ ಚೀಟಿ ವಿತರಣೆಯ ಪ್ರಕ್ರಿಯೆ ಸುಲಭಗೊಳಿಸುವುದು, ಸಮಯ ಉಳಿಸುವುದು ಮತ್ತು ದೇಶಾದ್ಯಂತ ದಿವ್ಯಾಂಗ ಪ್ರಯಾಣಿಕರಿಗೆ ಹೆಚ್ಚಿನ ಸುಲಭ ಪ್ರವೇಶ ಒದಗಿಸುವುದು ಇದರ ಉದ್ದೇಶವಾಗಿದೆ ಎಂದು ಹೇಳಿದ್ದಾರೆ. ಇದು ಭಾರತೀಯ ರೈಲ್ವೆಯ ಸಮಾನತೆಯ ಸೇವೆಗಳತ್ತ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಈ ಸೌಲಭ್ಯವನ್ನು ದಿವ್ಯಾಂಗ ಪ್ರಯಾಣಿಕರು ಪಡೆದುಕೊಳ್ಳಬೇಕು ಎಂದು ಗಿರೀಶ್ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ದೇಶ - ವಿದೇಶ

ಕಂದನ ಬಿಗಿದಪ್ಪಿ 6ನೇ ಮಹಡಿಯಿಂದ ಹಾರಿದ ತಾಯಿ; ಮಗು ಪಾರು



ಹೈದರಾಬಾದ್: ಇಲ್ಲಿನ ಮಿಯಾಪುರದಲ್ಲಿ ಮಹಿಳಾ ಟೆಕ್ಕಿಯೊಬ್ಬರು ತಮ್ಮ 6 ತಿಂಗಳ ಮಗುವನ್ನು ಬಿಗಿದಪ್ಪಿಕೊಂಡು ಆರನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಅದೃಷ್ಟವಶಾತ್ ಮಗು ಬದುಕುಳಿದಿದೆ. ಮಿಯಾಪುರದ ಮಯೂರಿ ನಗರದಲ್ಲಿರುವ ಲಕ್ಷ್ಮಿ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ಸ್‌ನಲ್ಲಿ ಈ ಘಟನೆ ನಡೆದಿದ್ದು, ಮೃತ ಮಹಿಳೆಯನ್ನು ಇಶಾ ಸಾಹು(37) ಎಂದು ಗುರುತಿಸಲಾಗಿದೆ. ಮೂಲತಃ ಮಧ್ಯಪ್ರದೇಶದವರಾದ ಅವರು ಕುಟುಂಬದೊಂದಿಗೆ ಹೈದರಾಬಾದ್‌ನಲ್ಲಿ ನೆಲೆಸಿದ್ದರು. ಇಶಾ ಸಾಹು ಅವರು ತಮ್ಮ ಮಗುವನ್ನು ಎದೆಗವುಚಿಕೊಂಡು ಅಪಾರ್ಟ್‌ಮೆಂಟ್‌ನ 6ನೇ ಮಹಡಿಯಿಂದ ಜಿಗಿದಿದ್ದಾರೆ. ಕೆಳಗೆ ಬೀಳುವ ಸಂದರ್ಭದಲ್ಲಿ ಅದೃಷ್ಟವಶಾತ್ ಮಗು ತಾಯಿಯ ತೆಕ್ಕೆಯಿಂದ ಬೇರ್ಪಟ್ಟು ಪಕ್ಕಕ್ಕೆ ಬಿದ್ದಿದೆ ಎನ್ನಲಾಗಿದೆ. ತಕ್ಷಣವೇ ಅಪಾರ್ಟ್‌ಮೆಂಟ್ ನಿವಾಸಿಗಳು ಮತ್ತು ತುರ್ತು ನಿರ್ವಹಣಾ ಸಿಬ್ಬಂದಿ, ಮಗುವನ್ನು ರಕ್ಷಿಸಿ ಕೆಪಿಎಚ್‌ಬಿಯಲ್ಲಿರುವ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಗು ಸದ್ಯ ಪ್ರಾಣಾಪಾಯದಿಂದ ಪಾರಾಗಿದೆ. ಆದರೆ, ಇಶಾ ಸಾಹು ಗಂಭೀರ ಗಾಯಗಳೊಂದಿಗೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಳೆದ ಕೆಲವು ತಿಂಗಳಿಂದ ನಿದ್ರಾಹೀನತೆಯಿಂದ ಬಳಲುತ್ತಿದ್ದ ಇಶಾ ಸಾಹು, ಇದರಿಂದಲೇ ಮಾನಸಿಕ ಖಿನ್ನತೆಗೆ ಒಳಗಾಗಿ ಈ ಕೆಟ್ಟ ನಿರ್ಧಾರ ತೆಗೆದುಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಚೀನಾಕ್ಕೆ ಕತ್ತೆ ಮಾರಿ ಖಜಾನೆ ತುಂಬಿಸಲು ಮುಂದಾದ ಪಾಕಿಸ್ತಾನ!

ಇಸ್ಲಾಮಾಬಾದ್: ಆರ್ಥಿಕ ಸಂಕಷ್ಟದಿಂದ ತತ್ತರಿಸುತ್ತಿರುವ ಪಾಕಿಸ್ತಾನ, ಖಾಲಿ ಖಜಾನೆ ತುಂಬಿಸಿಕೊಳ್ಳಲು ದೇಶದಲ್ಲಿರುವ ಕತ್ತೆಗಳನ್ನು ಚೀನಾಕ್ಕೆ ರಫ್ತು ಮಾಡಲು ಯೋಜನೆ ರೂಪಿಸಿದೆ.



ಕಳೆದ ಗುರುವಾರ ಪಾಕಿಸ್ತಾನದ ಹಣಕಾಸು ಸಚಿವ ಮೊಹಮ್ಮದ್ ಔರಂಗಜೇಬ್ ಬಿಡುಗಡೆ ಮಾಡಿದ ಪಾಕಿಸ್ತಾನ ಆರ್ಥಿಕ ಸಮೀಕ್ಷೆಯ ಅಧಿಕೃತ ವರದಿಯಲ್ಲಿ ಈ ವಿಷಯ ಬಹಿರಂಗಗೊಂಡಿದೆ.

ಕತ್ತೆ ಮಾಂಸ ಮತ್ತು ಇತರ ಉತ್ಪನ್ನಗಳಿಗೆ ಹೊಸ ರಫ್ತು ಅವಕಾಶಗಳು ಎಂಬ ಪ್ರತ್ಯೇಕ ವಿಭಾಗವನ್ನೇ ತೆರೆಯಲಾಗಿದೆ. ಚೀನಾದಲ್ಲಿ ಕತ್ತೆ ಮಾಂಸ, ಕತ್ತೆ ಹಾಲು ಮತ್ತು ಅದರ ಚರ್ಮದಿಂದ ತಯಾರಿಸುವ ಎಜಿಯಾವೋ ಔಷಧೀಯ ಗುಣಗಳಿಗಾಗಿ ಭಾರಿ ಬೇಡಿಕೆ ಇರುವುದರಿಂದ ಪಾಕಿಸ್ತಾನ ಕತ್ತೆ ಮಾಂಸ ಮತ್ತು ಚರ್ಮವನ್ನು ರಫ್ತು ಮಾಡಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಕತ್ತೆಗಳನ್ನು ಕೊಲ್ಲಲು ಕಸಾಯಿಖಾನೆ ನಿರ್ಮಾಣಕ್ಕೆ ಮೆಸರ್ಸ್ ಶಹಜಾದ್ ಮತ್ತು ಶಾವೊ ಕಂಪನಿಗೆ ಹೊಸದಾಗಿ ಪರವಾನಗಿ ನೀಡಿದೆ. ಇದರೊಂದಿಗೆ ಪಾಕ್‌ನಲ್ಲಿ ಕತ್ತೆ ಮಾಂಸ ರಫ್ತು ಮಾಡುವ ಕಂಪನಿಗಳು ಜನ್ಮತಳೆದಿವೆ. ಪಾಕಿಸ್ತಾನದಲ್ಲಿ ಕತ್ತೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದ್ದು, ಪ್ರಸ್ತುತ 60 ಲಕ್ಷಕ್ಕೂ ಹೆಚ್ಚು ಕತ್ತೆಗಳಿವೆ ಎನ್ನಲಾಗಿದೆ.

ವಾಯುಪಡೆ ಸಾರಿಗೆ ವಿಮಾನ ಪತನ: ಐವರು ಸಿಬ್ಬಂದಿ ಹುತಾತ್ಮ

ಜೋರ್ಹತ್: ಅಸ್ಸಾಂನ ಜೋರ್ಹತ್‌ನಲ್ಲಿರುವ ವಾಯುಪಡೆ ನಿಲ್ದಾಣದಲ್ಲಿ ಶನಿವಾರ ಭಾರತೀಯ ವಾಯುಪಡೆ (ಐಎಎಫ್)ಯ ಎಎನ್–32 ಸಾರಿಗೆ ವಿಮಾನ ಪತನಗೊಂಡು ಐವರು ವಾಯುಪಡೆ ಸಿಬ್ಬಂದಿ ಹುತಾತ್ಮರಾಗಿದ್ದು, ಸಹ ಪೈಲಟ್ ಗಾಯಗೊಂಡಿದ್ದಾರೆ.



ಸ್ಕ್ವಾಡ್ರನ್ ಲೀಡರ್ ಪ್ರಶಾಂತ್ ಸಿಂಗ್, ಫ್ಲೈಟ್ ಲೆಫ್ಟಿನೆಂಟ್ ಶುಭಮ್ ಕುಮಾರ್, ಸಾರ್ಜೆಂಟ್ ಜಿತೇಂದ್ರ ಶರ್ಮಾ, ಅಗ್ನಿವೀರ್ ಖೇಮರಾಮ್ ಕುಮಾವತ್ ಮತ್ತು ಅಗ್ನಿವೀರ್ ಡ್ಯಾನಿಶ್ ಆಲಂ ಅವರು ದುರಂತದಲ್ಲಿ ಮಡಿದವರಾಗಿದ್ದು, ಭಾರತೀಯ ವಾಯುಪಡೆ ಸಂತಾಪ ಸೂಚಿಸಿದೆ. ಶನಿವಾರ ಬೆಳಗ್ಗೆ ಸುಮಾರು 10 ಗಂಟೆ ವೇಳೆಗೆ ಜೋರ್ಹತ್‌ನಲ್ಲಿ ನಿಯಮಿತ ತರಬೇತಿ ಹಾರಾಟದ ಸಮಯದಲ್ಲಿ ಈ ದುರಂತ ಸಂಭವಿಸಿದೆ. ವಿಮಾನ ರನ್‌ವೇಯಲ್ಲಿ ಇಳಿಯುವಾಗ ನಿಯಂತ್ರಣ ತಪ್ಪಿ, ನಿಲ್ದಾಣದ ಆವರಣದೊಳಗೇ ಪತನಗೊಂಡಿದೆ. ತಕ್ಷಣ ಭಾರೀ ಪ್ರಮಾಣದ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ತುರ್ತು ರಕ್ಷಣಾ ತಂಡಗಳು ಕಾರ್ಯಾಚರಣೆ ಆರಂಭಿಸಿದರೂ ಸಿಬ್ಬಂದಿಯನ್ನು ರಕ್ಷಿಸಲು ಸಾಧ್ಯವಾಗಿಲ್ಲ. ಘಟನೆಗೆ ನಿಖರ ಕಾರಣ ತಿಳಿಯಲು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ.

ಅಮೆರಿಕ ಮಿಲಿಟರಿ ದಾಳಿಗೆ ನಿನೋ ಗೆರೆರೋ ಬಲಿ

ವಾಷಿಂಗ್ಟನ್: ಜಗತ್ತಿನ ಅತ್ಯಂತ ಕ್ರೂರ ಭಯೋತ್ಪಾದಕ ಸಂಘಟನೆಗಳಲ್ಲಿ ಒಂದಾದ 'ಟ್ರೆನ್ ಡಿ ಅರಾಗುವಾ' ಗ್ಯಾಂಗ್‌ನ ಮುಖ್ಯಸ್ಥ 'ನಿನೋ ಗೆರೆರೊ' ಅಮೆರಿಕ ಮಿಲಿಟರಿಯ ಭೀಕರ ದಾಳಿಗೆ ಹತನಾಗಿದ್ದಾನೆ. ನೇರ ಆದೇಶದ ಮೇರೆಗೆ ಯುಎಸ್ ಸದರ್ನ್ ಕಮಾಂಡ್ ನಡೆಸಿದ ಅತ್ಯಂತ ವೇಗದ ವೈಮಾನಿಕ ದಾಳಿಯಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಸುದೀರ್ಘ ಪೋಸ್ಟ್‌ನಲ್ಲಿ ಟ್ರಂಪ್, ಮಾಜಿ ಅಧ್ಯಕ್ಷ ಜೋ ಬೈಡನ್ ಅವರ ನೀತಿಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ವಿದೇಶಿ ಕ್ರಿಮಿನಲ್ ಸೈನ್ಯವು ಅಮೆರಿಕದ ನಾಗರಿಕರ ಮೇಲೆ ಅತ್ಯಾಚಾರ, ದೌರ್ಜನ್ಯ ಮತ್ತು ಕೊಲೆಗಳನ್ನು ಮಾಡಲು ಬೈಡನ್ ಸರ್ಕಾರವೇ ಪರೋಕ್ಷವಾಗಿ ಕಾರಣವಾಗಿತ್ತು ಎಂದು ಕಿಡಿಕಾರಿದ್ದಾರೆ.



ತಮ್ಮ ಆಡಳಿತದ ಆರಂಭದಲ್ಲೇ ಟ್ರೆನ್ ಡಿ ಅರಾಗುವಾ ಗ್ಯಾಂಗ್ ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿದ್ದು, ಈ ಕಾರ್ಯಾಚರಣೆಯನ್ನು ವೆನೆಜುವೆಲಾ ಸರ್ಕಾರದೊಂದಿಗೆ ನಿಕಟವಾಗಿ ಸಂಯೋಜಿಸಿ ಯಶಸ್ವಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಯ್ಯಪ್ಪ ಸ್ವಾಮಿ ದೇವಸ್ಥಾನದ ಚಿನ್ನ ಕಳವು ಪ್ರಕರಣದ ಆರೋಪಿ ಮುರಾರಿ ನಿಧನ

ತಿರುವನಂತಪುರಂ: ಕೇರಳದ ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಚಿನ್ನ ಕಳವು ಪ್ರಕರಣದ 2ನೇ ಆರೋಪಿ ಮುರಾರಿ ಬಾಬು ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಕೊಟ್ಟಾಯಂ ಜಿಲ್ಲೆಯ ಚಂಗನಶ್ಶೇರಿ ಬಳಿಯ ಪೆರುನ್ನದ ನಿವಾಸಿಯಾಗಿದ್ದ ಇವರು ದೇವಸ್ಥಾನದ ಮಾಜಿ ಆಡಳಿತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಚಿನ್ನ ಕಳವು ಪ್ರಕರಣದಲ್ಲಿ ಇವರನ್ನು ವಿಶೇಷ ತನಿಖಾ ತಂಡ(ಎಸ್‌ಐಟಿ)ವು 2025 ಅಕ್ಟೋಬರ್ 25ರಂದು ಬಂಧಿಸಿತ್ತು. ಬಂಧನ ವಾದ 90 ದಿನಗಳ ನಂತರವೂ ಎಸ್‌ಐಟಿ ಆರೋಪಪಟ್ಟಿ ಸಲ್ಲಿಸಲು ವಿಫಲ ವಾದ ಕಾರಣ ಕೊಲ್ಲಂ ವಿಜಿಲೆನ್ಸ್ ನ್ಯಾಯಾಲಯವು ಅವರಿಗೆ ಜಾಮೀನು ನೀಡಿತ್ತು. ಅನಾರೋಗ್ಯದಿಂದ ಕೊಚ್ಚಿಯ ಅಮೃತ ಆಸ್ಪತ್ರೆಗೆ ದಾಖಲಾಗಿದ್ದ ಮುರಾರಿ, ಶನಿವಾರ ಬೆಳಗಿನ ಜಾವ ಮೃತಪಟ್ಟಿದ್ದಾರೆ. ಮುರಾರಿ 994ರಲ್ಲಿ ಪೊಲೀಸ್ ಅಧಿಕಾರಿಯಾಗಿ ತಮ್ಮ ವೃತ್ತಿಜೀವನ ಆರಂಭಿಸಿದ್ದರು. ನಂತರ ಸೇವೆಗೆ ರಾಜೀನಾಮೆ ನೀಡಿ 1997ರಲ್ಲಿ ತಿರುವಾಂಕೂರು ದೇವಸ್ವಂ ಮಂಡಳಿಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿದ್ದರು. ವೈಕಂ, ಎಟ್ಟುಮನೂರು ಮತ್ತು ತಿರುನಕ್ಕರ ದೇವಸ್ಥಾನಗಳಲ್ಲಿ ದೇವಸ್ವಂ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ನಂತರ 2019ರಲ್ಲಿ ಶಬರಿಮಲೆ ದೇವಸ್ಥಾನದ ಆಡಳಿತ ಅಧಿಕಾರಿಯಾಗಿ ನೇಮಕಗೊಂಡು, 2024ರವರೆಗೂ ಆ ಹುದ್ದೆಯಲ್ಲಿ ಮುಂದುವರೆದಿದ್ದರು.



ಕೊಡಗಿನ ಸಿ ಅಂಡ್ ಡಿ ಲ್ಯಾಂಡ್ ಹೋರಾಟಕ್ಕೆ ಪಕ್ಷಾತೀತ ಬೆಂಬಲ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪ್ರಕಟಣೆ

ಮಡಿಕೇರಿ, ಜೂ.13– ಕೊಡಗಿನ ಸಿ ಅಂಡ್ ಡಿ ಲ್ಯಾಂಡ್ ಹೋರಾಟಕ್ಕೆ ವೀರ ಶೈವ ಸಮುದಾಯದವರು ಒಗ್ಗಟ್ಟಾಗಿ ಹೋರಾಟ ಹಮ್ಮಿಕೊಳ್ಳುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ತಿಳಿಸಿದ್ದಾರೆ.

ಶನಿವಾರಸಂತೆಯ ಗುಡುಗಳಲೆ ಜಯ ದೇವ ಜಾನುವಾರುಗಳ ಜಾತ್ರಾ ಮೈದಾನ ದಲ್ಲಿ ಬಸವ ಜಯಂತಿ, ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ರೇಣುಕಾಚಾರ್ಯ ಜಯಂತಿ, ಕೊಡಗನ್ನು ಆಳಿದ ಹಾಲೇರಿ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪ ಅವರ ಸಂಸ್ಮರಣೋತ್ಸವ ಸಮಾರಂಭ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊಡಗಿನ ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಚಳವಳಿ ನಡೆಸುತ್ತಿರುವ ರೈತರಿಗೆ ಬೆಂಬಲ ವಾಗಿ ಹೋರಾಟಗಾರರೊಂದಿಗೆ ಜನಪ್ರತಿ ನಿಧಿಗಳು ಒಗ್ಗಟ್ಟಿನಿಂದ ಪಕ್ಷಾತೀತವಾಗಿ ಬೆಂಬಲಕ್ಕೆ ಬರುತ್ತೇವೆ ಎಂದು ಭರವಸೆ ನೀಡಿದರು.

ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಮಾತನಾಡಿ, ವೀರಶೈವ ಸಮುದಾಯದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಅಲ್ಲೇ ಬಗೆಹರಿಸಿಕೊಂಡು ಸಂಘಟನೆಯ ಬೆಳವಣಿಗೆಗಾಗಿ ಎಲ್ಲರೂ ಒಗ್ಗಟ್ಟಾಗಬೇಕು ಎಂದರು.

ಸಂಸದ ಯದುವೀರ್ ಮಾತನಾಡಿ ಸಮುದಾಯದ ಸಂಘಟನೆಯ ಬಲವರ್ಧನೆಗೆ ಇಂತಹ ಜಯಂತೋತ್ಸವ, ಸಂಸ್ಮರಣೋತ್ಸವ ಕಾರ್ಯಕ್ರಮಗಳ ಅಗತ್ಯವಿದೆ. ಕೊಡಗಿನಲ್ಲಿ ವೀರಶೈವ ಮಹಾ ಸಭಾ ವತಿಯಿಂದ ಇಂತಹ ಯಶಸ್ವಿ ಕಾರ್ಯಕ್ರಮ ಹಮ್ಮಿ ಕೊಂಡಿರುವುದು ಶ್ಲಾಘನೀಯ. ಬಸ ವಣ್ಣನವರ ತತ್ವ ಆದರ್ಶ, ಸಾಮಾಜಿಕ ಮಾರ್ಗ ದರ್ಶನವನ್ನು ಮೈಸೂರು ರಾಜವಂಶ ಪಾಲಿಸಿದ್ದರು ಎಂದು ಹೇಳಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಸಮಾಜದಲ್ಲಿ ಭೇದಭಾವ ಇಲ್ಲದೆ ಎಲ್ಲರನ್ನು ಒಂದೆಡೆಗೆ ಕೊಂಡೊಯ್ಯಬೇಕು. ಕೊಡಗಿನ ಸಿ ಅಂಡ್ ಡಿ ಲ್ಯಾಂಡ್ ಹೋರಾಟಕ್ಕೆ ನಾವೆಲ್ಲರೂ ಹೋರಾಟಗಾರರ ಬೆಂಬಲಕ್ಕೆ ನಿಂತಿದ್ದೇವೆ ಎಂದು ಹೇಳಿದರು. ಸ್ವಾತಂತ್ರ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪ ಅವರ ಸ್ಮಾರಕ ನಿರ್ಮಾಣಕ್ಕೆ ಸದರಿ ಗ್ರಾಮದಲ್ಲಿ ಜಾಗ ನೀಡಿದ್ದಲ್ಲಿ ಸರಕಾರದಿಂದ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು. ಸಮಾರಂಭದಲ್ಲಿ ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಮನೆಹಳ್ಳಿ ಮಠದ ಮಹಾಂತ ಶಿವಲಿಂಗ ಸ್ವಾಮೀಜಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲೆಯ ವಿವಿಧ ಮಠದ ಮಠಾಧೀಶರು ದಿವ್ಯ ಸಾನಿಧ್ಯ ವಹಿಸಿದ್ದರು.

ಹೈಕೋರ್ಟಿನ ಹಿರಿಯ ವಕೀಲ ಹೆಚ್.ಎಸ್.ಚಂದ್ರಮೌಳಿ, ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ವಿರೂಪಾಕ್ಷಯ್ಯ, ಯುವ ಘಟಕದ ಅಧ್ಯಕ್ಷ ಮೋಕ್ಷಿಕ್ ರಾಜ್, ಪ್ರಮುಖರಾದ ಕಾಂತರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಮಾರಂಭಕ್ಕೂ ಮುನ್ನ ಗುಡುಗಳಲೆಯಿಂದ ಜಾತ್ರಾ ಮೈದಾನದವರೆಗೆ ಅದ್ದೂರಿ ಮೆರವಣಿಗೆ ನಡೆಸಲಾಯಿತು.


ಶನಿವಾರಸಂತೆಯಲ್ಲಿ ಬಸವ ಜಯಂತಿ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ಮಗ ಹೇಮಂತ್ ಕೊಲೆಗೆ ಪೊಲೀಸ್ ಅಧಿಕಾರಿಗಳೆ ಕಾರಣ: ಆರೋಪ


ಹೇಮಂತ್‌ನ ಕುಟುಂಬದ ಸದಸ್ಯರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ: ಜಿಲ್ಲಾ ಕಾರಾಗೃಹದಲ್ಲಿ ಜೂ.1ರಂದು ನಡೆದ ಹೇಮಂತ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಕಾರ ರೂ.5 ಕೋಟಿ ಪರಿಹಾರ ನೀಡಬೇಕು ಮತ್ತು ಪೊಲೀಸರು ಸೇರಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹೇಮಂತ್‌ನ ಕುಟುಂಬದ ಸದಸ್ಯರು ಒತ್ತಾಯಿಸಿದ್ದಾರೆ.

ಪೂರ್ವಯೋಜಿತ ಸಂಚಿನಿಂದ ನಮ್ಮ ಮಗನ ಕೊಲೆಯಾಗಿದೆ. ಇದಕ್ಕೆ ಪೊಲೀಸರ ಬೆಂಬಲವಿದೆ. ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ಗ್ರಾಮದಲ್ಲಿರುವ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ನಡೆದ ಕಲಹದಿಂದ ಈ ಕೊಲೆಯಾಗಿದೆ. ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ನಮಗೆ ಬೆದರಿಕೆ ಇರುವ ಬಗ್ಗೆ ಸ್ಥಳೀಯ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸುಮಾರು 18 ಬಾರಿ ದೂರನ್ನು ನೀಡಲಾಗಿದೆ. ಆದರೆ ನಮಗೆ ಯಾವುದೇ ನ್ಯಾಯ ಸಿಗಲಿಲ್ಲ. ಈ 18 ದೂರುಗಳಲ್ಲಿ ಒಂದು ದೂರನ್ನಾದರೂ ಪೊಲೀಸರು ಪರಿಗಣಿಸಿದ್ದರೆ ನನ್ನ ಮಗನ ಕೊಲೆಯಾಗುತ್ತಿರಲಿಲ್ಲ ಎಂದು ಹೇಮಂತ್‌ನ ತಂದೆ ಬಿ.ಹೆಚ್. ರವಿ ಹಾಗೂ ತಾಯಿ ಬಿ.ಆರ್.ಇಂದಿರಾ ಸುದ್ದಿಗೋಷ್ಠಿಯಲ್ಲಿ ಕಿಡಿ ಕಾರಿದರು.

ಜೈಲಿನಲ್ಲೇ ರಕ್ಷಣೆ ಇಲ್ಲದ ನಮಗೆ ಹೊರಗೆ ರಕ್ಷಣೆ ಸಿಗಲು ಸಾಧ್ಯವೆ ಎಂದು ಪ್ರಶ್ನಿಸಿದ ಬಿ.ಹೆಚ್.ರವಿ, ನಮ್ಮ ಕುಟುಂಬಕ್ಕೆ ಆಧಾರ ಸ್ತಂಭವಾಗಿದ್ದ ಮಗನ ಸಾವಿನಿಂದ ನಮಗೆ ತುಂಬಲಾರದ ನಷ್ಟ ಉಂಟಾಗಿದೆ. ಆದ್ದರಿಂದ ರೂ.5 ಕೋಟಿ ಪರಿಹಾರ ನೀಡಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ಕುಟುಂಬದ ಸದಸ್ಯ ಎಂ.ಪ್ರಶಾಂತ್ ಮಾತನಾಡಿ, ಕಾರಾಗೃಹದಲ್ಲಿ ಹೇಮಂತ್‌ನ ಕೊಲೆಯಾಗಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ. ಚಾಕು, ಚೂರಿಗಳು ಕಾರಾಗೃಹವನ್ನು ಪ್ರವೇಶಿಸಿದ್ದು ಹೇಗೆ ಎಂದು ಪ್ರಶ್ನಿಸಿದ ಅವರು, ಕಾರಾಗೃಹದ ನಿಯಮಕ್ಕೆ ಕಾನೂನು ತಿದ್ದುಪಡಿ ತರಬೇಕೆಂದು ಆಗ್ರಹಿಸಿದರು. ವಿರಾಜಪೇಟೆಯ ಸರ್ವೋದಯ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಕೆ.ಎಂ. ಕುಶಾಲಪ್ಪ ಮಾತನಾಡಿ, ಅಮಾಯಕ ಯುವಕನ ಕೊಲೆಗೆ ಕಾರಣಕರ್ತರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಬಿ.ಪಿ.ಹಸೈನಾರ್ ಹಾಗೂ ಬಿಟ್ಟಂಗಾಲದ ಜಗದೀಶ್ ಉಪಸ್ಥಿತರಿದ್ದರು.

ಗೌಡ ಮಹಿಳಾ ಒಕ್ಕೂಟದಿಂದ ಬಾಲಕಾರ್ಮಿಕ ವಿರೋಧಿ ದಿನಾಚರಣೆ


ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಕಾರುಗುಂದ ಗೌಡ ಸಮಾಜದ ಉಪಾಧ್ಯಕ್ಷ ಕೇಕಡ ದಿನೇಶ್ ಉದ್ಘಾಟಿಸಿದರು.

ನಾಪೋಕ್ಲು, ಜೂ.13–ಬಾಲಕಾರ್ಮಿಕ ಪದ್ಧತಿಗೆ ಸರ್ಕಾರವೊಂದೇ ಕಾರಣವಲ್ಲ ನಾಗರಿಕರಾದ ನಾವುಗಳು ಕೂಡ ಪಾತ್ರಧಾರಿಗಳಾಗಿದ್ದೇವೆ. ಎಂದು ಮಡಿಕೇರಿಯ ವಕೀಲ ಅಂಬೆಕಲ್ಲು ಪ್ರಿಯನವೀನ್ ಹೇಳಿದರು.

ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ವತಿಯಿಂದ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬಾಲಕಾರ್ಮಿಕರನ್ನು ಅಮಾನುಷವಾಗಿ ದುಡಿಸಿಕೊಳ್ಳುವುದು ಕಂಡು ಬಂದಲ್ಲಿ ಹಾಗೆಯೇ ಭಿಕ್ಷಾಟನೆ ಚಿಂದಿ ಆಯುವ ಬಾಲ ಕಾರ್ಮಿಕರನ್ನು ಕಂಡು ಬಂದಲ್ಲಿ ಕಂದಾಯ ಇಲಾಖೆ ಪೊಲೀಸ್ ಇಲಾಖೆ ಆರೋಗ್ಯ ಇಲಾಖೆ ಹೀಗೆ ಸಂಬಂಧ ಪಟ್ಟ ಇಲಾಖೆಗಳಿಗೆ ದೂರು ನೀಡುವ ಮೂಲಕ ಸಾಧ್ಯವಾದ ಮಟ್ಟಿಗೆ ಬಾಲಕಾರ್ಮಿಕ ಪದ್ಧತಿಯನ್ನು ಕಡಿಮೆ ಮಾಡಬಹುದು ಎಂದರು.

ಕಾರುಗುಂದ ಗೌಡ ಸಮಾಜದ ಅಧ್ಯಕ್ಷ ಕೊಡಪಾಲು ಗಣಪತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮಾಜದ ಉಪಾಧ್ಯಕ್ಷ ಕೇಕಡ ದಿನೇಶ್ ಉದ್ಘಾಟಿಸಿದರು. ಚೇರಂ ಬಾಣೆ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೇಕಡ ಪೂಜಾ ನಾಗೇಂದ್ರ, ಕೋಶಾಧಿಕಾರಿ ಕೊಡಪಾಲು ತೀರ್ಥ ಗಣಪತಿ, ಉಪಾಧ್ಯಕ್ಷ ಹೊಸೊಕ್ಲು ಲತಾ ಮೊಣ್ಣಪ್ಪ, ಕೂರನ ಸುಶೀಲಾ ಅಪ್ಪಾಜಿ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿದ್ದರು .

ಕೊಡವ ಸಮಾಜದ ಸದಸ್ಯರಿಗೆ ಉಚಿತ ಹೆಲ್ತ್ ಕಾರ್ಡ್

ವಿರಾಜಪೇಟೆ, ಜೂ.13–ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯವರು ಸಮಾಜದ ಸರ್ವ ಸದಸ್ಯರು ಮತ್ತು ಅವಲಂಬಿತರಿಗೆ ಉಚಿತ ಹೆಲ್ತ್ ಕಾರ್ಡ್‌ನ್ನು ನೀಡಿದ್ದಾರೆ ಎಂದು ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ ತಿಳಿಸಿದ್ದಾರೆ.

ಸಮಾಜದ ಕಛೇರಿಯಲ್ಲಿ ಈ ಕಾರ್ಡ್‌ಗಳನ್ನು ಪಡೆದುಕೊಂಡು ಇದರಲ್ಲಿ ದೊರೆಯುವ ರಿಯಾಯಿ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೊಡವ ಸಮಾಜದ ಮುಂದೆ ವಾಹನಗಳನ್ನು ಅಡ್ಡಾದಿಡ್ಡಿ ನಿಲ್ಲಿಸುವುದರಿಂದ ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ಮತ್ತು ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿರುವುದರಿಂದ ಪುರಸಭೆಯ ವಾಟರ್‌ವರ್ಕ್ಸ್ ಪಕ್ಕದ ತ್ರಿವೇಣಿ ಶಾಲಾಬದಿಯಲ್ಲಿ, ಸಮಾಜದ ವತಿಯಿಂದ 2 ಎಕರೆ ಜಾಗವನ್ನು ವಾಹನ ನಿಲುಗಡೆಗೆ ಕಾಯ್ದಿರಿಸಲಾಗಿದ್ದು, ಅದೇ ಜಾಗದಲ್ಲಿ ವಾಹನಗಳನ್ನು ನಿಲುಗಡೆಗೊಳಿಸಬೇಕೆಂದು ಹೇಳಿದರು.

ಸಮಾಜದ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಮಾತನಾಡಿ, ಸಮಾಜದ ಪಕ್ಕದಲ್ಲಿರುವ ಸ್ಮಶಾನದಲ್ಲಿ ಸಿಲಿಕಾನ್ ವ್ಯವಸ್ಥೆಯಲ್ಲಿ ಶವಸಂಸ್ಕಾರ ನಡೆಯುತ್ತಿದ್ದು, ಇದರ ಬದಲು ಗ್ಯಾಸ್ ಬರ್ನ್ ವ್ಯವಸ್ಥೆಮಾಡಲು ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ 5 ಲಕ್ಷ ನೀಡಿದ್ದು, ಮತ್ತೆ 5 ಲಕ್ಷ ಅನುದಾನ ನೀಡುವ ಭರವಸೆ ನೀಡಿದ್ದಾರೆ ಎಂದರು.


ಕೊಡವ ಸಮಾಜದ ಗಣ್ಯರು ಪತ್ರಿಕಾಗೋಷ್ಠಿ ನಡೆಸಿದರು.

ಸಮಾಜದ ಉಪಾಧ್ಯಕ್ಷ ಕಾಣತಂಡ ಜಗದೀಶ್ ಮಾತನಾಡಿ, ವಾಹನಗಳ ನಿಲುಗಡೆಗೆ 2 ಎಕರೆ ಜಾಗವನ್ನು ಅಭಿವೃದ್ಧಿಗೊಳಿಸಲು ಶಾಸಕ ಎ.ಎಸ್.ಪೊನ್ನಣ್ಣ 10 ಲಕ್ಷ ನೀಡಿದ್ದರು ಉಳಿದ ಕಾಮಗಾರಿಗಳಿಗೆ ಅನುದಾನದ ಅವಶ್ಯವಿದ್ದು ಶಾಸಕರನ್ನು ಕೋರಲಾಗಿದೆ ಎಂದರು.

ಕೊಡವ ಸಮಾಜದ ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ರತ್ನ ಸುಬ್ರಮಣಿ ಮಾತನಾಡಿ ಕೈಲ್ ಪೊಲ್ದ್ ಹಬ್ಬವು ಸೆ. 5 ಮತ್ತು 6ರಂದು ಸಮಾಜದ ಆವರಣದಲ್ಲಿ ನಡೆಯಲಿದೆ. ಕೋಲಾಟ್, ಬೊಳಕಾಟ್, ಕತ್ತಿಯಾಟ್, ಉಮ್ಮತಾಟ್, ಪರಿಯಕಳಿ, ಸಂಬಂಧ ಅಡ್‌ಕುವೊ, ಬಾಳೊಪಾಟ್ ದೇಶಕಟ್ ಪಾಟ್, ತಾಲಿಪಾಟ್, ಕಪ್ಪೆಯಾಟ್, ಮಂಡೆತುಣಿ ಕಟ್ಟುವೊ, ಚ್ಯಾಲೆ ಕಟ್ಟುವೊ, ಹಾಗೂ ಪುರುಷರಿಗೆ ಮತ್ತು ಮಹಿಳೆಯರಿಗೆ ಹಗ್ಗಜಗ್ಗಾಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಕೊಡವ ಸಾಕ್ಷ್ಯಚಿತ್ರ ಆಯ್ಕೆ

ಮಡಿಕೇರಿ: ಮುಂಬೈನ ಎನ್‌ಎಫ್‌ಡಿಸಿ–ಎಫ್‌ಡಿ ಕ್ಯಾಂಪಸ್‌ನಲ್ಲಿ ಜೂ.15ರಿಂದ ಆರಂಭವಾಗುವ 19ನೇ ಮುಂಬೈ ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ 'ಉಮ್ಮತ್ತಾಟ್' ಕೊಡವ ಸಾಕ್ಷ್ಯಚಿತ್ರ ಆಯ್ಕೆಯಾಗಿದೆ. ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಹಾಗೂ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ದಂಪತಿಗೆ ಮುಂಬೈ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಉಮ್ಮತ್ತಾಟ್ ಪ್ರದರ್ಶನಗೊಳ್ಳುತ್ತಿರುವುದು ಮತ್ತೊಂದು ಹೆಗ್ಗಳಿಕೆಯಾಗಿದೆ.

ಧಾರ್ಮಿಕ ಚಟುವಟಿಕೆಗಳ ಕಾಯ್ದೆ ವ್ಯಾಪ್ತಿಗೆ ಬಂದೂಕು ಹಕ್ಕನ್ನು ತರಲು ಆಗ್ರಹ


ಎನ್.ಯು.ನಾಚಪ್ಪ

ಮಡಿಕೇರಿ, ಜೂ.13–ಕೊಡವ ಧಾರ್ಮಿಕ ಸಂಸ್ಕಾರವನ್ನು ಸಂವಿಧಾನದ ವಿಧಿ 25 ಮತ್ತು 26ರ ಅಡಿಯಲ್ಲಿ ಅತ್ಯಗತ್ಯ ಧಾರ್ಮಿಕ ಚಟುವಟಿಕೆಗಳ ಕಾಯ್ದೆ ವ್ಯಾಪ್ತಿಗೆ ಬಂದೂಕು ಹಕ್ಕನ್ನು ತರಬೇಕು. ಆ ಮೂಲಕ ಆಯುಧ ಕಾಯ್ದೆಯ ತಿದ್ದುಪಡಿಗಳ ಪ್ರಭಾವಕ್ಕೆ ಒಳಗಾಗದಂತೆ ಶಾಶ್ವತ ರಕ್ಷಣೆ ನೀಡಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಒತ್ತಾಯಿಸಿದೆ.

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಭಾರತೀಯ ಕಾನೂನು ಆಯೋಗದ ಅಧ್ಯಕ್ಷರಿಗೆ ಪತ್ರ ಬರೆದಿರುವ ಎನ್.ಯು. ನಾಚಪ್ಪ, ಭಾರತದ ಸಂವಿಧಾನದ ವಿಧಿ 25 ಮತ್ತು 26ರ ಅಡಿಯಲ್ಲಿ ಕೊಡವ ಧಾರ್ಮಿಕ ಸಂಸ್ಕಾರವಾದ ಬಂದೂಕಿಗೆ ಸಾಂವಿಧಾನಿಕ ರಕ್ಷಣೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಕೊಡವರ ಧಾರ್ಮಿಕ ಸಂಸ್ಕಾರವಾದ ಕೋವಿಗೆ ಸಾಂವಿಧಾನಿಕ ರಕ್ಷಣೆ ನೀಡಬೇಕು. ಬಂದೂಕು ಧರಿಸುವ ಮತ್ತು ಆರಾಧಿಸುವ ಹಕ್ಕನ್ನು ಅತ್ಯಗತ್ಯ ಧಾರ್ಮಿಕ ಚಟುವಟಿಕೆಗಳ ಕಾಯ್ದೆ ಮೂಲಕ ಅಥವಾ ಆಯುಧ ಕಾಯ್ದೆ, 1959ಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ಖಾಯಂ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಧಾನಿ ಮೋದಿಯವರಿಂದ ಅಭಿವೃದ್ಧಿ ರಾಷ್ಟ್ರಗಳ ಸಾಲಿನಲ್ಲಿ ಭಾರತ ಮುಂಚೂಣಿ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಸಂತಸ


ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘುಕೌಟಿಲ್ಯ ಮಾತನಾಡಿದರು.

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿಯವರು ತಮ್ಮ 12 ವರ್ಷಗಳ ಅಧಿಕಾರಾವಧಿಯಲ್ಲಿ ಅನೇಕ ಜನಪರ ಕಲ್ಯಾಣ ಕಾರ್ಯಕ್ರಮ ಜಾರಿಗೊಳಿಸುವುದರ ಮೂಲಕ ವಿಶ್ವದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ಮುಂಚೂಣಿಯಲ್ಲಿ ಕೊಂಡೊಯ್ದಿದ್ದಾರೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್. ರಘು ಕೌಟಿಲ್ಯ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 2014ರಲ್ಲಿ ಮೊದಲ ಬಾರಿ ಪ್ರಧಾನಿಯಾದ ಮೋದಿಯವರು, ಬ್ಯಾಂಕಿಂಗ್ ವ್ಯವಸ್ಥೆಯಿಂದ ವಂಚಿತರಾಗಿದ್ದ 2.12 ಕೋಟಿ ಜನರಿಗೆ ಜನ್‌ಧನ್ ಖಾತೆ, 4.12 ಕೋಟಿ ಜನರಿಗೆ ಸಾಮಾಜಿಕ ಸುರಕ್ಷತೆ ಯೋಜನೆ, 3.39 ಕೋಟಿ ಜನರಿಗೆ ಮುದ್ರಾ ಸಾಲ, 87.7 ಲಕ್ಷ ಮನೆಗಳಿಗೆ ಜಲಜೀವನ್ ಮಿಷನ್ ಯೋಜನೆ ಜಾರಿ, ನೇರ ಲಾಭ ವರ್ಗಾವಣೆ ವ್ಯವಸ್ಥೆ, ಜನ ಕಲ್ಯಾಣ ಯೋಜ ನೆಯಡಿ, 436 ಪ್ರೀಮಿಯಂನಲ್ಲಿ 2 ಲಕ್ಷ ಜೀವವಿಮೆ, 2.60 ಕೋಟಿ ಜನರಿಗೆ 2 ಲಕ್ಷ ಮೌಲ್ಯದ ಅಪಘಾತ ವಿಮೆ, 48.9 ಲಕ್ಷ ಅಟಲ್ ಪಿಂಚಣಿ, 6.14 ಲಕ್ಷ ಬೀದಿ ಬದಿ ವ್ಯಾಪಾರಿಗಳಿಗೆ 50 ಸಾವಿರದವರೆಗೆ ಸಾಲ ಸೌಲಭ್ಯ, 41.4 ಲಕ್ಷಉಚಿತ ಉಜ್ವಲ ಅನಿಲ ಯೋಜನೆ, ರಾಜ್ಯಾದ್ಯಂತ 1,610 ಜನೌಷಧ ಕೇಂದ್ರಗಳ ಸ್ಥಾಪನೆ, 8,191ಕಿ.ಮೀ. ರಾಜ್ಯ ಹೆದ್ದಾರಿಗಳ ವಿಸ್ತರಣೆ, ಉಡಾನ್ ಯೋಜನೆಯಲ್ಲಿ ರಾಜ್ಯದ 7 ಕಡೆ ಪ್ರಾದೇಶಿಕ ವಿಮಾನ ನಿಲ್ದಾಣಗಳು, 57 ಹೊಸ ವಾಯು ಮಾರ್ಗಗಳನ್ನು ಸ್ಥಾಪಿಸಿರುವುದು, ಬೆಂಗಳೂರು ಮೆಟ್ರೋ 220 ಕಿ.ಮೀ.ಗೆ ವಿಸ್ತರಣೆ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಸ್ವತಂತ್ರವಾಗಿಸಲು 370ನೇ ವಿಧಿ ರದ್ದುಗೊಳಿಸಿರುವುದು, 21 ಸಾವಿರ ಕೋಟಿಗೂ ಅಧಿಕ ರಕ್ಷಣಾ ಸಾಮಗ್ರಿಗಳ ರಫ್ತು, ಚಂದ್ರಯಾನ–3 ಭಾರತವನ್ನು ಬಾಹ್ಯಾಕಾಶದ ಸೂಪರ್ ಪವರ್ ಆಗಿ ಪ್ರಧಾನಿ ನಿಲ್ಲಿಸಿದ್ದಾರೆ ಎಂದು ತಿಳಿಸಿದರು.

ದೇಶದಲ್ಲಿ 65 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ಮಾಡಲಾಗದ ಅನೇಕ ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಮೋದಿ ಸರ್ಕಾರ ಕೇವಲ 12 ವರ್ಷದಲ್ಲಿ ಜಾರಿಗೊಳಿಸಿದೆ. ಪ್ರಧಾನಿ ನರೇಂದ್ರಮೋದಿ ದೇಶದಲ್ಲಿ ಚಾರಿತ್ರಿಕ ಸಾಧನೆ ಮಾಡಿ, ದೇಶವನ್ನು ಸ್ವಾವಲಂಬಿಯಾಗಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕ ಎಸ್. ಬಾಲರಾಜು, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ. ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾವಕ್ತಾರ ಮನೋಜ್ ಪಟೇಲ್ ಹಾಜರಿದ್ದರು.

ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ವಿಶ್ವಾಸ

ಮುಂಬರುವ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಗೆಲುವು ಸಾಧಿಸುತ್ತೇವೆ ಎಂದು ಅಭ್ಯರ್ಥಿ ಆರ್. ರಘು ಕೌಟಿಲ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಮಾತನಾಡಿ, ನಾನು ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಯಲ್ಲಿ ಸ್ಪರ್ಧೆ ಮಾಡಿ ಕೆಲವೇ ಮತಗಳ ಅಂತರದಿಂದ ಸೋಲು ಅನುಭವಿಸಿದ್ದೆ. ಆದರೆ, ಪಕ್ಷಕ್ಕಾಗಿ ನಾನು ದುಡಿದಿರುವುದನ್ನು ಮನಗಂಡು ರಾಜ್ಯ ಹಾಗೂ ಕೇಂದ್ರದ ವರಿಷ್ಠರು ನನಗೆ ಹಿಂದುವಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಿದ್ದಾರೆ. ಇದನ್ನು ಜವಾಬ್ದಾರಿಯಿಂದ ನಿಭಾಯಿಸುತ್ತಿದ್ದೇನೆ. ಪ್ರಸ್ತುತ ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸೇರಿದಂತೆ ರಾಜ್ಯ ಹಾಗೂ ಕೇಂದ್ರದ ವರಿಷ್ಠರು ವಿಧಾನ ಪರಿಷತ್ ಚುನಾವಣೆಯಲ್ಲಿ ನನ್ನನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದು, ನಾನು ಮತ್ತು ಮತ್ತೋರ್ವ ಅಭ್ಯರ್ಥಿ ಲಿಂಗರಾಜ್‌ಪಾಟೀಲ್ ಗೆಲುವು ಸಾಧಿಸುತ್ತೇವೆ ಎಂದು ತಿಳಿಸಿದರು.

ಮೈತ್ರಿಕೂಟದ ಅಭ್ಯರ್ಥಿಯಾಗಿ ಗೋವಿಂದರಾಜು ಕಣದಲ್ಲಿರುವ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮೈತ್ರಿಕೂಟ ಅಭ್ಯರ್ಥಿ ಗೋವಿಂದರಾಜು ಕಣದಲ್ಲಿದ್ದಾರೆ. ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಲಿದ್ದಾರೆ ಎಂದು ತಿಳಿಸಿದರು.

ಬಂಡೀಪುರದಲ್ಲಿ ಜೋಡಿ ಹುಲಿಗಳ ದರ್ಶನ: ಪ್ರವಾಸಿಗರಲ್ಲಿ ಸಂಭ್ರಮ



ಚಾಮರಾಜನಗರ, ಜೂ.13 – ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಜೋಡಿ ಹುಲಿಗಳು ಕಾಣಿಸಿಕೊಂಡಿದ್ದು, ಪ್ರವಾಸಿಗರಲ್ಲಿ ಸಂಭ್ರಮ ಮನೆಮಾಡಿದೆ.

ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಸಫಾರಿ ವಾಹನದಲ್ಲಿ ಸಂಚರಿಸುತ್ತಿದ್ದ ವೇಳೆ ಏಕಾಏಕಿ ಎರಡು ಹುಲಿಗಳು ಒಟ್ಟಿಗೆ ಕಾಣಿಸಿಕೊಂಡವು. ಅಪರೂಪದ ಈ ದೃಶ್ಯವನ್ನು ಕಂಡ ಪ್ರವಾಸಿಗರು ಪುಳಕಿತರಾಗಿ ಸಂತಸ ವ್ಯಕ್ತಪಡಿಸಿದರು.

ಹುಲಿಗಳು ಕೆಲಕಾಲ ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತಿದ್ದ ದೃಶ್ಯವನ್ನು ಪ್ರವಾಸಿಗರು ತಮ್ಮ ಮೊಬೈಲ್ ಮತ್ತು ಕ್ಯಾಮೆರಾಗಳಲ್ಲಿ ಸೆರೆಹಿಡಿದರು. ಜೋಡಿ ಹುಲಿಗಳ ಮನಮೋಹಕ ದರ್ಶನ ಸಫಾರಿಯ ಪ್ರಮುಖ ಆಕರ್ಷಣೆಯಾಗಿ ಪರಿಣಮಿಸಿತು.

ಬಂಡೀಪುರದಲ್ಲಿ ಇಂತಹ ಅಪರೂಪದ ವನ್ಯಜೀವಿ ದರ್ಶನಗಳು ಪ್ರವಾಸಿಗರನ್ನು ಸೆಳೆಯುತ್ತಿದ್ದು, ಅರಣ್ಯದ ನೈಸರ್ಗಿಕ ಸೌಂದರ್ಯ ಮತ್ತು ವನ್ಯಜೀವಿಗಳ ಸಮೃದ್ಧಿಯನ್ನು ಮತ್ತೊಮ್ಮೆ ಸಾಬೀತುಪಡಿಸಿವೆ. ಜೋಡಿ ಹುಲಿಗಳ ದರ್ಶನದಿಂದ ಸಫಾರಿಗೆ ತೆರಳಿದ್ದ ಪ್ರವಾಸಿಗರು ಫುಲ್ ಖುಷ್ ಆಗಿದ್ದು, ತಮ್ಮ ಅನುಭವವನ್ನು ಸಂತಸದಿಂದ ಹಂಚಿಕೊಂಡರು.

ಇಂದು ವಿದ್ಯುತ್ ವ್ಯತ್ಯಯ



ಬೇಗೂರು ಗ್ರಾಮದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈ ಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಭಾನುವಾರ ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ಬೇಗೂರು ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಹಿರಿಕಾಟಿ, ಮಂಚಹಳ್ಳಿ, ಶೆಟ್ಟಹಳ್ಳಿ, ದೇಶಿಪುರ, ಹೊರೆಯಾಲ, ಹಾಲಹಳ್ಳಿ, ಕಮರಹಳ್ಳಿ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಚಿಕ್ಕಾಟಿ, ತೊಂಡವಾಡಿ, ಅರೇಪುರ, ಕುಲಗಾಣ, ಮಲೆಯೂರು, ಹರವೆ, ಉಡಿಗಾಲ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗಲಿದೆ ಎಂದು ಚೆಸ್ಕಾಂ ತಿಳಿಸಿದೆ

ವಿದ್ಯುತ್ ನಿಗಮ ಖಾಸಗೀಕರಣದಿಂದ ಕೃಷಿ ಕ್ಷೇತ್ರ ಮೂಲೆಗುಂಪು

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಭಾಗ್ಯರಾಜ್ ಅತಂಕ


ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಆಗ್ರಹಿಸಿದರು.

ಚಾಮರಾಜನಗರ: ವಿದ್ಯುತ್ ಪ್ರಸರಣ ನಿಗಮಗಳನ್ನು ಖಾಸಗಿಯವರಿಗೆ ವಹಿಸಿದಲ್ಲಿ ಕೃಷಿ ಕ್ಷೇತ್ರ ಮೂಲೆ ಗುಂಪಾಗಲಿದ್ದು, ರಾಜ್ಯಸರ್ಕಾರ ವಿದ್ಯುತ್ ಪ್ರಸರಣ ನಿಗಮಗಳನ್ನು ಖಾಸಗೀಕರಣಕ್ಕೆ ಒಳಪಡಿಸುವ ನಿರ್ಧಾರವನ್ನು ಕೈಬಿಡಬೇಕು ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಖಾಸಗೀಕರಣದ ಹೊಡೆತದಿಂದ ಕೃಷಿ ಉತ್ಪನ್ನವು ಕುಂಠಿತವಾಗುವ ಸಾಧ್ಯತೆಗಳಿರುತ್ತವೆ. ನಿಗದಿತ ಸಮಯಕ್ಕೆ ವಿದ್ಯುತ್ ಪೂರೈಸುವುದು ಸರ್ಕಾರದ ಮೂಲ ಜವಾಬ್ದಾರಿಯಾಗಿದ್ದು, ಇದನ್ನು ಖಾಸಗಿ ಕಂಪನಿಗಳು ವಹಿಸಿಕೊಂಡಲ್ಲಿ ಇಲ್ಲ ಸಲ್ಲದ ನಿಯಮ ಮತ್ತು ಷರತ್ತುಗಳನ್ನು ಜನರ ಮೇಲೆ ಹೇರಲಾಗುತ್ತದೆ. ಇದರಿಂದ ಸಮರ್ಪಕವಾದ ವಿದ್ಯುತ್ ಪೂರೈಕೆಯಾಗದೆ ಕೃಷಿ ಚಟುವಟಿಕೆ ಮೂಲೆ ಗುಂಪಾಗುತ್ತದೆ. ರೈತರು ಕೃಷಿ ಬಿಟ್ಟು ಹೊರಬರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ಸ್ಮಾರ್ಟ್ ಮೀಟರ್ ಅಳವಡಿಕೆಯ ಒತ್ತಡಗಳಿಂದ ಕೃಷಿ ವಲಯಕ್ಕೆ ಹೊಡೆತ ಬೀಳುತ್ತದೆ. ಮುಂಬೈ ಮೂಲದ ಟಾಟಾ ಪವರ್ ಕಂಪನಿ ಕೆಇಆರ್‌ಸಿಗೆ 15 ಜಿಲ್ಲೆಗಳ ವಿದ್ಯುತ್ ವಿತರಣೆಗೆ ಅರ್ಜಿ ಸಲ್ಲಿಸಿದೆ. ಅದರಲ್ಲಿ ಚೆಸ್ಕಾಂನ ಮೂರು ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಹಾಸನ ಒಳಗೊಂಡಂತಹ ಭೌಗೋಳಿಕ ಸಂಪರ್ಕಿತ ಪ್ರದೇಶಗಳನ್ನು ಕೆಪಿಟಿಸಿಎಲ್ ವಿತರಣಾ ಪರವಾನಿಗೆ ಮಂಜೂರು ಮಾಡದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಹಾಸನ, ಚಾಮರಾಜನಗರ, ಬೆಳಗಾವಿ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳ ವಿತರಣೆ ಪರವಾನಿಗಿಯನ್ನು ಕೇಳುತ್ತಿದೆ. ಈ ವಿದ್ಯುತ್ ಪ್ರಸರಣ ನಿಗಮದ ಆಸ್ತಿಯನ್ನು ಸಾರ್ವಜನಿಕರ ಹಣದಿಂದ ನಿರ್ಮಾಣವಾಗಿದ್ದು, ರೈತರು ಭೂಮಿಯನ್ನು ಕಳೆದುಕೊಂಡಿದ್ದಾರೆ. ಸಾವಿರಾರು ನೌಕರರು ಸೇವೆ ಸಲ್ಲಿಸಿ ಪ್ರಾಣ ಕಳೆದುಕೊಂಡಿದ್ದಾರೆ. ಆದ್ದರಿಂದ ಯಾವುದೇ ಕಾರಣಕ್ಕೂ ಸರ್ಕಾರ ವಿದ್ಯುತ್ ಖಾಸಗೀಕರಣದಂತಹ ಅವೈಜ್ಞಾನಿಕ ಯೋಜನೆಯನ್ನು ಜಾರಿಗೊಳಿಸಬಾರದು. ಸರ್ಕಾರವೇ ಎಂದಿನಂತೆ ಇಂಧನ ಇಲಾಖೆಯ ನಿರ್ವಹಣೆ ಮಾಡಬೇಕು ಎಂದರು.

ಉದ್ದೇಶಿತ ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡಬೇಕು, ರಸಗೊಬ್ಬರ ಖರೀದಿಗೆ ಸರ್ಕಾರ ಜಾರಿಗೊಳಿಸಿರುವ ಎಫ್‌ಐಡಿ ನಿಯಮ ವಾಪಸ್ ಪಡೆದು, ಎಂದಿನಂತೆ ಎಲ್ಲಾ ರೀತಿಯ ರಸಗೊಬ್ಬರಗಳನ್ನು ರೈತರಿಗೆ ವಿತರಣೆ ಮಾಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ರಾಜ್ಯ ಸಂಘಟನಾ ಕಾರ್ಯದರ್ಶಿ ಪ್ರಕಾಶ್‌ಗಾಂಧಿ, ಜಿಲ್ಲಾ ಕಾರ್ಯದರ್ಶಿ ಮಲೆಯೂರು ಮಹೇಂದ್ರ, ಅಂಗಡಿ ಸತೀಶ್, ಸಂಚಾಲಕ ಹೊನ್ನೇಗೌಡನಹಳ್ಳಿ ಮಹೇಶ್, ಗೌರವಾಧ್ಯಕ್ಷ ಶ್ಯಾನಾಡ್ರಳ್ಳಿ ನಾಗರಾಜಪ್ಪ ಹಾಜರಿದ್ದರು.

ಚಾಮುಲ್ ರೈತ ಕಲ್ಯಾಣ ಟ್ರಸ್ಟ್‌ನಿಂದ ಪರಿಹಾರದ ಚೆಕ್ ವಿತರಣೆ

ಗುಂಡ್ಲುಪೇಟೆ, ಜೂ.13– ಪಟ್ಟಣದಲ್ಲಿರುವ ಚಾಮುಲ್ ಉಪಕಚೇರಿಯಲ್ಲಿ ಚಾಮರಾಜನಗರ ಸಹಕಾರಿ ಹಾಲು ಒಕ್ಕೂಟ ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ನಿಧನರಾಗಿರುವ 38 ಫಲಾನುಭವಿಗಳಿಗೆ ತಲಾ 15 ಸಾವಿರದಂತೆ ಒಟ್ಟು 570000 ರೂಗಳ ಚೆಕ್ಕುಗಳನ್ನು ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕರಾದ ಹೆಚ್.ಎಸ್.ನಂಜುಂಡ ಪ್ರಸಾದ್, ಎಂಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕರಾದ ಎಂ.ಪಿ ಸುನಿಲ್ ಅವರು ವಿತರಿಸಿದರು.

ಹೆಚ್.ಎಸ್.ನಂಜುಂಡ ಪ್ರಸಾದ್ ಅವರು ಮಾತನಾಡುತ್ತಾ ಮರಣ ಹೊಂದಿದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳ ವಾರಸುದಾರರಿಗೆ ಒಕ್ಕೂಟದ ವತಿಯಿಂದ ಪರಿಹಾರ ನೀಡುತ್ತಿದ್ದು ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಹಾಗೂ 58 ವರ್ಷ ಒಳಪಟ್ಟು ಸದಸ್ಯರಿಗೆ ಸಂಘಗಳಲ್ಲಿ 1 ಲಕ್ಷದ ವರೆಗೆ ವಿಮಾ ಸೌಲಭ್ಯಗಳು ಲಭ್ಯವಿದ್ದು ಅದರ ಸದುಪಯೋಗ ಪಡೆಯುವಂತೆ ಹಾಗೂ ರಾಸುಗಳಿಗೆ ತುರ್ತು ಚಿಕಿತ್ಸೆಗೆ ಪ್ರತ್ಯೇಕ ವ್ಯವಸ್ಥೆ ಇರುವ ಬಗ್ಗೆ ಹಾಗೂ ಅದನ್ನು ಸದುಪಡಿಸಿಕೊಳ್ಳುವಂತೆ ತಿಳಿಸಿದರು.

ಈ ಎಲ್ಲಾ ಸೌಲಭ್ಯಗಳು ಒಕ್ಕೂಟದಿಂದ ಹಾಲು ಉತ್ಪಾದಕರ ಸಂಘಗಳ ಮೂಲಕ ಸೌಲಭ್ಯಗಳನ್ನು ಉತ್ಪಾದಕರಿಗೆ ನೀಡುತ್ತಿದ್ದು ಯಾವುದೇ ಖಾಸಗಿ ಡೈರಿಗಳಲ್ಲಿ ದೊರೆಯುವುದಿಲ್ಲ ಎಂದು ತಿಳಿಸಿದರು.



ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
14-06-2026
ಪುಟ
9

ವೃದ್ಧರ ರೋದನೆ





ನಗರಗಳ ಪಾರ್ಕು, ಚಹಾ ಅಂಗಡಿ, ಬಸ್ ಶೆಲ್ಟರ್‌ಗಳಂತಹ ಸ್ಥಳಗಳಲ್ಲಿ ದಿನದ ಹೆಚ್ಚಿನ ಸಮಯವನ್ನು ವಿಶ್ರಾಂತ ಜೀವನ ನಡೆಸುತ್ತಿರುವ ಹಿರಿಯ ನಾಗರಿಕರು ಕಳೆಯುತ್ತಿರುತ್ತಾರೆ, ಮನೆಯಲ್ಲಿ ಕಾಣಲಾರದ ನೆಮ್ಮದಿಯನ್ನು ಗೆಳೆಯರೊಟ್ಟಿಗೆ ಹರಟುತ್ತಾ ಇಲ್ಲಿ ಕಂಡುಕೊಳ್ಳುತ್ತಾರೆ. ಸಮಯವಾದ ಬಳಿಕ ಇಷ್ಟವಿಲ್ಲದೆ ಬಾಡಿದ ಮುಖದೊಂದಿಗೆ ಮನೆಯತ್ತಾ ಭಾರವಾದ ಹೆಜ್ಜೆಗಳನ್ನಿಡುತ್ತಾ ಹೊರಡುತ್ತಾರೆ. ಕೆಲವು ವರ್ಷಗಳಿಂದ ಸಾರ್ವಜನಿಕವಾಗಿ ವೃದ್ದರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಭಾರತದಲ್ಲಿ ಆರೋಗ್ಯ ಸೌಲಭ್ಯ ಮತ್ತು ಜೀವಿತಾವಧಿಯ ಏರಿಕೆಯಿಂದಾಗಿ ಹಿರಿಯ ನಾಗರಿಕರ ಸಂಖ್ಯೆಯು ವೃದ್ಧಿಸುತ್ತಿದೆ.

ಜನಸಂಖ್ಯೆಯಲ್ಲಿ ಅರವತ್ತು ವರ್ಷ ಮತ್ತು ಅದಕ್ಕಿಂತ ಮೇಲಿನ ವಯಸ್ಸಿನವರು ಶೇಕಡಾ 11ರಿಂದ 12ರಷ್ಟು ಇದ್ದಾರೆ, ಸುಮಾರು 17.30 ಕೋಟಿಗೂ ಹೆಚ್ಚು ಹಿರಿಯ ನಾಗರೀಕರಿದ್ದಾರೆ. ಭವಿಷ್ಯದಲ್ಲಿ ಜನನ ದರ(Fertility Rate) ಕಡಿಮೆ ಆಗುತ್ತಿರುವುದರಿಂದ ಹಿರಿಯರ ಸಂಖ್ಯೆ ಹೆಚ್ಚಲಿದ್ದು, ಯುವಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲಿದೆ. ಮುಂದಿನ ಹತ್ತು ವರ್ಷಗಳಲ್ಲಿ ಶೇಕಡಾ 15ರಷ್ಟು ಏರಿಕೆ ಆಗಲಿದ್ದು, ಸುಮಾರು 23 ಕೋಟಿಗೆ ತಲುಪಲಿದೆ. ದುಡಿಯುವ ಕೈಗಳು ಕಡಿಮೆ ಆಗುತ್ತವೆ, ಸ್ವಾಭಾವಿಕ ಬುದ್ಧಿಮತ್ತೆ (Artificial Intelligence) ಪ್ರಚಲಿತ ಆಗುವುದರಿಂದ ಬಹುಶಃ ಕೆಲಸವೂ ಕಡಿಮೆ ಆಗುವ ನಿರೀಕ್ಷೆ ಇದೆ.

ವೃದ್ದರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿದೆ, ಪ್ರಶ್ನೆ ಅದಲ್ಲ, ಇವರೆಲ್ಲ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆಯೇ?, ಮನೆಯವರು ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೇ?, ಎಂಬುದು ಬಹುದೊಡ್ಡ ಪ್ರಶ್ನೆ ಮತ್ತು ಸಮಸ್ಯೆ. ಮನೆಯಲ್ಲಿ ಇರಬೇಕಾಗಿರುವ ಹಿರಿಯರು ಪಾರ್ಕು, ಹೊಟೇಲ್ ಮತ್ತು ಬಸ್ ಶೆಲ್ಟರ್‌ಗಳಲ್ಲಿ, ಕೆಲವರು ತುತ್ತು ಅನ್ನ ಮತ್ತು ಔಷಧಕ್ಕಾಗಿ ದೇಹ ಸಹಕರಿಸದಿದ್ದರು ಇನ್ನೂ ದುಡಿಯುತ್ತಿದ್ದಾರೆ. ಸರ್ಕಾರಿ ನೌಕರಿಯಲ್ಲಿದ್ದವರು ಹಾಗೂ ತಮ್ಮ ಹೆಸರಿನಲ್ಲಿ ಆಸ್ತಿ ಇದ್ದವರು ತಕ್ಕಮಟ್ಟಿಗೆ ಪರವಾಗಿಲ್ಲ, ಅವರು ಕೂಡ ನೆಮ್ಮದಿಯಿಂದ ಇದ್ದಾರೆಂದು ಹೇಳಲಾಗದು, ಒಂದಿಲ್ಲೊಂದು ಕೌಟಂಬಿಕ ಸಮಸ್ಯೆಯಿಂದ ಬಳಲುತ್ತಿರುತ್ತಾರೆ.

ಇವತ್ತಿನ ಟ್ರೆಂಡ್ ವಯಸ್ಸಾದಂತೆ ಹೆತ್ತವರನ್ನು ಹೊರಹಾಕುವುದು ಇಲ್ಲವೇ ಬೇರೆ ಮನೆ ಮಾಡಿ ಇರಿಸುವುದು. ಎರಡು ಮೂರು ಮಕ್ಕಳಿರುವ ಪೋಷಕರನ್ನು ಮಕ್ಕಳು ಕಾಲ್ಚೆಂಡಿನೋಪಾದಿಯಲ್ಲಿ ಅವರ ಮನೆಯಿಂದ ಇವರ ಮನೆಗೆ, ಇವರ ಮನೆಯಿಂದ ಅವರ ಮನೆಗೆ ಚೆಂಡಾಡಿಸಿಬಿಡುತ್ತಾರೆ. ವೃದ್ಧ ದಂಪತಿಗಳಲ್ಲಿ ಒಬ್ಬರು ಮರಣಹೊಂದಿ ಒಬ್ಬಂಟಿಯಾಗಿ ಜೀವನ ನಡೆಸುವುದೆಂದರೆ ಅದು ನರಕಲೋಕವನ್ನು ಇಲ್ಲೇ ಕಾಣಿಸಿಬಿಡುತ್ತದೆ. ಹೆತ್ತ ಕರುಳನ್ನು ಬೀದಿಗೆ ನೂಕುವ ಮೊದಲು, ಅದೇ ಕೈಗಳು ನಮ್ಮನ್ನು ಸಾಕಿ, ಬೇಕಿದ್ದೆಲ್ಲವನ್ನು ಕೊಡಿಸಿ ಎತ್ತಾಡಿಸಿ ಮುದ್ದಿಸಿ ಜೀವನ ರೂಪಿಸಿಕೊಟ್ಟದ್ದನ್ನು ಮರೆಯಬಾರದಲ್ಲವೇ?.

ನಾನೂ ಹಿರಿಯನಾಗಿರುವುದರಿಂದ ವೃದ್ದರ ಬಳಗ ಜಾಸ್ತಿ, ಅವರುಗಳ ನೋವು ನನ್ನದೇ ನೋವಾಗಿದೆ, ನಿತ್ಯವೂ ಯಾರಾದರೊಬ್ಬರು ತಮ್ಮ ಅಳಲನ್ನು ನನ್ನೊಂದಿಗೆ ಹೇಳಿಕೊಳ್ಳುತ್ತಾರೆ. ಸಮಾಜದಲ್ಲಿ ಅತ್ಯಂತ ಕಳವಳಕಾರಿ ಹಾಗೂ ನೋವಿನ ಸಂಗತಿ ಇವರಿಂದ ಏನೂ ಪ್ರಯೋಜನ ಇಲ್ಲ ಎಂಬುದು ತಿಳಿಯುತ್ತಿದ್ದಂತೆ ಮನೆಯಿಂದ ಹೊರಗಟ್ಟುಬಿಡುತ್ತಾರೆ. ಸಕಾರಣವಲ್ಲದ ಕಾರಣವನ್ನು ಕೊಟ್ಟು ಒಂದಿಲ್ಲೊಂದು ಕ್ಯಾತೆ ತೆಗೆದು ಜಗಳವಾಡಿ ಕರುಣೆ ತೋರದೆ ಓಡಿಸಿಬಿಡುತ್ತಾರೆ. ಮಗ ನಮ್ಮವನಾದರೂ ಸೊಸೆ ನಮ್ಮವಳಲ್ಲ ಎನ್ನುವುದನ್ನು ಸೊಸೆಯಾದವಳು ಸಾಬೀತು ಪಡಿಸುತ್ತಾಳೆ. ಒಳ್ಳೆಯವರು ಇಲ್ಲವೇ ಇಲ್ಲ ಎನ್ನಲಾಗದು. ಮೈಸೂರಿನ ಸಿದ್ದಾರ್ಥ ಬಡಾವಣೆಯ ಮನೆಗೆ ಚಿರತೆ ಒಂದು ನುಗ್ಗಿದಾಗ, ಚಿರತೆಯ ಬಾಯಿಂದ ಹಾಸಿಗೆಯಲ್ಲಿ ಮಲಗಿದ್ದ ವೃದ್ಧ ಅತ್ತೆಯನ್ನು ಧೈರ್ಯದಿಂದ ಸೊಸೆ ಸುಜಾತರವರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಕಾಪಾಡಿದ್ದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ, ಅಲ್ಲಲ್ಲಿ ಮಾನವೀಯತೆ ಗುಣ ಇದೆಯಾದರೂ ಅವ ಮಾನವೀಯ ಗುಣಗಳೇ ಹೆಚ್ಚು ಮೆರೆಯುತ್ತಿವೆ.

ನಾನು, ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಎಂಬ ಸ್ವಾರ್ಥ ಸಂಕುಚಿತ ಮನೋಭಾವದ ಕಾರಣ ಹೆತ್ತವರು ಹೊರೆಯಾಗಿ ಕಾಣುತ್ತಾರೆ. ದೂರ ಮಾಡಲು ನೂರಾರು ನೆಪಗಳನ್ನು ಹುಡುಕುತ್ತಾರೆ, ಮೊಸರಲ್ಲಿ ಕಲ್ಲು ಎನ್ನುವಂತೆ ಪ್ರತಿಯೊಂದರಲ್ಲೂ ತಪ್ಪುಗಳನ್ನು ಎತ್ತಿ ನಿಂದಿಸುತ್ತಾ ಮಾನಸಿಕವಾಗಿ ಕುಗ್ಗಿಸಿ ಬದುಕೇ ಬೇಡವೆನ್ನುವಂತೆ ಮಾಡಿ ತಂದೆತಾಯಿಯರನ್ನು ಕುಗ್ಗಿಸಿಬಿಡುತ್ತಾರೆ.

ಮುಪ್ಪಿನಲ್ಲಿ ಆರೋಗ್ಯ ಸಮಸ್ಯೆಗಳು ಕಾಡುತ್ತವೆ, ಮಕ್ಕಳು ಔಷಧೋಪಚಾರಗಳಿಗೆ ಖರ್ಚು ಮಾಡಲು ಒಪ್ಪುವುದಿಲ್ಲ, ಹಳೆಯ ತಲೆಮಾರು ಮತ್ತು ಹೊಸ ತಲೆಮಾರಿನ ಅಂತರದಿಂದ ನಡುವೆ ಸಾಮರಸ್ಯ ಇರದೆ ವೃದ್ದರನ್ನು ಕಡೆಗಣಿಸುತ್ತಾರೆ. ಯಾಂತ್ರಿಕ ಜೀವನದ ಜಂಜಾಟದಲ್ಲಿ ಹಿರಿಯರೊಂದಿಗೆ ಮಾತನಾಡುವುದು, ಅವರ ಯೋಗಕ್ಷೇಮ ವಿಚಾರಿಸಲು ಮಕ್ಕಳಿಗೆ ಸಮಯ ಇರುವುದಿಲ್ಲ. ಆಸ್ತಿಪಾಸ್ತಿ ಏನೂ ಇಲ್ಲದಿದ್ದರೆ ಅದೊಂದು ರೀತಿಯಲ್ಲಿ ಒಳ್ಳೆಯದೇ, ಆದರೆ ಆಸ್ತಿಪಾಸ್ತಿಗಳು ಇದ್ದು ಒಂದಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಕಿತ್ತಾಟ. ತಮ್ಮ ಹೆಸರಿಗೆ ಮಕ್ಕಳು ಬರೆಸಿಕೊಂಡ ತಕ್ಷಣವೇ ಕೃತಜ್ಞತೆ ಇಲ್ಲದೆ ಬೀದಿಗೆ ತಳ್ಳಿಬಿಡುತ್ತಾರೆ.

ನಿತ್ಯವೂ ಅನುಭವಿಸುವ ನೋವಿನಿಂದ ಮುಕ್ತರಾಗಲು, ಯಾವಾಗಲೂ ಸಾವನ್ನು ಬಯಸುತ್ತಾರೆ. ಮನೆಯಲ್ಲಿ ಇದ್ದಾಗ ಒಂದು ರೀತಿಯ ನೋವು, ಮೊಮ್ಮಕ್ಕಳ ಒಡನಾಟದಲ್ಲಿ ಸ್ವಲ್ಪವಾದರೂ ಕಡಿಮೆ ಮಾಡಿಕೊಳ್ಳುತ್ತಾರೆ. ಮನೆಯಿಂದ ಹೊರಹಾಕಲ್ಪಟ್ಟಾಗ ಅನುಭವಿಸುವ ಮಾನಸಿಕ ಯಾತನೆಯನ್ನು ಪದಗಳಲ್ಲಿ ಇಳಿಸಲಾಗದು. ಖಿನ್ನತೆ, ಒಂಟಿತನ ಮತ್ತು ಅಸಹಾಯಕತೆಯಿಂದ ನರಳುತ್ತಾರೆ. ಕಡೆಗಾಲದಲ್ಲಿ ತುತ್ತು ಅನ್ನಕ್ಕೆ ಹಾಗೂ ಮೂಲಭೂತ ಅವಶ್ಯಕತೆಗಳಿಗೆ ಪರದಾಡುವ ಸ್ಥಿತಿ ಒದಗಿ ಬಂದಾಗ ಸಂಪಾದಿಸಿದ್ದ ಆತ್ಮಗೌರವ ಮಣ್ಣುಪಾಲಾಗಿರುತ್ತದೆ.

ಹಿರಿಯ ನಾಗರಿಕರಿಗೆ ಕಾನೂನಿನ ರಕ್ಷಣೆ ಇದೆ, ಹೆತ್ತವರನ್ನು ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳದ್ದೇ ಆಗಿರುತ್ತದೆ, ನೆಪಗಳನ್ನೊಡ್ಡಿ ಅದರಿಂದ ನುಣಿಚಿಕೊಳ್ಳಲಾಗದು. ನಿರ್ಲಕ್ಷಿಸುವ ಮಕ್ಕಳಿಗೆ ಶಿಕ್ಷೆ ಹಾಗೂ ದಂಡ ವಿಧಿಸುವುದಕ್ಕೆ ಕಾನೂನಿನಲ್ಲಿ ನಿಯಮವಿದೆ. ಹೆತ್ತವರು ಎಷ್ಟೇ ಕಷ್ಟದಲ್ಲಿದ್ದರೂ ಮಕ್ಕಳ ವಿರುದ್ಧ ಕೋರ್ಟ್ ಹೋಗಲು ಇಚ್ಛಿಸುವುದಿಲ್ಲ. ತಂದೆತಾಯಿಯರನ್ನು ನೋಡಿಕೊಳ್ಳದಿದ್ದರೆ ಮಕ್ಕಳಿಗೆ ನೋಂದಣಿ ಮಾಡಿಕೊಟ್ಟ ಆಸ್ತಿಯನ್ನು ಮತ್ತೇ ವಾಪಸ್ಸು ಪಡೆಯುವ ಅವಕಾಶವನ್ನು ಕಾನೂನು ಕಲ್ಪಿಸಿಕೊಟ್ಟಿದೆ.

ಇಂದಿನ ಯುವಪೀಳಿಗೆಯ ಮುದ್ದು ಮಕ್ಕಳೇ, ಪೋಷಕರನ್ನು ಹೊರದಬ್ಬುವ ಮಹನೀಯರೇ ಹೆತ್ತವರಿಗೆ ನೀವು ಕೊಡುವ ಪ್ರೀತಿ ಮತ್ತು ಗೌರವವನ್ನು ನಿಮ್ಮ ಮಕ್ಕಳು ನೋಡಿ ಬೆಳೆಯುತ್ತಿರುತ್ತಾರೆ, ದೊಡ್ಡವರಾದ ಮೇಲೆ ಪುನರಾವರ್ತನೆಗೆ ಕೊಡುವ ಸಂದೇಶವಾಗಿರುತ್ತದೆ. ಬೇವು ಬಿತ್ತಿ ಮಾವು ಬೆಳೆಯಲಾಗುತ್ತದೆಯೇ?.

ಓದು, ನೌಕರಿ, ಆಸ್ತಿ, ಹಣ ಇವುಗಳಲ್ಲೇ ಜೀವನದ ಹೆಚ್ಚಿನ ಸಮಯ ಕಳೆದುಬಿಡುತ್ತೇವೆ, ನನ್ನ ಮಗ ವಿದ್ಯಾವಂತನಾಗಬೇಕು, ರ್‍ಯಾಂಕ್ ಪಡೆಯಬೇಕು, ಇಂಗ್ಲಿಷ್ ಕಾನ್ವೆಂಟ್‌ನಲ್ಲಿ ಓದಬೇಕು, ಲಕ್ಷಲಕ್ಷ ಸಂಪಾದಿಸಬೇಕು ಎಂಬ ಆಸೆಗೆ ಬಿದ್ದು ವಿನಯವಂತನಾಗಿ ಬೆಳೆಸುವುದಿಲ್ಲ. ಮಕ್ಕಳಿಗೆ ಸಂಸ್ಕಾರ ನೀಡುವಲ್ಲಿ ವಿಫಲರಾಗಿ ಇಳಿವಯಸ್ಸಿನಲ್ಲಿ ಅದರ ಫಲವನ್ನು ಅನುಭವಿಸುತ್ತೇವೆ, ಪರಿಣಾಮವೇ ನಂದಗೋಕುಲಗಳಾಗಿದ್ದ ಮನೆಗಳು ಮುಪ್ಪಿನಲ್ಲಿ ನರಕಕೇಂದ್ರಗಳಾಗಿ ಬದಲಾಗಿರುತ್ತವೆ.

> ನಾನು, ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಎಂಬ ಸ್ವಾರ್ಥ ಸಂಕುಚಿತ ಮನೋಭಾವದ ಕಾರಣ ಹೆತ್ತವರು ಹೊರೆಯಾಗಿ ಕಾಣುತ್ತಾರೆ. ದೂರ ಮಾಡಲು ನೂರಾರು ನೆಪಗಳನ್ನು ಹುಡುಕುತ್ತಾರೆ, ಮೊಸರಲ್ಲಿ ಕಲ್ಲು ಎನ್ನುವಂತೆ ಪ್ರತಿಯೊಂದರಲ್ಲೂ ತಪ್ಪುಗಳನ್ನು ಎತ್ತಿ ನಿಂದಿಸುತ್ತಾ ಮಾನಸಿಕವಾಗಿ ಕುಗ್ಗಿಸಿ ಬದುಕೇ ಬೇಡವೆನ್ನುವಂತೆ ಮಾಡಿ ತಂದೆ-ತಾಯಿಯರನ್ನು ಕುಗ್ಗಿಸಿಬಿಡುತ್ತಾರೆ.

ಸಾಮಾಜಿಕ ಪಿಡುಗನ್ನು ನಿರ್ಮೂಲನಗೊಳಿಸಲು ಆಂದೋಲನ ಆಗಬೇಕು. ವಯಸ್ಸಾದವರೆಂದರೆ ಅವರು ಮಕ್ಕಳಿದ್ದಂತೆ, ಅವರ ಮಾತುಗಳಿಗೆ, ಅಭಿಪ್ರಾಯಗಳಿಗೆ, ಮರೆಗುಳಿಗೆ, ಹಠಕ್ಕೆ ಮನ್ನಣೆ ಇರಲಿ. ಮಕ್ಕಳು ಏನೇ ಮಾಡಲಿ ಸಹಿಸಿಕೊಳ್ಳುವುದಿಲ್ಲವೇ?.

ನಿಜ ವೃದ್ದರಿಂದ ದೇಶದ ಆರ್ಥಿಕತೆಗೆ ಹೊಡೆತ ಬೀಳಬಹುದು, ಅವರು ಇಲ್ಲಿವರೆಗೆ ದುಡಿದಿದ್ದರಿಂದಲೇ ಅಲ್ಲವೇ ದೇಶ ಬೆಳೆದಿದ್ದು, ಮಕ್ಕಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಶ್ರಮಿಸಿದ್ದು ಇವರೇ ಅಲ್ಲವೇ?. ವಾಸ್ತವದ ವಿಷಯವನ್ನು ನಿಮ್ಮಲ್ಲಿ ಹಂಚಿಕೊಳ್ಳುತ್ತೇನೆ, ವಯಸ್ಸು 90 ಮೀರಿದರೂ ರಾಜಕೀಯದಲ್ಲಿ ಹೊರಹಾಕುವುದಿಲ್ಲ, ಎಲ್ಲಾ ಹುದ್ದೆಗಳಿಗೂ ಅವನು ಎಲಿಜಬಲ್, ಆದರೆ ವಯಸ್ಸು 60 ದಾಟಿದರೆ ಮನೆಯಲ್ಲಿ ಯಾವುದಕ್ಕೂ ಬಾರದ ವೇಸ್ಟ್ ಬಾಡಿ!, ಖಂಡಿತ ಈ ವಾಕ್ಯ ಬರೆಯುವುದಕ್ಕೆ ನನಗೆ ನೋವಾಗುತ್ತದೆ.

ಹೆತ್ತವರನ್ನು ದೇವರೆಂದು ಕಾಣುವ ನಮ್ಮ ಸಂಸ್ಕೃತಿಯಲ್ಲಿ ಹೆತ್ತವರು ಕಣ್ಣೀರು ಹಾಕುತ್ತಾ ವೃದ್ದಾಶ್ರಮಕ್ಕೆ ಸೇರಿಕೊಂಡರೆ ಒಳ್ಳೆಯದಾಗದು. ಅವರು ಬಯಸುವುದು ಹಣ, ಆಸ್ತಿಅಂತಸ್ತನ್ನಲ್ಲ ನಮ್ಮ ಪ್ರೀತಿ ಮತ್ತು ಆಸರೆಯನ್ನು, ದುಡಿಯುವ ವಯಸ್ಸಿನಲ್ಲಿರುವ ನೀವು ಕೂಡ ಮುಂದೆ ವೃದ್ದಾವಸ್ಥೆಯಲ್ಲಿ ಅದನ್ನೇ ಬಯಸುವುದು.



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ವಾರಭವಿಷ್ಯ

14.06.2026 ರಿಂದ 20.06.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಮಿಥುನ, ಚಂದ್ರ- ವೃಷಭ, ಮಿಥುನ, ಕಟಕ, ಸಿಂಹ, ಕುಜ-ಮೇಷ, ವೃಷಭ, ಬುಧ-ಮಿಥುನ, ಗುರು-ಕಟಕ, ಶುಕ್ರ-ಕಟಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದಾರಂಭಕ್ಕೆ ಚಂದ್ರಗ್ರಹ ಸಂಚಾರ ಶುಭವಿರುವ ಕಾರಣ ನಿಮ್ಮ ಮನೋಧೈರ್ಯ ಉತ್ತಮವಾಗಿರುತ್ತದೆ. ನಿಮ್ಮ ಮನೋವಾಂಛಿತ ಕೆಲಸಗಳು ಸುಖಕರವಾಗಿ ಪೂರ್ಣಗೊಳ್ಳುವುದು. ಪ್ರೇಮ ಪ್ರಸಂಗಗಳು ಆಶಾಭರಿತವಾಗಿರುತ್ತದೆ. ಕ್ಷೀರ ಜನಿತ ಹಾಗೂ ಐಸ್‌ಕ್ರೀಂ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ನೂತನ ಬೆಲೆ ಬಾಳುವ ವಸ್ತು ಕೊಳ್ಳುವುದರೊಂದಿಗೆ ವಾರಕ್ಕೆ ವಿದಾಯ.

ಶ್ರೀ ಕಾರ್ತಿಕೇಯ ದರ್ಶನ. ಶುಭ ಸಂಖ್ಯೆ-2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೂ)

ಗುರು ಗ್ರಹವು ಉಚ್ಚ ರಾಶಿಗೆ ಬರುವುದರಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು. ಬಹು ದಿನದ ಬಯಕೆ ಸಾಕಾರವಾಗುವುದು. ಹತ್ತಿ, ರೇಷ್ಮೆ ಕೃಷಿಕರಿಗೆ ಹಾಗೂ ವ್ಯಾಪಾರಿಗಳಿಗೆ ಕೈತುಂಬಾ ಹಣ ಸಂಪಾದನೆ ಆಗುವುದು. ಲಲನೆಯರ ಸಹವಾಸದಿಂದ ಮೈ-ಮನಗಳಲ್ಲಿ ಮಿಂಚಿನ ಸಂಚಾರವಾಗುವುದು. ಮಾತೃಶ್ರೀಯವರಿಂದ ಮಾರ್ಗದರ್ಶನ ದೊರೆತು ಉನ್ನತವಾದುದನ್ನು ಸಾಧಿಸುವಿರಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಕೈಗೊಂಡ ಕೆಲಸ ಕಾರ್ಯಗಳು ಯಶಸ್ಸಿನತ್ತ ಸಾಗಲು ಈಗ ತಾನೇ ಗುರುಗ್ರಹವು ತನ್ನ ಉಚ್ಚ ರಾಶಿಗೆ ಪ್ರವೇಶ ಮಾಡಿರುವುದೇ ಕಾರಣವಾಗಿದೆ. ಹಣಕಾಸು ಪರಿಸ್ಥಿತಿ ಕ್ರಮೇಣ ಸುಧಾರಿಸುತ್ತಾ ಹೋಗುವುದು. ಹಳೆಯ ಬಾಕಿಗಳು ವಸೂಲಿ ಆಗಬಹುದು. ಹೊಸ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ನಿಜ ಜ್ಯೇಷ್ಠದ ಪ್ರಭಾವದಿಂದ ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು.

ಶ್ರೀ ಕಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ-4

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರ ಪೂರ್ತಿ ನಿಮ್ಮ ರಾಶ್ಯಾಧಿಪತಿ ಚಂದ್ರನ ಸಂಚಾರ ಅತ್ಯಂತ ಶುಭಪ್ರದವಾಗಿದೆ. ನಿಮ್ಮ ಬಹಳ ದಿನಗಳ ಮನೋವಾಂಛಿತ ಆಸೆಗಳು ಕೈಗೂಡುವುದು. ನೂತನ ವಾಹನ ಹೊಂದುವ ಬಯಕೆ ನನಸಾಗುವುದು. ಪ್ರೀತಿ-ಪ್ರಣಯ ವಿಚಾರ ಧನಾತ್ಮಕ ಫಲ ನೀಡುವ ಕಾರಣ ಮನೋಹರ್ಷ. ರಜತ ಪದಾರ್ಥವನ್ನು ಖರೀದಿಸುವುದರಿಂದ ಶ್ರೀಮತಿಗೆ ಸಂತೋಷ. ಲಘು ಪ್ರವಾಸಗಳು ಉಂಟಾಗಲಿದೆ.

ಶ್ರೀ ಶ್ರೀದೇವಿಗೆ ಮಲ್ಲಿಗೆ ಹೂವು ಸಮರ್ಪಣೆ. ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಈ ವಾರ ಸಾರ್ಥಕ ಕಾರ್ಯಗಳ ಆಚರಣೆಯಿಂದ ಬದುಕು ನೆಮ್ಮದಿ ಅನ್ನಿಸುವುದು. ಮನೋಕಾರಕ ಚಂದ್ರನ ಪ್ರಭಾವದಿಂದ ವಿದ್ಯಾರ್ಥಿಗಳ ಬುದ್ಧಿಮಟ್ಟ ಚುರುಕಾಗಿರುವುದು. ನಿವೇಶನ, ಮನೆ ಖರೀದಿಗೆ ಬ್ಯಾಂಕ್ ಸಾಲಕ್ಕೆ ಪ್ರಯತ್ನ ಮುಂದುವರೆಯಲಿ. ಹಲವರಿಗೆ ವಿದೇಶ ಪ್ರಯಾಣ ಯೋಗವಿದೆ. ಡೈರಿ ಉತ್ಪನ್ನ ಸಮೃದ್ಧಿಯಾಗುವುದು. ಕೃಷಿಕರಿಗೆ ಕೈತುಂಬಾ ಕೆಲಸ.

ಶ್ರೀ ಗೋವು ಸೇವೆ. ಶುಭ ಸಂಖ್ಯೆ-6

ಕನ್ಯಾ (ಟೊ,ಪ,ಪಿ,ಪು,ಫ,ಣ,ಶ,ಪೆ,ಪೊ)

ಸಪ್ತಾಹದ ಆದಿಗೆ ಹಣದ ಹರಿವು ಉತ್ತಮವಾಗಿದ್ದರೂ ಬೇಡದ ಖರ್ಚುಗಳು. ವಿದ್ಯಾರ್ಜನೆಯಲ್ಲಿ ಉನ್ನತ ಸಾಧನೆಯಿಂದ ಪ್ರಸಿದ್ಧಿಗೆ ಬರುವಿರಿ. ಮಹಿಳಾ ಮಣಿಯರು ಸೌಂದರ್ಯ ಸಾಧನಗಳಿಗೆ ಹೆಚ್ಚಿನ ಹಣವನ್ನು ವ್ಯಯಿಸುವರು. ಗುರುಗ್ರಹ ಲಾಭ ಸ್ಥಾನಕ್ಕೆ ಬಂದಿರುವ ಪರಿಣಾಮ ಸ್ಥಿರಾಸ್ತಿ ಕ್ರಯ-ವಿಕ್ರಯಗಳಲ್ಲಿ ಹೇರಳ ಧನಲಾಭವಾಗುವುದು. ಪರೋಪಕಾರಿಗಳೆನಿಸಿ ಗೌರವಕ್ಕೆ ಪ್ರಾಪ್ತರಾಗುವಿರಿ.

ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ನಿಮ್ಮ ವೃತ್ತಿಯಲ್ಲಿ ಕಾಣ ಬರುವ ಅನಿಶ್ಚಿತತೆಗಳು ದೂರವಾಗುವುವು. ಪ್ರತ್ಯಕ್ಷವನ್ನು ಪ್ರಮಾಣಿಸಿ ನೋಡು ಎಂಬ ನಾಣ್ಣುಡಿಯಂತೆ ದುಡುಕದೆ ಮುಂದಿನ ಹೆಜ್ಜೆ ಇಡಿ. ವಾರ ಮಧ್ಯೆ ಹಿತಕರ ಸುದ್ದಿಯೊಂದು ಬರುವ ಸಂಭವವಿದೆ. ಸರ್ಕಾರಿ ನೌಕರರಿಗೆ ಲೋಕಾಯುಕ್ತ, ಇತ್ಯಾದಿ ಸಂಸ್ಥೆಗಳ ಬಿಸಿ ಮುಟ್ಟಲಿದೆ. ನೆರೆಹೊರೆಯಲ್ಲಿ ಹಿರಿಯರ ಆಗ್ರಹಕ್ಕೆ ಗುರಿಯಾಗುವಿರಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-1

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಭಾಗ್ಯಸ್ಥಾನ ಸ್ಥಿತ ಗುರುದೇವನು ಹೊಸ ಹೂಡಿಕೆಗಳನ್ನು ಮಾಡಲು ಪ್ರೇರಣೆ ನೀಡುವನು. ಶೇರು, ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಬಂಡವಾಳ ಹೂಡಬಹುದು. ಇದರ ಬಗ್ಗೆ ತಿಳಿದವರ ಸಲಹೆ ತೆಗೆದುಕೊಳ್ಳುವುದು ಸೂಕ್ತ. ಪಂಚಮ ಶನಿಯಿಂದ ಮಾನಸಿಕ, ಸಾಮಾಜಿಕ ಕಿರಿಕಿರಿಗಳು ಉಂಟಾದರೂ ಶ್ರೀ ಗುರುವಿನ ರಕ್ಷೆ ಇರುವ ಪರಿಣಾಮ ಕೆಲಸ ಕಾರ್ಯಗಳನ್ನು ಸಂಭಾಳಿಸಿಕೊಂಡು ಹೋಗುವಿರಿ.

ಶ್ರೀ ನರಸಿಂಹ ಪ್ರಾರ್ಥನೆ. ಶುಭ ಸಂಖ್ಯೆ-7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

'ಸುಖೇ ದುಃಖೇ ಸಮೇ ಕೃತ್ವಾ' ಎಂಬ ಗೀತವಾಣಿಯಂತೆ ಕಷ್ಟ-ಸುಖಗಳನ್ನು ಸಮನಾಗಿ ಸ್ವೀಕರಿಸಿ. ಉತ್ತಮ ಭೋಜನ, ಶಯನ ಸುಖಗಳೂ ಉಂಟು. ಮಾರಕ-ಬಾಧಕ ಸ್ಥಾನಗಳಲ್ಲಿರುವ ರಾಹು-ಕೇತುಗಳು ನಿಮ್ಮ ಪೂರ್ವ ಯೋಜಿತ ಕೆಲಸಗಳನ್ನು ಕೆಡಿಸಲಿದ್ದಾರೆ. ಮಡದಿ ಮಕ್ಕಳ ಜೊತೆ ವಾದ-ವಿವಾದಗಳಿಗೆ ಆಸ್ಪದ ಕೊಡಬೇಡಿ. ಸಂಚಾರಿ ನಿಯಮಗಳನ್ನು ಪಾಲಿಸಿ.

ಶ್ರೀ ಶಿರಡಿ ಬಾಬಾ ದರ್ಶನ. ಶುಭ ಸಂಖ್ಯೆ-9

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ನಿಮ್ಮ ಸತತ ಪ್ರಯತ್ನಗಳಿಗೆ ಪ್ರತಿಫಲ ದೊರೆಯುವ ಕಾಲ ಬಂದಿದೆ. ಆರ್ಥಿಕ ಪರಿಸ್ಥಿತಿ ಗಣನೀಯವಾಗಿ ಸುಧಾರಿಸುವುದು. ಮಹತ್ವದ ನಿರ್ಧಾರಗಳನ್ನು ಕುಟುಂಬ ವರ್ಗದವರಲ್ಲಿ ಸಮಾಲೋಚಿಸಿ ನಿರ್ಧರಿಸಿ ಗುರುಕೃಪೆಗೆ ಪಾತ್ರರಾಗಿರುವಿರಿ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವ ಸಾಧ್ಯತೆ ಇರುತ್ತದೆ. ಗೃಹ, ನಿವೇಶನ ಖರೀದಿಗೆ ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಧನಭಾವದಲ್ಲಿ ಶನಿದೇವ, ಷಷ್ಠಭಾವದಲ್ಲಿ ಗುರುದೇವ ಇದ್ದು, ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಆಗಿದೆ. ಕುಟುಂಬದಲ್ಲಿನ ಸಮಸ್ಯೆಗಳ ಪರಿಹಾರ ನಿಮ್ಮ ನಡೆ-ನುಡಿಯ ಮೇಲೆ ನಿಂತಿದೆ. ವಾರ ಮಧ್ಯೆ ಕೆಲವೊಂದು ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ಘಟಿಸಲಿದೆ. ಕೆಲವೊಮ್ಮೆ ವಾಮಮಾರ್ಗದಲ್ಲಿ ಹಣ ಗಳಿಕೆ ಆಗುವುದು. ಮಂಡಿ ಹಾಗೂ ಕೀಲು ನೋವುಗಳು ಕಾಡುವುದು.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3


ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಪಂಚಮ ಗುರುವಿನ ಪ್ರಭಾವದಿಂದ ಆರ್ಥಿಕ ಕ್ಷೇತ್ರದಲ್ಲಿ ಸಫಲತೆ ದೊರೆಯುವುದು. ಫೈನಾನ್ಸ್ ಸಂಸ್ಥೆಗಳಿಗೆ ಉತ್ತಮ ಆದಾಯ ಮೂಲಗಳು ದೊರೆಯುವುದು. ಕಳೆದ ಕೆಲ ಸಮಯದಿಂದ ನೀವು ಮಾಡಿದ ಪರಿಶ್ರಮ ಫಲದಾಯಕವಾಗುವುದರಿಂದ ನಿಮ್ಮ ಕಾರ್ಯೋತ್ಸಾಹ ಹೆಚ್ಚುವುದು. ಸರ್ಕಾರಿ ಅಧಿಕಾರಿಗಳ ಭೇಟಿಯಿಂದ ನಿಮ್ಮ ಸಮಸ್ಯೆಗೆ ಪರಿಹಾರ ದೊರಕಲಿದೆ. ವಾಹನ ಡ್ರೈವಿಂಗ್ ಮೋಜಿಗಲ್ಲ ಎಂಬ ಅರಿವಿರಲಿ.

ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-4

ಮಕ್ಕಳ ಚಿತ್ರಕಥೆ: ಮನುಷ್ಯರ ಸ್ವಭಾವವೇ ಹೀಗೆ...!

■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅದೊಂದು ನದಿ ಪಾತ್ರ. ಆ ನದಿಯಲ್ಲಿ ಮೀನೊಂದು ವಾಸಿಸುತಿತ್ತು. ನದಿಯ ಪಕ್ಕದಲ್ಲಿದ್ದ ಮರದಲ್ಲಿ ನವಿಲೊಂದು ಮನೆ ಮಾಡಿತ್ತು. ಅವೆರಡರ ನಡುವೆ ಹೇಗೋ ಎಂತೋ ಬಹಳ ಗೆಳೆತನವಾಯಿತು. ಅನ್ಯೋನ್ಯತೆ ಬೆಳೆಯುತ್ತಾ ಹೋದಂತೆ ಒಬ್ಬರಿಗೊಬ್ಬರು ಜೀವ ಬಿಡಲೂ ಸಿದ್ಧ ಎಂಬಷ್ಟು ಆತ್ಮೀಯವಾದವು. ಹೀಗಿರುವಾಗ ಒಮ್ಮೆ ಬೇಟೆಗಾರರ ತಂಡವೊಂದು ಅಲ್ಲಿಗೆ ಬಂದಿತು. ಮರದ ಮೇಲೆ ಕುಳಿತು ನೀರಿನಲ್ಲಿದ್ದ ಮೀನಿನೊಂದಿಗೆ ಹರಟುತಿದ್ದ ನವಿಲನ್ನು ಆ ತಂಡದ ಒಬ್ಬ ಆಸಾಮಿ ನೋಡಿಬಿಟ್ಟ. ಅದನ್ನು ಹಿಡಿದು ಕಾಲು ಕಟ್ಟಿ, ಒಯ್ಯಲು ಅನುವಾದ.




ಮೀನು, ನೀರಿನಿಂದ ಇದನ್ನೆಲ್ಲಾ ನೋಡಿಬಿಟ್ಟಿತು. ಮೆಲ್ಲಗೆ ತಲೆ ಹೊರಗೆ ಹಾಕಿ ಅಣ್ಣಾ.. ಬೇಟೆಗಾರನೇ.... ಇದುವರೆಗೂ ಯಾರೂ ಕಂಡಿರದ ಅಮೂಲ್ಯವಾದ ಮುತ್ತನ್ನು ನಾನು ತಂದುಕೊಡುತ್ತೇನೆ. ನನ್ನ ಗೆಳೆಯನನ್ನು ಬಿಟ್ಟುಬಿಡು...! ಎಂದಿತು. ಬೇಟೆಗಾರ ಒಪ್ಪಿದ. ಮೀನು ನೀರಿನಾಳಕ್ಕೆ ಹೋಗಿ ಒಂದು ಮುತ್ತನ್ನು ಕಚ್ಚಿ ತಂದು ಅವನಿಗೆ ಕೊಟ್ಟಿತು.




ಬೇಟೆಗಾರ ಮುತ್ತನ್ನು ನೋಡಿದವನೇ ಕಣ್ಣರಳಿಸಿದ. ಅಂಥ ಮುತ್ತನ್ನು ಅವನೆಂದೂ ಕಂಡಿರಲಿಲ್ಲ. ಅದರ ಬೆಲೆ ಅಂದಾಜಿಸಿದ. ಅದೇ ಗುಂಗಿನಲ್ಲಿ ನವಿಲನ್ನು ಬಿಡುಗಡೆಗೊಳಿಸಿದ. ನವಿಲು ಮತ್ತೆ ಮೇಲಕ್ಕೆ ಹಾರಿತು.



ಮರುದಿನ ಬೇಟೆಗಾರ ಪುನಃ ಬಂದ. ಅವನ ಕಣ್ಣುಗಳಲ್ಲಿ ದುರಾಸೆ ತುಂಬಿತ್ತು. ಮೀನಿಗೆ ಕೂಡಲೇ ಅರಿವಾಯಿತು. ಮೀನನ್ನು ನೋಡಿದವನೇ ಒಂಟಿ ಮುತ್ತಿಗೆ ಅಷ್ಟೇನೂ ಬೆಲೆ ಇಲ್ಲವಂತೆ ಜೋಡಿಗೆ ಬೆಲೆ..... ಎಂದು ಅಕ್ಕಸಾಲಿಗ ಹೇಳಿದ. ಹಾಗಾಗಿ ನೀನು ಇಂಥದೇ ಇನ್ನೊಂದು ಮುತ್ತು ತಂದುಕೊಟ್ಟರೆ..... ನಿನ್ನ ಗೆಳೆಯನ ತಂಟೆಗೆ ನಾನು ಇನ್ನೆಂದೂ ಬರುವುದಿಲ್ಲ... ಎಂದು ಮಾತು ಕೊಡುತ್ತೇನೆ...! ಎಂದ.



ಆ ಜಾಣ ಮೀನು, ತಕ್ಷಣವೇ ಅಂಥದೇ ಇನ್ನೊಂದು ಮುತ್ತು ಹುಡುಕಬೇಕಾದರೆ ನಿನ್ನ ಕೈಲಿರುವುದನ್ನು ಕೊಡಬೇಕು... ಆಗ, ನಾನು ಅಂಥದ್ದೇ ಮುತ್ತನ್ನು ಹುಡುಕಿ ತರುತ್ತೇನೆ...! ಎಂದು ಹೇಳಿ ಬಂಡೆಯ ಮೇಲೆ ಮುತ್ತನ್ನು ಇಡಲು ಹೇಳಿತು. ಬೇಟೆಗಾರ ಹಾಗೆಯೇ ಮಾಡಿದ. ಮೀನು ಹಾರಿ ಮುತ್ತನ್ನು ಕಚ್ಚಿಕೊಂಡು ನೀರಿನೊಳಗೆ ಇಳಿಯಿತು.



ಅಲ್ಲಿಂದಲೇ ತಲೆಯೆತ್ತಿ ಬೇಟೆಗಾರನೇ, ನನ್ನ ಗೆಳೆಯ...ನಿನ್ನ ಕೈಗೆಟುಕದಷ್ಟು ದೂರಕ್ಕೆ ನಿನ್ನೆಯೇ ಹೊರಟುಹೋಗಿದ್ದಾನೆ. ನೀನು ಮರಳಿ ಬಂದೇ ಬರುತ್ತೀಯಾ ಎಂದು ನಮಗೆ ತಿಳಿದಿತ್ತು. ಮನುಷ್ಯರ ಸ್ವಭಾವವೇ ಹೀಗೆ....ಬೇಕುಗಳ ಸಂತೆಯಲ್ಲಿ ಕಳೆದುಹೋಗುತ್ತೀರಿ. ಆದ್ದರಿಂದಲೇ ನೀವು ದುಃಖಿಗಳು. ಅತಿಯಾಸೆಯಿಂದ ನಿನಗೆ ಸಿಕ್ಕಿದ್ದನ್ನೂ ಕಳೆದುಕೊಂಡೆ... ಹೋಗು ಹೊರಟುಹೋಗು....! ಎನ್ನುತ್ತಾ ನೀರಿನಲ್ಲಿ ಮೀನು ಮಾಯವಾಯಿತು.

ಮೈಸೂರು ಮಿತ್ರ ಭಾನುವಾರ 14 ಜೂನ್ 2026

ಡೋರ್ನಹಳ್ಳಿಯಲ್ಲಿ ವೈಭವದ ಜಾತ್ರಾ ಮಹೋತ್ಸವ

ಸಾವಿರಾರು ಜನರ ಸಮ್ಮುಖದಲ್ಲಿ ವಿಜೃಂಭಣೆಯ ತೇರಿನ ಮೆರವಣಿಗೆ

ನನಗೆ ತಿಳಿದಂತೆ ನಾನು ಚಿಕ್ಕ ವಯಸ್ಸಿನಲ್ಲಿದ್ದಾಗಿನಿಂದ ಪವಾಡ ಪುರುಷ ಸಂತ ಅಂತೋಣಿ ಜಾತ್ರೆಗೆ ಕುಟುಂಬದ ಸಮೇತ ಬರುತ್ತಿದ್ದೇವೆ, ಹರಕೆ, ಕಾಣಿಕೆ, ಮುಡಿ ಎಲ್ಲವೂ ಇದೆ. ಹಾಗಾಗಿ ನಾವು ಕಟ್ಟುವ ಹರಕೆಯನ್ನು ವಾರ್ಷಿಕ ಜಾತ್ರೆಯಲ್ಲಿ ಬಂದು ಇಲ್ಲಿಯೇ ಅಡುಗೆ ಮಾಡಿ ಉಣಬಡಿಸಿ ಹರಕೆ ತೀರಿಸಿ ನಂತರ ಕಾಣಿಕೆ ಹಾಕಿ, ನಂತರ ಮೊಂಬತ್ತಿ ಹಚ್ಚಿ ದೇವರಲ್ಲಿ ಪ್ರಾರ್ಥನೆ ಮಾಡುತ್ತೇವೆ. – ಸೋಮುಲು, ಸಂತ ಅಂತೋಣಿ ಭಕ್ತ, ಸಕಲೇಶಪುರ

ಕೆ.ಆರ್.ನಗರ: ತಾಲೂಕಿನ ಡೋರ್ನಹಳ್ಳಿಯ ಸುಪ್ರಸಿದ್ಧ ಹಾಗೂ ಪವಾಡ ಪುರುಷ ಸಂತ ಅಂಥೋಣಿಯವರ ವಾರ್ಷಿಕ ಜಾತ್ರಾ ಮಹೋತ್ಸವ ಹಾಗೂ ಸಂತ ಅಂಥೋಣಿಯವರ ಬಸಿಲಿಕಾದ ತೇರಿನ ಮೆರವಣಿಗೆ ಸಾವಿರಾರು ಜನರ ಸಮ್ಮುಖದಲ್ಲಿ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಫ್ರಾನ್ಸಿಸ್ ಸೆರಾವೊ ಎಸ್.ಜೆ. ಅವರು ಹಬ್ಬದ ಗಾಯನ ಪೂಜೆಗೆ ಚಾಲನೆ ನೀಡಿದರು. ಡೋರ್ನಹಳ್ಳಿ ಚರ್ಚ್‌ನ ಧರ್ಮಗುರು ಡೇವಿಡ್ ಸಗಾಯರಾಜ್, ಕೊಲ್ಕತ್ತಾ ಧರ್ಮಗುರು ರಾಬರ್ಟ್ ಗ್ರೋರಿ ಮೊಂಬೋಗಾದಿಯ ಧರ್ಮಗುರು ವ್ಯಾಲೆಂಟೆನ್ ರಾಜೇಂದ್ರ ಕುಮಾರ್, ಮೈಸೂರು ರೆಕ್ಟರ್ ಪ್ರಭೋದನಾ ಗುರು ಥಾಮಸ್ ಮಂಜಲಿ, ಗಂಜಾಂ ಅಮಲೋದ್ಭವ ಮಾತೆಯ ದೇವಾಲಯದ ಧರ್ಮಗುರು ಅಂತೋಣಪ್ಪ.ಜೆ. ಬೆಂಗಳೂರಿನ ಮಾಹ ಧರ್ಮಕ್ಷೇತ್ರದ ಸಹಾಯಕ ಧರ್ಮಾಧ್ಯಕ್ಷ ಡಾ. ಜೋಸೆಫ್ ಸೂಸೈನಾಥನ್, ಬೋಗಾದಿಯ ಕೃಪಾಲಯ ಗುರುಮಠ ಅಲೆಕ್ಸಾಂಡರ್ ಡ್ಯಾನಿಯೇಲ್, ಹನೂರು ಆರೋಗ್ಯ ಮಾತೆ ದೇವಾಲಯದ ಧರ್ಮಗುರು ಸಂಜಯ್ ಕುಮಾರ್.ಎಫ್, ಮಾದಾಪುರ ನಿರ್ಮಲ ಮಾತೆ ದೇವಾಲಯದ ಧರ್ಮಗುರು ಸೂಸೈ.ಎ. ಹಾಗೂ ನಂಜನಗೂಡು ಬಾಲ ಯೇಸು ದೇವಾಲಯದ ಧರ್ಮಗುರು ಮೈಕಲ್ ಮರಿ.ಎಂ.ಅವರುಗಳು ಹಬ್ಬದ ಆಡಂಬರ ಗಾಯನ ಬಲಿಪೂಜೆ ನಡೆಸಿಕೊಟ್ಟರು.

ಬಳಿಕ ಸಂಜೆ 6 ಗಂಟೆಗೆ ಚರ್ಚ್ ಮುಂಭಾಗದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಸಂತ ಅಂಥೋಣಿಯವರ ವೈಭವದ ತೇರಿನ ಮೆರವಣಿಗೆಗೆ ಚಾಲನೆ ನೀಡಲಾಯಿತು. ಸಂತ ಅಂಥೋಣಿ ಬಸಿಲಿಕಾ ಚರ್ಚ್‌ನ ಆಡಳಿತಾಧಿಕಾರಿ ಪ್ರವೀಣ್ ಪದ್ರು ಹಾಗೂ ಧರ್ಮಗುರು ಡೇವಿಡ್ ಸಗಾಯರಾಜ್ ಅವರು ಜಾತ್ರಾ ಮಹೋತ್ಸವದ ನೇತೃತ್ವ ವಹಿಸಿದ್ದರು.

ಐತಿಹಾಸಿಕ ಮತ್ತು ಪವಾಡ ಪುರುಷ ಎಂದೇ ಹೆಸರುವಾಸಿಯಾದ ಡೋರ್ನಹಳ್ಳಿ ಸಂತ ಅಂಥೋಣಿಯವರ ವಾರ್ಷಿಕ ಜಾತ್ರೆಗೆ ರಾಜ್ಯದ ವಿವಿಧ ಮೂಲೆಗಳಿಂದ ಜನರು ಆಗಮಿಸಿದ್ದರು.

ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರು–ಅರಸೀಕೆರೆ ರೈಲುಗಾಡಿಗಳನ್ನು ಮೂರು ದಿನದವರೆಗೆ ಡೋರ್ನಹಳ್ಳಿ ರೈಲು ನಿಲ್ದಾಣದಲ್ಲಿ ಎಲ್ಲಾ ರೈಲುಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡುವುದರ ಜೊತೆಗೆ ಮೈಸೂರು ಮತ್ತು ಕೆ.ಆರ್.ನಗರದಿಂದ ವಿಶೇಷ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಕಳೆದ ವಾರದಿಂದ ಆರಂಭವಾಗಿದ್ದ ಸಂತ ಅಂತೋಣಿ ಬಸಿಲಿಕಾ ಅವರ ವಾರ್ಷಿಕ ಮಹೋತ್ಸವದಲ್ಲಿ ಲಕ್ಷಾಂತರ ಜನರು, ಭಕ್ತಾದಿಗಳು ಆಡಂಬರದ ಗಾಯನ ಪೂಜೆ ವೀಕ್ಷಿಸಿ ಅಂಥೋಣಿಯವರ ದರ್ಶನ ಪಡೆದರು. ಕೆ.ಆರ್.ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.



ಡೋರ್ನಹಳ್ಳಿಯ ಸುಪ್ರಸಿದ್ಧ ಹಾಗೂ ಪವಾಡ ಪುರುಷ ಸಂತ ಅಂಥೋಣಿಯವರ ಚರ್ಚ್ ಮುಂಬಾಗ ನಡೆದ ತೇರಿನ ಮೆರವಣಿಗೆ.

ರೆಸಾರ್ಟ್‌ಗೆ ನುಗ್ಗಿ ಪ್ರೇಮಿಗಳ ಮೇಲೆ ಹಲ್ಲೆ, ಕೊಲೆ ಬೆದರಿಕೆ: ನಾಲ್ವರ ಬಂಧನ

ಹುಣಸೂರು, ಜೂ.13– ಪ್ರೇಮಿಗಳನ್ನು ಹೆದರಿಸಿ, ಹಲ್ಲೆ ನಡೆಸಿ ಬೈಕ್ ಕಿತ್ತು ಕೊಂಡು ಹೋಗಿದ್ದ ನಾಲ್ವರು ಆರೋಪಿಗಳನ್ನು ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಹುಣಸೂರು ನಗರದ ವೀಲ್ ವಾಸಿಂ, ಶೋಯೆಬ್, ಅಜರ್ ಹಾಗೂ ತಾಲೂಕಿನ ಕೊಳವಿಗೆಯ ಶ್ರೀಕಾಂತ್ ಅಲಿಯಾಸ್ ಸಿರಿ ಬಂಧಿತ ಆರೋಪಿಗಳು. ಮೈಸೂರಿನ ಯುವಕನೊಬ್ಬ ತನ್ನ ಪ್ರೇಯಸಿಯೊಂದಿಗೆ ಹುಣಸೂರಿನ ರೆಸಾರ್ಟ್‌ಗೆ ಬಂದಿದ್ದ. ಈ ವೇಳೆ ವೀಲ್ ವಾಸಿಂ ಮತ್ತವರ ಸ್ನೇಹಿತರು ಅಲ್ಲಿಗೆ ಬಂದು ಗಲಾಟೆ ಮಾಡಿ ಆತನ ಬೈಕ್‌ನ ಕೀ ಕಿತ್ತುಕೊಂಡು ಬೆದರಿಕೆ ಹಾಕಿದ್ದರು. ನಂತರ ಬೈಕನ್ನು ಕೊಳವಿಗೆಯ ಶ್ರೀಕಾಂತ್ ಬಳಿ ಅಡವಿಟ್ಟು 30 ಸಾವಿರ ರೂ ಪಡೆದುಕೊಂಡಿದ್ದರು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಅಸ್ಲಂ ತನಗೆ ಕೊಲೆ ಬೆದರಿಕೆ ಒಡ್ಡಿದ್ದಾರೆಂದು ದೂರು ದಾಖಲಿಸಿದ್ದರು.

ಆರೋಪಿ ವೀಲ್ ವಾಸಿಂ ಮೇಲೆ ಸಾಕಷ್ಟು ಪ್ರಕರಣಗಳಿರುವುದನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಯಾಚರಣೆಗಿಳಿದ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಮತ್ತವರ ತಂಡ ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದ ವೇಳೆ ಬೈಕ್ ಅಡವಿಟ್ಟಿರುವ ಬಗ್ಗೆ ಬಾಯ್ಬಿಟ್ಟರು.

ಗಂಭೀರ ಹಲ್ಲೆ ನಡೆಸಿದ್ದನ್ನು ಪರಿಗಣಿಸಿ, ನಾಲ್ವರು ಆರೋಪಿಗಳ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಿ. ನ್ಯಾಯಾಲಯಕ್ಕೆ ಹಾಜರು ಪಡಿಸಿದ ವೇಳೆ ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಚಿರತೆ ದಾಳಿಗೆ 3 ಕುರಿಗಳ ಬಲಿ

ಹುಣಸೂರು, ಜೂ.13– ಚಿರತೆ ದಾಳಿಗೆ ಮೂರು ಕುರಿಗಳು ಬಲಿಯಾಗಿರುವ ಘಟನೆ ತಾಲೂಕು ಮಂಚಬಾಯನ ಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಬುಧವಾರ ರಾತ್ರಿ ಮಂಚ ಬಾಯನಹಳ್ಳಿ ಗ್ರಾಮದ ಇಂತಿಯಾಜ್ ಪಾಷಾ ಅವರಿಗೆ ಸೇರಿದ ಬ್ಯಾರನ್ ಪಕ್ಕ ಕೊಟ್ಟಿಗೆಯಲ್ಲಿ ಕಟ್ಟಿದ್ದ 3 ಕುರಿಗಳ ಮೇಲೆ ಚಿರತೆ ದಾಳಿ ಮಾಡಿ, ಎರಡು ಕುರಿಯನ್ನು ಕೊಂದಿದ್ದು ಇನ್ನೊಂದು ಕುರಿಯನ್ನು ಹೊತ್ತು ಒಯ್ದಿದೆ. ಘಟನಾ ಸ್ಥಳಕ್ಕೆ ಬೀಟ್ ಫಾರೆಸ್ಟರ್ ರವಿಕುಮಾರ್ ಭೇಟಿ ನೀಡಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಬೋನ್ ಇಟ್ಟು ಚಿರತೆ ಸೆರೆಗೆ ಕ್ರಮ ಕೈಗೊಂಡಿದ್ದಾರೆ.



ತಿ.ನರಸೀಪುರದಲ್ಲಿ ಬಿಜೆಪಿ ಗೆಲ್ಲಿಸಲು ಪಣ ತೊಡಿ

ಅಭಿನಂದನಾ ಸಮಾರಂಭದಲ್ಲಿ ಮಾಜಿ ಎಂಎಲ್‌ಸಿ ಸಿ.ರಮೇಶ್ ಕರೆ



ತಿ.ನರಸೀಪುರ ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯಕರ್ತರು ಕುಂಬ್ರಳ್ಳಿ ಸುಬ್ಬಣ್ಣರವರನ್ನು ಸನ್ಮಾನಿಸಿದರು.

ತಿ.ನರಸೀಪುರ, ಜೂ.13– ತಿ.ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಿಸಲು ಪಣ ತೊಡಬೇಕು. ತಿ.ನರಸೀಪುರ ವಿಧಾನಸಭಾ ಕ್ಷೇತ್ರವು ರಾಜ್ಯದ ಅತ್ಯಂತ ಜನಪ್ರಿಯ ಹಾಗೂ ರಾಜಕೀಯವಾಗಿ ಮಹತ್ವದ ಕ್ಷೇತ್ರಗಳಲ್ಲಿ ಒಂದಾಗಿದ್ದು, ಇಲ್ಲಿ ಕೇವಲ ಸೋಲು–ಗೆಲುವಿನ ಲೆಕ್ಕಾಚಾರಗಳ ಆಧಾರದ ಮೇಲೆ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅವರಿಗೆ ಏರ್ಪಡಿಸಿದ ಅಭಿನಂದನೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿಶೇಷ ಮೀಸಲು ಕ್ಷೇತ್ರವಾಗಿರುವ ಇಲ್ಲಿನ ರಾಜಕೀಯ ವಾತಾವರಣ ಮತ್ತು ಮತದಾರರ ಮನೋಭಾವ ಇತರೆ ಕ್ಷೇತ್ರಗಳಿಗಿಂತ ಭಿನ್ನವಾಗಿದೆ. ಆದ್ದರಿಂದ ಕ್ಷೇತ್ರದ ಅಭಿವೃದ್ಧಿ ಹಾಗೂ ಪಕ್ಷದ ಸಂಘಟನೆ ಎರಡಕ್ಕೂ ಸಮಾನ ಆದ್ಯತೆ ನೀಡುವ ಅಗತ್ಯವಿದೆ ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತಾಡಿದ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ. ಬಿಜೆಪಿ ಪಕ್ಷ ನೀಡಿದ ಜವಾಬ್ದಾರಿಯನ್ನು ಸದ್ಬಳಕೆ ಮಾಡಿಕೊಂಡು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷರಾಗಿ ಒಂದು ವರ್ಷ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಜಿಲ್ಲೆಯ ಎಲ್ಲಾ ಏಳು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಪಕ್ಷ ಸಂಘಟನೆಯನ್ನು ಬಲಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇನೆ. ಪಕ್ಷದ ಸಂಘಟನೆಗೆ ಆದ್ಯತೆ ನೀಡಿ ನಿರಂತರವಾಗಿ ಕಾರ್ಯಕರ್ತರೊಂದಿಗೆ ಸಂಪರ್ಕದಲ್ಲಿದ್ದು, ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಬಿಜೆಪಿ ಬಲವರ್ಧನೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

2028ರ ಸಾರ್ವತ್ರಿಕ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲಾ 7 ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಪೂರಕ ವಾತಾವರಣ ನಿರ್ಮಿಸುವ ಗುರಿಯೊಂದಿಗೆ ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗುವುದು ಎಂದು ತಿಳಿಸಿದರು.

ಎಸ್‌ಬಿಆರ್ ಕ್ಷೇತ್ರ ಉಸ್ತುವಾರಿ ಹೇಮಂತ್ ಕುಮಾರ್ ಗೌಡ, ಬಿಜೆಪಿ ಮಂಡಲ ಅಧ್ಯಕ್ಷ ಸತ್ಯ ರಾಜ್, ಪರಾಜಿತ ಅಭ್ಯರ್ಥಿ ಡಾ. ರೇವಣ್ಣ, ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ ಸ್ವಾಮಿ, ಬನ್ನೂರು ಎನ್ ಎಂ. ರಾಮಚಂದ್ರ, ಪುರಸಭಾ ಮಾಜಿ ಸದಸ್ಯ ಎಸ್.ಕೆ.ಕಿರಣ್, ಜಿ.ಪಂ. ಮಾಜಿ ಸದಸ್ಯ ಲೋಕೇಶ್ ನಾಯಕ್, ತೊಟ್ಟವಾಡಿ ಅನಿಲ್, ಕೆಬ್ಬೇಹುಂಡಿ ಶಿವಕುಮಾರ್, ಮಾಧ್ಯಮ ವಕ್ತಾರ ದಯಾನಂದ ಪಟೇಲ್, ಸಾಮ್ರಾಟ್ ಸುಂದರೇಶನ್,ಅಕ್ಕಿ ನಂಜುಂಡ ಸ್ವಾಮಿ, ಚೌಹಳ್ಳಿ ಸಿದ್ದರಾಜು, ವಾಟಾಳ್ ಪುರ ಸುರೇಶ್, ಲಕ್ಷ್ಮಣ್, ಕೊಡಗಳ್ಳಿ ಕುಮಾರಸ್ವಾಮಿ, ಕಾಳೇಗೌಡ, ಗಿರೀಶ್ ಗೌಡ, ಕೆಂಡನಕೊಪ್ಪಲು ಕುಮಾರ್, ರಾಜಶೇಖರ್, ಹರೀಶ್, ಹಾಜರಿದ್ದರು.

ಬಿಜೆಪಿಯಿಂದಲೇ ಅಭ್ಯರ್ಥಿ

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕುರಿತು ಮಾತನಾಡಿದ ಕುಂಬ್ರಳ್ಳಿ ಸುಬ್ಬಣ್ಣ ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯೇ ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷರು ಭರವಸೆ ನೀಡಿದ್ದಾರೆ ಎಂದರು. ಆಕಾಂಕ್ಷಿಗಳ ಪಟ್ಟಿ ಬಹಳ ದೊಡ್ಡದಿದೆ. ಮುಂದೆ ಪಕ್ಷದ ವರಿಷ್ಠರು ಅಭ್ಯರ್ಥಿಯನ್ನು ಘೋಷಿಸಲಿದ್ದಾರೆ. ಆದರೆ ಅಭ್ಯರ್ಥಿ ಯಾರೇ ಆಗಿರಲಿ, ಪಕ್ಷದ ಗೆಲುವಿಗಾಗಿ ಎಲ್ಲ ಕಾರ್ಯಕರ್ತರು ಹಾಗೂ ಮುಖಂಡರು ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ ಎಂದು ಕರೆ ನೀಡಿದರು. ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಇದ್ದರೂ ತಿ.ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯೇ ಕಣಕ್ಕಿಳಿಯಲಿದ್ದು, ಕಾರ್ಯಕರ್ತರು ಯಾವುದೇ ಗೊಂದಲಕ್ಕೆ ಒಳಗಾಗದೆ ಪಕ್ಷ ಸಂಘಟನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಯುವ ಮೋರ್ಚಾದಿಂದ ಸಂಘಟನೆ

ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ಸಂಘಟನಾ ಉಸ್ತುವಾರಿ ಅರ್ಜುನ್ ರಮೇಶ್ ಮಾತನಾಡಿ ಮುಂದಿನ ದಿನಗಳಲ್ಲಿ ಯುವ ಮೋರ್ಚಾವನ್ನು ಇನ್ನಷ್ಟು ಸಕ್ರಿಯಗೊಳಿಸಿ, ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಯುವ ನಾಯಕರನ್ನು ಬೆಳೆಸುವ ಮೂಲಕ ಪಕ್ಷ ಸಂಘಟನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ ಪಕ್ಷ ಅಧಿಕಾರ ಹಿಡಿಯುವಂತೆ ಬಲಿಷ್ಠ ಸಂಘಟನೆ ನಿರ್ಮಿಸಲು ಯುವ ಮೋರ್ಚಾ ಕಾರ್ಯಕರ್ತರು ಶ್ರಮಿಸಲಿದ್ದಾರೆ ಎಂದು ತಿಳಿಸಿದರು.

ಪಕ್ಷದ ತತ್ವ ಸಿದ್ಧಾಂತಗಳನ್ನು ಯುವಜನರಿಗೆ ತಲುಪಿಸುವ ಜೊತೆಗೆ ಹೊಸ ಮುಖಗಳನ್ನು ಪಕ್ಷದತ್ತ ಸೆಳೆಯುವ ಕಾರ್ಯಕ್ಕೂ ಆದ್ಯತೆ ನೀಡಲಾಗುವುದು. ಯುವಕರಿಗೆ ಪಕ್ಷದಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಅವಕಾಶಗಳನ್ನು ನೀಡುವ ಕುರಿತು ಪಕ್ಷದ ಹಿರಿಯ ನಾಯಕತ್ವದ ಭರವಸೆ ಇದೆ ಎಂದು ಹೇಳಿದರು. ಇಂತಹ ಮಹತ್ವದ ಜವಾಬ್ದಾರಿಯನ್ನು ತಮ್ಮ ಮೇಲೆ ವಹಿಸಿರುವ ಪಕ್ಷದ ಅಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸಿದ ಅರ್ಜುನ್ ರಮೇಶ್, ಸಂಘಟನೆಯ ಅಭಿವೃದ್ಧಿಗೆ ಸಂಪೂರ್ಣ ಸಮರ್ಪಣೆಯೊಂದಿಗೆ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಹುಟ್ಟು ಹಬ್ಬದ ಆಚರಣೆ



ಸಾಮಾಜಿಕ ಚಟುವಟಿಕೆಗಳ ಮೂಲಕ ಕಾಂಗ್ರೆಸ್ ಮುಖಂಡ ಚಂದ್ರು ಅವರ ಹುಟ್ಟು ಹಬ್ಬವನ್ನು ಆಚರಣೆ ಮಾಡಲಾಯಿತು. ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳು ಮತ್ತು ಕುಟುಂಬ ವರ್ಗಕ್ಕೆ ಊಟ, ಹಣ್ಣು ಮತ್ತು ಬ್ರೆಡ್ ವಿತರಣೆ ಮಾಡಲಾಯಿತು. ನಂತರ ಅಶೋಕಪುರಂ ಬಡಾವಣೆಯ ಮುಂಭಾಗ ಗಿಡ ನೆಟ್ಟರು. ನಂತರ ಸುಮಾರು 50 ಜನ ವಯೋವೃದ್ಧರಿಗೆ ಹೊದಿಕೆಗಳನ್ನು ವಿತರಣೆ ಮಾಡಲಾಯಿತು.ಇದೇ ಸಂದರ್ಭದಲ್ಲಿ ದಾಸಪ್ರಕಾಶ್, ಸಿದ್ದಪ್ಪ, ಸ್ವಾಮಿ, ರಮೇಶ್, ನಾಗು, ವಾಸು, ಜಗದೀಶ್, ಕುಮಾರ, ಬಸವ, ಲೋಕೇಶ್, ಕಿಟ್ಟಿ, ಮಹದೇವು, ಮರಿಸ್ವಾಮಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ವರುಣ ಕ್ಷೇತ್ರದ ಅಭಿವೃದ್ಧಿಗೆ ಹಣದ ಕೊರತೆ ಇಲ್ಲ

ಸಚಿವ ಡಾ.ಯತೀಂದ್ರಗೆ ಅಂಬೇಡ್ಕರ್ ವಿಗ್ರಹ ನೀಡಿ ಸನ್ಮಾನ

ತಿ.ನರಸೀಪುರ, ಜೂ.13– ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದು, ಇನ್ನೂ ಹೆಚ್ಚು ಅಭಿವೃದ್ಧಿಗೆ ಹಣವನ್ನು ಮೀಸಲಿಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪಟ್ಟಣದ ತ್ರಿವೇಣಿ ನಗರದ ಮುಖಂಡರು ಮತ್ತು ನಿವಾಸಿಗಳು ಅಂಬೇಡ್ಕರ್ ವಿಗ್ರಹ ನೀಡಿ ಮಾಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ವರುಣ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿ ಮಾಡಲು ಅನುದಾನ ಕೊರತೆ ಇಲ್ಲ ಎಂದರು.

ಇದೇ ವೇಳೆ ನಿವಾಸಿಗಳು ಪಟ್ಟಣದ ತ್ರಿವೇಣಿ ನಗರ ಸರ್ಕಲ್‌ನಲ್ಲಿ ಮಹಾನಾಯಕ ಆರ್ಚ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವಂತೆ ವಿನಂತಿಸಿದಾಗ ಸಚಿವರು ಈ ಮಾತು ಹೇಳಿದರು.



ಸಚಿವ ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸುತ್ತಿರುವುದು.

ತ್ರಿವೇಣಿ ನಗರದ ಆರು ಮತ್ತು ಏಳನೇ ವಾರ್ಡಿಗೆ ತಲಾ 50 ಲಕ್ಷ ರೂ. ಗಳನ್ನು ನೀಡಲಾಗಿದೆ. ರಸ್ತೆ, ಚರಂಡಿ, ಮತ್ತು ಕಾಂಕ್ರೀಟ್ ನಿರ್ಮಾಣಕ್ಕೆ ಇನ್ನೆಷ್ಟು ಅನುದಾನದ ಅಗತ್ಯವಿದೆ ಎಂದು ಅವರು ಮನವಿ ಮಾಡಿದರು. ಪಟ್ಟಣಕ್ಕೆ ಹೊಂದಿಕೊಂಡಂತೆ ಇರುವ ತ್ರಿವೇಣಿ ನಗರದ ಸ್ಮಶಾನ ಅಭಿವೃದ್ಧಿಗೆ ಹಣವನ್ನು ನೀಡಬೇಕು. ಹಿಂದೆ ಅಭಿವೃದ್ಧಿ ಮಾಡಿರೋದು ಸಾಲುವುದಿಲ್ಲ ಎಂದು ಮನವಿ ಮಾಡಲಾಯಿತು.

ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಸದಸ್ಯ ಬೇಬಿ ಹೇಮಂತ್ ಕುಮಾರ್, ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಪ್ರಧಾನ ಡಿ ಆರ್ ಮೂರ್ತಿ, ನಿರ್ದೇಶಕರಾದ ಶ್ರೀಧರ್, ಮಲ್ಲರಾಜು, ಎಂ.ಮಿಥುನ್, ಮಹದೇವಸ್ವಾಮಿ, ರಂಗದಾಸ್, ಶಿವಣ್ಣ, ರವಿ ಮಹದೇವಮ್ಮ ಈ ವೇಳೆ ಉಪಸ್ಥಿತರಿದ್ದರು.

ಹುಣಸೂರಲ್ಲಿ ಯುವ ನಾಯಕ ಸೂರಜ್ ಹೆಗಡೆಗೆ ಭಾವಪೂರ್ಣ ನುಡಿನಮನ



ಹುಣಸೂರಿನಲ್ಲಿ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಗಣ್ಯರು.

ಹುಣಸೂರು, ಜೂ.13– ಇತ್ತೀಚೆಗೆ ನಿಧನರಾದ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಹಾಗೂ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗಡೆ ಅವರಿಗೆ ಹುಣಸೂರಿನಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಕನಕ ಭವನದಲ್ಲಿ ಹುಣಸೂರು ತಾಲೂಕು ಕುರುಬರ ಅಭಿವೃದ್ಧಿ ಸಮಿತಿ, ಪ್ರಗತಿಪರ ಚಿಂತಕರು ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಕುಟುಂಬದ ಹಿತೈಷಿಗಳ ವತಿಯಿಂದ ಆಯೋಜಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿ ಸೂರಜ್ ಹೆಗಡೆ ಅವರ ವ್ಯಕ್ತಿತ್ವ, ಸಾಮಾಜಿಕ ಬದ್ಧತೆ ಹಾಗೂ ಪಕ್ಷನಿಷ್ಠೆಯನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಶಾಸಕ ಎಚ್.ಪಿ. ಮಂಜುನಾಥ್, ಸೂರಜ್ ಹೆಗಡೆ ಅವರು ಅಪರೂಪದ ಸಂಘಟನಾ ಚತುರತೆಯನ್ನು ಹೊಂದಿದ್ದ ಯುವ ನಾಯಕರಾಗಿದ್ದರು. ಎಲ್ಲರೊಂದಿಗೆ ಆತ್ಮೀಯ ಬಾಂಧವ್ಯ ಬೆಳೆಸಿಕೊಂಡಿದ್ದ ಅವರು ಅಜಾತಶತ್ರುವಾಗಿದ್ದರು. ರಾಜಕೀಯ, ಸಾಮಾಜಿಕ ಹಾಗೂ ಸಮಕಾಲೀನ ವಿಚಾರಗಳ ಕುರಿತು ಅಪಾರ ಜ್ಞಾನ ಹೊಂದಿದ್ದ ಅವರು ಸದಾ ಜನಪರ ಚಿಂತನೆಗಳೊಂದಿಗೆ ಬದುಕಿದರು. ಯುವಕರಿಗೆ ಮಾದರಿಯಾಗಿದ್ದ ಅವರ ಅಗಲಿಕೆ ಸಮಾಜಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ ಎಂದು ಹೇಳಿದರು.

ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಮಣ್ಯ ಮಾತನಾಡಿ, ಸೂರಜ್ ಹೆಗಡೆ ಅವರು ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರ ಕುಟುಂಬದೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾಗಿ ಜನಪರ ಸೇವೆ ಸಲ್ಲಿಸಿದ್ದರು. ಪಕ್ಷದ ಬೆಳವಣಿಗೆ ಹಾಗೂ ಸಾಮಾಜಿಕ ನ್ಯಾಯದ ಪರವಾದ ಅವರ ಬದ್ಧತೆ ಸದಾ ಸ್ಮರಣೀಯ ಎಂದು ಹೇಳಿದರು.

ದಸಂಸ ಹಿರಿಯ ಮುಖಂಡ ಹರಿಹರ ಆನಂದ ಸ್ವಾಮಿ, ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಕೆ. ಕುನ್ನೇಗೌಡ, ಪ್ರಗತಿಪರ ಚಿಂತಕರಾದ ಎ.ಪಿ. ಸ್ವಾಮಿ, ಕೆ.ಗಣೇಶ್ ಗೌಡ, ಬಿ.ಎನ್. ಜಯರಾಮ್, ಡಾ.ಲೋಹಿತ್, ಸತ್ಯಪ್ಪ, ಅಣ್ಣಯ್ಯನಾಯಕ, ಹಂದನಹಳ್ಳಿ ಸೋಮಶೇಖರ್, ತ್ರಿವೇಣಿ, ಗಣಪತಿರಾವ್ ಇಂಡಲ್ಕರ್, ತರಿಕಲ್ ರಾಜು ಸೇರಿದಂತೆ ಹಲವರು ಮಾತನಾಡಿ ಸೂರಜ್ ಹೆಗಡೆ ಅವರ ಸೇವಾ ಮನೋಭಾವ ಮತ್ತು ಮಾನವೀಯ ಗುಣಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕಣಗಾಲು ರಾಮೇಗೌಡ, ವಾಸೇಗೌಡ, ತೊಂಡಾಳು ಹೊನ್ನಪ್ಪ, ಡಿ.ಕುಮಾರ್, ರವಿಪ್ರಸನ್ನ, ಗಣೇಶ್ ಕುಮಾರಸ್ವಾಮಿ, ಚಿಲ್ಕುಂದ ನಾಗರಾಜ್, ಬಿಳಿಗೆರೆ ಮಾದೇಗೌಡ, ಡೇವಿಡ್, ಮಹದೇವ್, ಬಸವರಾಜೇಗೌಡ, ರೇಣುಕಾ, ವಿಷಕಂಠಪ್ಪ, ಕಲ್ಕುಣಿಕೆ ರಾಘು, ಎಚ್.ಎಸ್. ಕುಮಾರ್, ನೇರಳಕುಪ್ಪೆಮಹದೇವ್, ಕೊಳಗಟ್ಟಕೃಷ್ಣ, ಮಲ್ಲೇಶ ಇದ್ದರು.

ಶಾಸಕ ದರ್ಶನ್ ಧ್ರುವನಾರಾಯಣ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಲ್ಕುಂಡಿ: ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವ ಡಿ.ಕೆ.ಶಿವಕುಮಾರ್ ಅವರು ತಮ್ಮ ಸಂಪುಟದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಗ್ಯಾರಂಟಿ ಸಮಿತಿಯ ಸದಸ್ಯ ಮಡುವಿನಹಳ್ಳಿ ಸತೀಶ್ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಂಪುಟ ವಿಸ್ತರಣೆ ವೇಳೆ ಯುವಕರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಯುವ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ತಮ್ಮ ತಂದೆಯಂತೆ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಜನರ ಒಡನಾಟ ಹಾಗೂ ಕಷ್ಟ ಸುಖಗಳಲ್ಲಿ ಸ್ಪಂದಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ದಿ.ಆರ್ ಧ್ರುವನಾರಾಯಣ್ ಅವರು ಜನ ಮೆಚ್ಚಿದ ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದರು. ಅವರು ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಯಾಗಿದ್ದರು. ಇದನ್ನು ಅರಿತು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಿದರೆ ಚಾಮರಾಜನಗರ ಹಾಗೂ ಮೈಸೂರು ಭಾಗದಲ್ಲಿ ಹೆಚ್ಚು ಸಂಘಟನೆಯಾಗುತ್ತದೆ ಆದ್ದರಿಂದ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ

ಅಕ್ರಮ ಸುಂಕ ವಸೂಲಿ: ಇಂದು ಸಭೆ

ತಿ.ನರಸೀಪುರ, ಜೂ.13– ತಾಲೂಕಿನ ಯಡದೊರೆ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ಪ್ಲಾಜಾದಲ್ಲಿ ಅಕ್ರಮವಾಗಿ ಸುಂಕ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ, ಟೋಲ್ ತೆರವಿಗೆ ಆಗ್ರಹಿಸಿ ಹೋರಾಟವನ್ನು ನಡೆಸಲು ಪಟ್ಟಣದ ನಂಜನಗೂಡು ರಸ್ತೆಯಲ್ಲಿರುವ ಎಂ.ಮಹದೇವಪ್ಪ ಸ್ಮಾರಕ ಭವನದಲ್ಲಿ ಜೂ.14 ರಂದು ಬೆಳಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಹೋರಾಟವನ್ನು ರೂಪಿಸಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಸಭೆಯನ್ನು ಕರೆದಿರುವುದರಿಂದ ತಾಲೂಕಿನ ವಾಹನಗಳ ಮಾಲೀಕರು, ಚಾಲಕರು ಗ್ರಾಮದ ನಿವಾಸಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಲಹೆ ಸೂಚನೆಗಳನ್ನು ನೀಡಬೇಕೆಂದು ಹೋರಾಟ ಸಮಿತಿಯ ಸಂಚಾಲಕ ಹೆಚ್.ಆರಿಫ್ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಎರಡು ಬಾರಿ ಗೆದ್ದಿರುವ ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡಲು ಆಗ್ರಹ



ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಜಿಲ್ಲಾ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಮಾತನಾಡುತ್ತಿರುವುದು.

ಹೆಚ್.ಡಿ.ಕೋಟೆ: ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ ಈ 5 ಜಿಲ್ಲೆಯ ನಾಯಕ ಸಮಾಜದ ಏಕೈಕ ಶಾಸಕ ಹಾಗೂ ಎರಡು ಬಾರಿ ಗೆದ್ದಿರುವ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮೈಸೂರು ಚಾಮರಾಜನಗರ ಎಸ್ ಚಿಕ್ಕಮಾದು ಅಭಿಮಾನಿ ಬಳಗದ ಜಿಲ್ಲಾ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಶೇಕಡ 70ರಷ್ಟು ನಾಯಕ ಸಮುದಾಯವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿತ್ತು, ಈ ಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷದಿಂದಲೇ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್‌ನ 15 ಶಾಸಕರು ಆಯ್ಕೆಯಾ ಗಿದ್ದು, ಇಬ್ಬರು ಮಾತ್ರ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾ ಗಿದ್ದಾರೆ. ಆದರೆ ಇದುವರೆಗೂ ಯಾವುದೇ ಶಾಸಕರಿಗೂ ಸಚಿವ ಸ್ಥಾನ ದೊರಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗೌರವ ಅಧ್ಯಕ್ಷ ದೊರೆಸ್ವಾಮಿ ನಾಯಕ, ಕಾರ್ಯದರ್ಶಿ ಕೆ.ಎನ್.ಮಹೇಶ್ ನಾಯಕ, ಎಸ್ ಸಿ, ಎಸ್.ಟಿ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರಾದ ತಾಲೂಕು ನಾಯಕ ಸಂಘದ ಗೌರವ ಅಧ್ಯಕ್ಷ ಮರಿತಿಮ್ಮನಾಯಕ, ಆಗತ್ತೂರು ಅಂಕನಾಯಕ, ಇಟ್ನ ಬೆಟ್ಟನಾಯಕ, ಬಿ.ಪಿ.ಸಿದ್ದನಾಯಕ, ಯಜಮಾನ ನಾಗರಾಜು, ಅಂಕನಾಯಕ, ಸದಸ್ಯರಾದ ಸಣ್ಣಸ್ವಾಮಿ ನಾಯಕ, ದೊಡ್ಡವೀರನಾಯಕ, ಬೈರನಾಯಕ, ಮಣಿ, ಜಿನ್ನಹಳ್ಳಿ ಶ್ರೀನಿವಾಸ, ರಾಮನಾಯಕ, ಜಯಪ್ಪ, ಗೋವಿಂದ, ಚಲುವರಾಜು, ನಾಗನಾಯಕ, ನಿಂಗರಾಜು, ಕಾಳಿಂಗನಾಯಕ, ಚನ್ನನಾಯಕ, ರವಿಶಂಕರ್ , ನಿಂಗನಾಯಕ, ಮಾದೇವ, ಗೋಪಾಲ, ಕುಮಾರ್, ಕೆ.ಟಿ. ಕಮಲಾಕ್ಷ, ಚಲುವ, ಬೀರೇಶ, ಎಸ್.ಶಿವರಾಜು, ಉಮೇಶ್, ಜವರನಾಯಕ, ಕೃಷ್ಣ ಮೂರ್ತಿ, ಇದ್ದರು.

“ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿಗಳಾದ ರಣಧೀಪ್ ಸಿಂಗ್ ಸುರ್ಜೆವಾಲ, ಕೆ.ಸಿ. ವೇಣುಗೋಪಾಲ್, ಪಕ್ಷದ ವರಿಷ್ಠರು, ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಲೇಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ನಾಯಕ ಸಮುದಾಯದ ವತಿಯಿಂದ ಉಗ್ರ ಪ್ರತಿಭಟನೆ ಮಾಡಲಾಗುವುದು.

– ಕ್ಯಾತನಹಳ್ಳಿ ನಾಗರಾಜು.

ಶ್ರೀಕಂಠಸ್ವಾಮಿ ನಿಧನ



ತಿ.ನರಸೀಪುರ ಜೂ 13– ಮೈಸೂರಿನ ಎನ್.ಆರ್ ಮೊಹಲ್ಲಾದ ನಿವಾಸಿ ಆಹಾರ ಮತ್ತು ನಾಗರಿಕ ಸರಬರಾಜು ನಿವೃತ್ತ ಉಪ ನಿರ್ದೇಶಕರಾದ ಜಿ.ಶ್ರೀಕಂಠಸ್ವಾಮಿ(89) ಶನಿವಾರ ಸಂಜೆ ನಿಧನರಾದರು.

ದಿವಂಗತರು ಇಬ್ಬರು ಪುತ್ರರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಆಗಲಿದ್ದು ಇವರ ಅಂತ್ಯಕ್ರಿಯೆ ತಿ.ನರಸೀಪುರ ತಾಲೂಕಿನ ವೀರಪ್ಪ ಒಡೆಯರ ಹುಂಡಿ ಗ್ರಾಮದಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ. ಎಂಆರ್‌ಸಿಗೆ ಮೃತರ ನೇತ್ರದಾನವನ್ನು ಮಾಡಲಾಯಿತು.

ಸ್ವದೇಶಿ ದರ್ಶನ್–2.0 ಯೋಜನೆಯಡಿ ಪ್ರವಾಸಿಗರಿಗೆ ಅನುಕೂಲವಾಗಿ ಮೈಸೂರಿನ ಐದು ಕಡೆ ಟಾಂಗಾ ನಿಲ್ದಾಣ

● ಟಿಕೆಟ್ ಕೌಂಟರ್‌ನಲ್ಲಿ ಏಕ ರೂಪದ ದರ ನಿಗದಿಗೆ ನಿರ್ಧಾರ ● ಎರಡು ತಿಂಗಳಲ್ಲಿ ಈ ಐದು ಕಡೆ ಕಾಮಗಾರಿ ಪೂರ್ಣ

ಮೈಸೂರು, ಜೂ.13(ಎಂಟಿವೈ)– ಮೈಸೂರಲ್ಲಿ ಪಾರಂಪರಿಕ ಟಾಂಗಾ ಸವಾರಿ ಉತ್ತೇಜಿಸುವುದರೊಂದಿಗೆ ಪ್ರವಾಸಿಗರಿಗೆ ಏಕರೂಪದ ದರ ನಿಗದಿ ಮಾಡಿ, ಸುಸಜ್ಜಿತ ಟಾಂಗಾ ನಿಲ್ದಾಣ ಸ್ಥಾಪಿಸುವ 'ಟಾಂಗಾ ಎಕ್ಸ್‌ಪೀರಿಯನ್ಸ್ ಜೋನ್' ಯೋಜನೆಗೆ ಎದುರಾಗಿದ್ದ ಅಡೆತಡೆ ನಿವಾರಣೆಯಾಗಿದ್ದು, ಎರಡು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ.

ಪ್ರವಾಸೋದ್ಯಮ ಇಲಾಖೆಯ 'ಸ್ವದೇಶಿ ದರ್ಶನ್–2.0' ಯೋಜನೆಯಡಿ 2.71 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ ಐದು ಪ್ರತ್ಯೇಕ ಸ್ಥಳದಲ್ಲಿ ಸುಸಜ್ಜಿತ ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ಸೇರಿ ಇನ್ನಿತರ ಸೌಲಭ್ಯವುಳ್ಳ 'ಟಾಂಗಾ ಎಕ್ಸ್‌ಪೀರಿಯನ್ಸ್ ಜೋನ್' ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಉದ್ದೇಶಿತ ಯೋಜನೆಯಂತೆ ಐದು ಸ್ಥಳದಲ್ಲಿ ಟಾಂಗಾ ನಿಲ್ದಾಣ ಮತ್ತು ಟಿಕೆಟ್ ಕೌಂಟರ್, ಅದರಲ್ಲಿ ಎರಡು ಕಡೆ ನಿಲ್ದಾಣ, ಟಿಕೆಟ್ ಕೌಂಟರ್‌ನೊಂದಿಗೆ ಕುದುರೆ ಕೊಟ್ಟಿಗೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಕಾಮಗಾರಿ ಆರಂಭವಾಗಿದ್ದು, ಶೀಘ್ರದಲ್ಲೇ ಪ್ರವಾಸಿಗರನ್ನು ಟಾಂಗಾ ಸವಾರಿ ಆಕರ್ಷಿಸಲಿದೆ.

ಎಲ್ಲೆಲ್ಲಿ: ಸ್ವದೇಶಿ ದರ್ಶನ್ 2.0 ಯೋಜನೆಯಡಿ ಮೈಸೂರು ಅರಮನೆಯ ಬಲರಾಮ ದ್ವಾರದ ಮುಂಭಾಗದ ಡಾ.ರಾಜ್‌ಕುಮಾರ್ ಪಾರ್ಕ್ ಬಳಿ, ಗನ್‌ಹೌಸ್ ಸಮೀಪ ಕಾಡಾ ಕಚೇರಿಯ ಇಂದಿರಾ ಕ್ಯಾಂಟೀನ್ ಬಳಿ ಹಾಗೂ ಮೃಗಾಲಯದ ಎದುರು ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ಸ್ಥಾಪಿಸಲಾಗುತ್ತದೆ. ಇದರೊಂದಿಗೆ ಗ್ರಾಮಾಂತರ ಬಸ್ ನಿಲ್ದಾಣದ ಎದುರು ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡಂತೆ ಹಾಗೂ ಕುಕ್ಕರಹಳ್ಳಿ ಕೆರೆ ಸಮೀಪದ ದೋಬಿಘಾಟ್ ಬಳಿ ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ಹಾಗೂ ಕುದುರೆ ಕಟ್ಟಲು ಕೊಟ್ಟಿಗೆ ನಿರ್ಮಿಸಲಾಗುತ್ತದೆ.

ಜಾಗದ ಸಮಸ್ಯೆ: ಎರಡು ತಿಂಗಳ ಹಿಂದೆಯೇ 'ಟಾಂಗಾ ಎಕ್ಸ್‌ಪೀರಿಯನ್ಸ್ ಜೋನ್' ಯೋಜನೆ ಕಾಮಗಾರಿ ಆರಂಭವಾಗಬೇಕಾಗಿತ್ತು. ಆದರೆ, ಮೂರು ಸ್ಥಳದಲ್ಲಿ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಪರ್ಯಾಯ ಸ್ಥಳದಲ್ಲಿ ಟಾಂಗಾ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.



ಸಬರ್ಬನ್ ಬಸ್ ನಿಲ್ದಾಣದ ಬಳಿ ಟಾಂಗಾ ನಿಲ್ದಾಣ, ಕುದುರೆ ಕೊಟ್ಟಿಗೆ ನಿರ್ಮಿಸಿರುವುದು.

ಪರ್ಯಾಯ ಸ್ಥಳ: ಅರಮನೆ ಮುಂಭಾಗದ ಚಾಮರಾಜ ಸರ್ಕಲ್ ಸಮೀಪ ಪುರಭವನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಪಾದಚಾರಿ ಮಾರ್ಗದಲ್ಲಿಯೇ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಕಾಮಗಾರಿ ಆರಂಭಿಸಲಾಗಿತ್ತು. ಪಾರಂಪರಿಕ ಕಟ್ಟಡ, ಪಾರಂಪರಿಕ ವೃತ್ತ ಮತ್ತು ರಸ್ತೆಯಲ್ಲಿ ಶಾಶ್ವತ ನಿರ್ಮಾಣಕ್ಕೆ ಅವಕಾಶ ಇಲ್ಲದ ಕಾರಣ, ಪಾದಚಾರಿ ಮಾರ್ಗದಲ್ಲಿ ಟಾಂಗಾ ನಿಲ್ದಾಣ ಕಾಮಗಾರಿಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದರಿಂದ ಇಲ್ಲಿ ಹಾಕಿದ್ದ ಅಡಿಪಾಯವನ್ನು ತೆರವುಗೊಳಿಸಲಾಗಿತ್ತು.

ಇದೀಗ ಪರ್ಯಾಯವಾಗಿ ಚಾಮರಾಜ ವೃತ್ತದ ಡಾ. ರಾಜ್‌ಕುಮಾರ್ ಪಾರ್ಕ್‌ಗೆ ಹೊಂದಿ ಕೊಂಡಂತೆ ಟಾಂಗ ನಿಲ್ದಾಣ ಹಾಗೂ ಟಿಕೆಟ್ ಕೌಂಟರ್ ನಿರ್ಮಿಸಲು ಸಮ್ಮತಿಸಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುತ್ತದೆ.

ಅರಮನೆಯ ವರಹಾ ದ್ವಾರದ ಮುಂಭಾಗದ ಗನ್ ಹೌಸ್ ಬಳಿ ಮತ್ತೊಂದು ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಉದ್ದೇಶಿಸಲಾಗಿತ್ತು. ಆದರೆ, ರಾಜವಂಶಸ್ಥರು ಗನ್‌ಹೌಸ್‌ನಲ್ಲಿ ಕಾರ್ಯಕ್ರಮ ನಡೆಸುವ ಉದ್ದೇಶ ವ್ಯಕ್ತಪಡಿಸಿ, ಪರ್ಯಾಯ ಸ್ಥಳದಲ್ಲಿ ಟಾಂಗಾ ನಿಲ್ದಾಣ ಸ್ಥಾಪಿಸುವಂತೆ ಸಲಹೆ ನೀಡಿದ್ದರು. ಇದರಿಂದ ಗನ್‌ಹೌಸ್ ಎದುರಿನ ಕಾಡ ಕಚೇರಿ ಆವರಣದ ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿ ಟಾಂಗಾ ನಿಲ್ದಾಣ ಮತ್ತು ಟಿಕೆಟ್ ಕೌಂಟರ್ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದ್ದು, ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಅಂಡರ್ ಪಾಸ್‌ನಿಂದ ಸ್ಥಳಾಂತರ: ಕುಕ್ಕರಹಳ್ಳಿ ಕೆರೆ ಗೇಟ್ ಬಳಿ ಈಗಾಗಲೇ ಇರುವ ಟಾಂಗಾ ನಿಲ್ದಾಣ, ಕುದುರೆ ಕೊಟ್ಟಿಗೆಯನ್ನು ನವೀಕರಿಸಲು ಉದ್ದೇಶಿಸಲಾಗಿತ್ತು. ಆದರೆ, ರೈಲ್ವೆ ಅಂಡರ್‌ಪಾಸ್ ನಿರ್ಮಾಣದ ಹಿನ್ನೆಲೆಯಲ್ಲಿ ಅಡಚಣೆಯಾಗುವ ಸಂಭವ ಇರುವುದರಿಂದ ಆ ನಿಲ್ದಾಣ ಮತ್ತು ಕೊಟ್ಟಿಗೆಯನ್ನು ಸ್ಥಳಾಂತರಿಸಬೇಕಾದ ಅನಿವಾರ್ಯತೆ ಇದೆ. ಇದನ್ನು ಮನಗಂಡು ಪ್ರವಾಸೋದ್ಯಮ ಇಲಾಖೆ ಕುಕ್ಕರಹಳ್ಳಿ ಕೆರೆ ಬಳಿ ಬೋಗಾದಿ ರಸ್ತೆಯಲ್ಲಿರುವ ದೋಬಿಘಾಟ್ ಪಕ್ಕದಲ್ಲಿ ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ಹಾಗೂ ಕುದುರೆ ಕೊಟ್ಟಿಗೆ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆ. ಸದರಿ ಜಾಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ಕ್ಕೆ ಸೇರಿದ್ದು, ಎಂಡಿಎ ಜೊತೆ ಚರ್ಚಿಸಲಾಗಿದೆ. ಕೆಲವೇ ದಿನಗಳಲ್ಲಿ ಈ ಸ್ಥಳ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ.

ಸಬರ್ಬನ್ ಬಸ್ ನಿಲ್ದಾಣದ ಮುಂದೆ ಕಾಮಗಾರಿ ಪೂರ್ಣ: ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಮುಂದೆ ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡಂತೆ ಈ ಹಿಂದಿನಿಂದಲೂ ಇದ್ದ ಟಾಂಗಾ ನಿಲ್ದಾಣ ಮತ್ತು ಕುದುರೆ ಕೊಟ್ಟಿಗೆಯನ್ನು ನವೀಕರಿಸಲಾಗಿದೆ. ಆಧುನಿಕ ಸ್ಪರ್ಶ ನೀಡಿದ್ದು, ನೋಡುಗರ ಗಮನ ಸೆಳೆಯುತ್ತಿದೆ. ಟಾಂಗಾ ನಿಲ್ದಾಣದ ಮುಂದೆ ಇದ್ದ ಜಾಹೀರಾತು ಫಲಕವನ್ನು ಸ್ಥಳಾಂತರಿಸಲಾಗಿದ್ದು, ಇದೀಗ ಹೊಸ ಟಾಂಗಾ ನಿಲ್ದಾಣ ಎಲ್ಲರನ್ನು ಆಕರ್ಷಿಸುತ್ತಿದೆ.

ಮತ್ತಿ ಮರದಲ್ಲಿ ನಿರ್ಮಾಣ: ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ಅನ್ನು ಮತ್ತಿ ಮರದಲ್ಲಿ ನಿರ್ಮಿಸಲಾಗುತ್ತಿದೆ. ಅದರಲ್ಲಿ ಟಾಂಗಾ ಸವಾರಿಗೆ ಬರುವ ಪ್ರವಾಸಿಗರು ಕುಳಿತುಕೊಳ್ಳಲು ಆಸನದ ವ್ಯವಸ್ಥೆಯನ್ನೂ ಮಾಡಲಾಗಿದೆ. ಮರದಲ್ಲಿ ಮಾಡಿರುವ ಕೌಂಟರ್ ಸ್ಥಳಾಂತರಿಸಬಹುದಾಗಿದೆ.

ಏಕರೂಪ ದರ ನಿಗದಿ



ಮೈಸೂರಿಗೆ ಬರುವ ಪ್ರವಾಸಿಗರಿಂದ ಹೆಚ್ಚು ಹಣ ಪಡೆಯಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿತ್ತು. 'ಟಾಂಗಾ ಎಕ್ಸ್‌ಪೀರಿಯನ್ಸ್ ಜೋನ್' ಯೋಜನೆಯಡಿ ಇದೀಗ ಏಕರೂಪದ ಟಿಕೆಟ್ ದರ ನಿಗದಿ ಮಾಡಲಾಗುತ್ತದೆ. ಪ್ರೀಪೇಯ್ಡ್ ಕೌಂಟರ್ ಮಾದರಿಯಲ್ಲಿ ಟಿಕೆಟ್ ಕೌಂಟರ್ ತೆರೆದು ಪ್ರವಾಸಿಗರು ಟಿಕೆಟ್ ಪಡೆದು ಟಾಂಗ ಸವಾರಿ ಮಾಡಬಹುದಾಗಿದೆ. ಈ ಯೋಜನೆಯಡಿ ನಿರ್ಮಿಸುತ್ತಿರುವ ಟಾಂಗ ನಿಲ್ದಾಣ ಮತ್ತು ಕುದುರೆ ಕೊಟ್ಟಿಗೆಯನ್ನು ಕಾಲ ಕಾಲಕ್ಕೆ ಸ್ವಚ್ಛಗೊಳಿಸುವುದಕ್ಕೂ ಸೂಚನೆ ನೀಡಲಾಗಿದೆ. ಗುತ್ತಿಗೆ ಪಡೆದ ಸಂಸ್ಥೆ ಮುಂದಿನ ಮೂರು ವರ್ಷ ಅದನ್ನು ನಿರ್ವಹಣೆ ಮಾಡಿ, ಸ್ವಚ್ಛತೆ ಕಾಪಾಡಿಕೊಳ್ಳಲಿದೆ.

- ಡಾ. ಎಂ.ಪ್ರಭುಸ್ವಾಮಿ, ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಮನೆಯ ಕಿಟಕಿ ಗ್ರಿಲ್ ಮೀಟಿ ಐದೂವರೆ ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

ಮೈಸೂರಿನ ದಟ್ಟಗಳ್ಳಿ ರೋಟರಿ ಶಾಲೆ ಬಳಿ ಘಟನೆ

ಮೈಸೂರು, ಜೂ.13(ಬಿಎಲ್‌ಯು)– ಮನೆ ಕಿಟಕಿಯ ಕಬ್ಬಿಣದ ಗ್ರಿಲ್ ಮೀಟಿರುವ ಖದೀಮರು ಐದೂವರೆ ಲಕ್ಷ ವಮೌಲ್ಯದ ಚಿನ್ನಾಭ'ರಣ ದೋಚಿರುವ ಘಟನೆ ಮೈಸೂರಿನ ದಟ್ಟಗಳ್ಳಿಯಲ್ಲಿ ಸಂಭವಿಸಿದೆ.

ಮೈಸೂರಿನ ದಟ್ಟಗಳ್ಳಿ ರೋಟರಿ ಶಾಲೆ ಬಳಿಯ ಶ್ಯಾಮಲಾ (ಹೆಸರು ಬದಲಾಯಿಸಲಾಗಿದೆ) ಅವರ ಮನೆಯಲ್ಲಿ ಈ ಕಳ್ಳತನ ನಡೆದಿದೆ.

ವೃದ್ಧರಾದ ಶ್ಯಾಮಲಾ ಅವರು ಅನಾರೋಗ್ಯದ ಕಾರಣ ಕಳೆದ ಒಂದೂವರೆ ತಿಂಗಳ ಹಿಂದೆ ಮನೆಗೆ ಬೀಗ ಹಾಕಿ ಬೆಂಗಳೂರಿನ ಮಗನ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಈ ಮಧ್ಯೆ ಮೇ 31 ರಂದು ಮನೆಗೆ ಬಂದು ಕೆಲವು ಸಮಯ ಕಳೆದು ವಿಜಯನಗರದ ಮಗಳ ಮನೆಗೆ ಹೋಗಿ ತರುವಾಯ ಮತ್ತೆ ಬೆಂಗಳೂರಿಗೆ ತೆರಳಿದ್ದರು.

ಹಲವು ದಿನಗಳಿಂದ ಮನೆಗೆ ಬೀಗ ಹಾಕಿರುವುದನ್ನು ಹೊಂಚು ಹಾಕಿ ಖದೀಮರು ಗಮನಿಸಿದ್ದಾರೆ. ಮೇ 31 ರಿಂದ ನಿನ್ನೆವರೆಗೆ ಯಾವುದೋ ಒಂದು ದಿನ ಕಳ್ಳರು ಮನೆಯ ಕಿಟಕಿ ಗ್ರಿಲ್ ಮೀಟಿ ಒಳ ಹೊಕ್ಕಿ, ರೂಂನ ಕಬೋರ್ಡ್‌ನಲ್ಲಿದ್ದ ಐದೂವರೆ ಲಕ್ಷ ಮೌಲ್ಯದ 40 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆ.

ಅಸಲಿ ಚಿನ್ನಾಭರಣದ ಜೊತೆಗೆ ಅಲ್ಲಿ ರೋಲ್ಡ್ ಗೋಲ್ಡ್ ಆಭರಣಗಳೂ ಇದ್ದವು. ಕಳ್ಳರು ಆ ಆಭರಣವನ್ನು ಕದ್ದೊಯ್ದಿದ್ದಾರೆ.

ಶ್ಯಾಮಲಾ ಅವರು ನಿನ್ನೆ ಮನೆಗೆ ಬಂದು ನೋಡಿದಾಗ ಚಿನ್ನಾಭರಣ ಕಳ್ಳತನ ಆಗಿರುವುದು ಕಂಡು ಬಂದಿದೆ.

ಈ ಸಂಬಂಧ ಅವರು ಕುವೆಂಪುನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಇವರು ತಾವು ಮನೆಯಲ್ಲಿ ಇಲ್ಲದಿರುವ ವಿಚಾರವನ್ನು ಪೊಲೀಸ್ ಠಾಣೆಗೆ ತಿಳಿಸಿದ್ದರೆ, ಲಾಕ್ಡ್ ಹೌಸ್ ಬೀಟ್‌ನಡಿ ಎಚ್ಚರಿಕೆ ವಹಿಸುತ್ತಿದ್ದರು. ಆದರೆ, ಈ ವಿಚಾರವೇ ಶ್ಯಾಮಲಾ ಅವರಿಗೆ ಅರಿವಿಲ್ಲವೆಂದು ಕಾಣುತ್ತದೆ.

ವಿದ್ಯುತ್ ಸಾರ್ವಜನಿಕ ಆಸ್ತಿ; ಖಾಸಗೀಕರಣ ಬೇಡ

ರೈತ ಕಲ್ಯಾಣ ರಾಜ್ಯಾಧ್ಯಕ್ಷ ಚಂದನ್‌ಗೌಡ ಆಗ್ರಹ



ಮೈಸೂರು: ವಿದ್ಯುತ್ ಸಾರ್ವಜನಿಕ ಆಸ್ತಿ. ಆದ್ದರಿಂದ ಇದನ್ನು ಯಾವುದೇ ಕಾರಣಕ್ಕೂ ಖಾಸಗೀಕರಣ ಮಾಡಕೂಡದು ಎಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕರ್ನಾಟಕ ವಿದ್ಯುತ್‌ಗೆ ಭಾರತ ದೇಶದ ಇಂಧನ ಕ್ಷೇತ್ರದಲ್ಲಿ ಹೊಸ ಕ್ರಾಂತಿ ಸೃಷ್ಟಿಸಿದ ಇತಿಹಾಸವಿದೆ. ರಾಜ್ಯದ ಜನತೆಗೆ ಸಮಂಜಸವಾಗಿ ವಿದ್ಯುತ್ ಪೂರೈಸುವುದು ಸರ್ಕಾರದ ಅವಿಭಾಜ್ಯ ಮೂಲಭೂತ ಕರ್ತವ್ಯವಾಗಿದೆ ಎಂದಿದ್ದಾರೆ.

ಕರ್ನಾಟಕ ವಿದ್ಯುತ್ ಇಲಾಖೆ ಸಾರ್ವಜನಿಕ ಆಸ್ತಿಯಾಗಿದ್ದು, ಸಾರ್ವಜನಿಕರ ತೆರಿಗೆ ಹಣದಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಪ್ರಮುಖ ಉದ್ದೇಶ ರಾಜ್ಯದ ಎಲ್ಲ ವರ್ಗದ ಜನತೆಗೆ ಕೈಗೆಟಕುವ ಬೆಲೆಯಲ್ಲಿ ವಿದ್ಯುತ್ ಸರಬರಾಜು ಮಾಡುವುದು ಹಾಗೂ ರಾಜ್ಯದ ಜನತೆಯ ಅಭಿವೃದ್ಧಿಯ ಜವಾಬ್ದಾರಿ ಆದ್ಯತೆಯಾಗಿದೆ.

ಪ್ರಸ್ತುತ ಕರ್ನಾಟಕ ವಿದ್ಯುತ್ ಇಲಾಖೆಯು ಲಾಭದಾಯಕವಾಗಿದ್ದು, ರಾಜ್ಯದಲ್ಲಿ ವಿದ್ಯುತ್ ಇಲಾಖೆಯು ರಾಜ್ಯದ ವಿದ್ಯುತ್ ಅಗತ್ಯವನ್ನು ಪೂರೈಸಿಕೊಳ್ಳುವುದರ ಜೊತೆಗೆ ಹೆಚ್ಚುವರಿ ವಿದ್ಯುತ್ತನ್ನು ರಾಷ್ಟ್ರೀಯ ಗ್ರೀಡ್‌ಗೆ ಮಾರಾಟ ಮಾಡಿ ಉತ್ತಮ ಆದಾಯವನ್ನು ಗಳಿಸುತ್ತಿದೆ. ಲಾಭದಾಯಕವಾಗಿ ಅಗತ್ಯಕ್ಕೆ ತಕ್ಕಂತೆ ವಿದ್ಯುತ್ ಪೂರೈಸುವ ಸಾಮರ್ಥ್ಯವನ್ನು ಹೊಂದಿರುವ ಇಲಾಖೆಯನ್ನ ಏಕಾಏಕಿ ಬಂಡವಾಳ ಶಾಹಿಗಳ ಉನ್ನಾರದಿಂದ ಖಾಸಗಿಕರಣ ಮಾಡುವ ಚಿಂತನೆ ಸರ್ಕಾರಕ್ಕೆ ಶೋಭೆ ತರುವುದಿಲ್ಲ ಎಂದು ಆಕ್ಷೇಪಿಸಿದ್ದಾರೆ.

ಹೆಚ್‌ಎಂಟಿಗೆ ಶೀಘ್ರವೇ ಮರುಜೀವ

ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ವಿಶ್ವಾಸ



ಬೆಂಗಳೂರು: ಭಾರತದ ಪ್ರತಿಷ್ಠಿತ ಉತ್ಪಾದನಾ ಕಂಪನಿಗಳಲ್ಲೊಂದಾಗಿದ್ದು, ಇದೀಗ ಸಂಕಷ್ಟದಲ್ಲಿರುವ ಹಿಂದೂಸ್ತಾನ್ ಮಷೀನ್ ಟೂಲ್ಸ್ (ಎಚ್‌ಎಂಟಿ)ಗೆ ಕಾಯಕಲ್ಪ ನೀಡುವ ಯೋಜನೆ ಅಂತಿಮ ಹಂತದಲ್ಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬೆಂಗಳೂರಿನ ಕೇಂದ್ರೀಯ ಕೈಗಾರಿಕಾ ಉತ್ಪಾದನ ಸಂಸ್ಥೆ (ಇಎಂಟಿಐ) 65ನೇ ಸಂಸ್ಥಾಪನ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಉತ್ಪಾದನೆ ಆಧರಿತ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಪ್ರಧಾನಿ ನರೇಂದ್ರ ಮೋದಿಯವರು ದೂರದೃಷ್ಟಿ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಎಚ್‌ಎಂಟಿ ಕಂಪನಿಗೆ ಮರುಜೀವ ನೀಡುವ ಯೋಜನೆ ಅಂತಿಮ ಅಂತದಲ್ಲಿ ಇದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಉತ್ಪಾದನೆ ಆಧಾರಿತ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರ ಅಭೂತಪೂರ್ವ ಒತ್ತು ನೀಡಿದೆ ಎಂದರು.

ಮೋದಿ ಸರ್ಕಾರ ಉತ್ಪಾದನೆ ಮತ್ತು ಸಂಶೋಧನಾ ಪರಿಸರ ವ್ಯವಸ್ಥೆ ಗಳನ್ನು ಬಲಪಡಿಸುವತ್ತ ಸರ್ಕಾರ ಗಮನ ಹರಿಸಿದೆ. ಈ ಪ್ರಯತ್ನಗಳು ಕೈಗಾರಿಕಾ ಬೆಳ ವಣಿಗೆಯನ್ನು ವೇಗಗೊಳಿಸಿವೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಉದ್ಯೋಗಾವಕಾಶಗಳನ್ನು ಸೃಷ್ಟಿಸಿವೆ ಎಂದು ಅವರು ಹೇಳಿದರು.

ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಪದವೀಧರರಿಗೆ ಉದ್ಯೋಗಾವಕಾಶಗಳ ಬಗ್ಗೆ ಕಳವಳವಿರುವ ಸಮಯದಲ್ಲಿ, ತಾಂತ್ರಿಕವಾಗಿ ಅರ್ಹ ಯುವಕರಿಗೆ ಉತ್ತಮ ಗುಣಮಟ್ಟದ, ಕೌಶಲ್ಯ ಆಧಾರಿತ ಉದ್ಯೋಗವನ್ನು ಉತ್ಪಾದಿಸುವ ದೃಢವಾದ ಪರಿಸರ ವ್ಯವಸ್ಥೆಯನ್ನು ರಚಿಸಲು ಸರ್ಕಾರ ಕೆಲಸ ಮಾಡಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಉತ್ಪಾದನಾ ತಂತ್ರಜ್ಞಾನ ಸಂಸ್ಥೆಯನ್ನು ಭಾರತದ ಅತ್ಯಂತ ವಿಶಿಷ್ಟ ಕೈಗಾರಿಕಾ ಸಂಶೋಧನಾ ಸಂಸ್ಥೆಗಳಲ್ಲಿ ಒಂದೆಂದು ಬಣ್ಣಿಸಿದ ಕುಮಾರಸ್ವಾಮಿ, ಏರೋಸ್ಪೇಸ್ ಮತ್ತು ರಕ್ಷಣಾ ಸೇರಿದಂತೆ ಹಲವಾರು ಕ್ಷೇತ್ರಗಳಿಗೆ ಸುಧಾರಿತ ತಂತ್ರಜ್ಞಾನಗಳು ಮತ್ತು ಉಪಕರಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸಂಸ್ಥೆ ಕೊಡುಗೆ ನೀಡುತ್ತಿದೆ ಎಂದು ಹೇಳಿದರು.

ಬೆಂಗಳೂರು ಸೇರಿದಂತೆ ಭಾರತದ ವಿವಿಧ ಭಾಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಎಚ್‌ಎಂಟಿಯ ಎಲ್ಲ ಘಟಕಗಳನ್ನೂ ಪುನರುಜ್ಜೀವನಗೊಳಿಸುವ ಉದ್ದೇಶವನ್ನು ಕೇಂದ್ರ ಸರಕಾರ ಹೊಂದಿದೆ. ಕಳೆದ 2 ವರ್ಷಗಳಿಂದ ಎಚ್‌ಎಂಟಿ ಕಂಪನಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಸರ್ಕಾರ ಕೆಲಸ ಮಾಡುತ್ತಿದೆ.

ನೀತಿ ಆಯೋಗದ ಸದಸ್ಯರಾದ ಡಾ. ವಿ. ಕೆ. ಸಾರಸ್ವತ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ವರದಿ ಪಡೆದುಕೊಳ್ಳಲಾಗಿದೆ. ಸಮಿತಿಯು ಮೌಲಿಕವಾದ ಅನೇಕ ಶಿಫಾರಸು ಗಳನ್ನು ಮಾಡಿದೆ. ಆ ಆಧಾರದ ಮೇಲೆ ಕಂಪೆನಿಯನ್ನು ಮೇಲೆತ್ತುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಆದರ್ಶ ಸೇವಾ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.13– ಮೈಸೂರಿನ ಆದರ್ಶ ಸೇವಾ ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆ ದಿನಾಂಕವನ್ನು ವಿಸ್ತರಿಸಲಾಗಿದೆ. ಪ್ರಸಕ್ತ ವರ್ಷ ಪ್ರಕಟಗೊಂಡ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಹಾಗೂ ಅಂತಿಮ ಡಿಪ್ಲೋಮಾ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚಿನ ಅಂಕ ಮತ್ತು ಎಲ್ಲಾ ರೀತಿಯ ಅಂತಿಮ ವರ್ಷದ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದಿರುವ ಸಂಘದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಸಂಘದ ಕಛೇರಿಯಲ್ಲಿ ಸಂಜೆ 5ರಿಂದ 6 ಗಂಟೆಯ ಅವಧಿಯಲ್ಲಿ ಅರ್ಜಿ ಪಡೆದು, ದೃಢೀಕೃತ ಅಂಕಪಟ್ಟಿ, ಟಿಸಿ ಇತರ ದಾಖಲಾತಿಗಳೊಂದಿಗೆ ಜೂ.30ರ ಸಂಜೆ 6 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ.ಸಂ.9187469464 / 9480166274 ಸಂಪರ್ಕಿಸಬಹುದು ಎಂದು ಸಂಘದ ಕಾರ್ಯದರ್ಶಿ ಆರ್.ರಾಮಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಧ್ಯಸ್ಥಿಕೆಯ ಪರ್ಯಾಯ ಕಾನೂನು ವೇದಿಕೆಗಳು ನ್ಯಾಯ ಪಡೆಯುವ ಮಾರ್ಗವನ್ನು ಸುಲಭಗೊಳಿಸುತ್ತಿವೆ

ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ವಿಚಾರ ಸಂಕಿರಣ ಉದ್ಘಾಟಿಸಿ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅಭಿಪ್ರಾಯ



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಪ್ರೊ.ಪಿ.ಎಂ.ಚಿಕ್ಕಬೋರಯ್ಯ ನೆನಪಿನಾರ್ಥ ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಗಣ್ಯರೊಡಗೂಡಿ ಉದ್ಘಾಟಿಸಿದರು.

ಮೈಸೂರು, ಜೂ.13– ಲೋಕ ಅದಾಲತ್‌ನಂತಹ ಪರ್ಯಾಯ ಕಾನೂನು ವೇದಿಕೆಗಳು ನ್ಯಾಯ ಪಡೆಯುವ ಮಾರ್ಗವನ್ನು ಸುಲಭಗೊಳಿಸುತ್ತಿವೆ ಎಂದು ಕರ್ನಾಟಕ ಮಧ್ಯಸ್ಥಿಕೆ ಕೇಂದ್ರದ ನಿರ್ದೇಶಕರಾದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅಭಿಪ್ರಾಯಿಸಿದರು.

ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಪ್ರೊ.ಪಿ.ಎಂ.ಚಿಕ್ಕಬೋರಯ್ಯ ನೆನಪಿನಾರ್ಥ ಹಮ್ಮಿಕೊಂಡಿದ್ದ 'ಪರ್ಯಾಯ ವ್ಯಾಜ್ಯ ಪರಿಹಾರ: ನ್ಯಾಯವನ್ನು ಪಡೆಯುವ ಮಾರ್ಗ' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಭಾರತದ ಗ್ರಾಮಾಂತರ ಭಾಗಗಳಲ್ಲಿ ಹಿಂದೆ ವ್ಯಾಜ್ಯಗಳನ್ನು ಸ್ಥಳೀಯ ಮಟ್ಟದಲ್ಲೇ ತುರ್ತಾಗಿ ಪರಿಹರಿಸಿಕೊಳ್ಳಲು ಪಂಚಾಯ್ತಿ ವ್ಯವಸ್ಥೆ ಇತ್ತು. ಹಾಗೆಯೇ ನ್ಯಾಯ ಪಡೆಯುವ ಮಾರ್ಗಗಳು ಅತ್ಯಂತ ದುಬಾರಿ ಎನಿಸಿಕೊಂಡಿರುವ ಪ್ರಸ್ತುತ ಕಾಲಘಟ್ಟದಲ್ಲಿ ಲೋಕ ಅದಾಲತ್, ಮಧ್ಯಸ್ಥಿಕೆ ಮೊದಲಾದ ಪರ್ಯಾಯ ಕಾನೂನು ವೇದಿಕೆಗಳ ಮೂಲಕ ನ್ಯಾಯ ಪಡೆಯುವ ದಾರಿಗಳನ್ನು ಸುಲಭ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಭಾರತ ಸಂವಿಧಾನದ ಆರ್ಟಿಕಲ್ 39ಎ ಅನ್ನು ನಾವೆಲ್ಲ ಗಂಭೀರವಾಗಿ ನೋಡಬೇಕಿದೆ. ಇದು ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು ತತ್ವದ ಮೇಲೆ ನಿಂತಿದೆ. ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯ ಸಿಗುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆ ಮಾಡಬೇಕು. ವಿಶೇಷವಾಗಿ ಶೋಷಿತ ಸಮುದಾಯಗಳ ಜೊತೆಗೆ ಈ ದೇಶದ ಯಾವುದೇ ನಾಗರಿಕರಿಗೆ ನ್ಯಾಯವನ್ನು ಪಡೆಯುವ ಅವಕಾಶಗಳನ್ನು ನಿರಾಕರಿಸುವಂತಿಲ್ಲ. ಸೂಕ್ತ ಕಾನೂನು ರಚನೆ, ಯೋಜನೆಗಳು ಅಥವಾ ಇತರ ಯಾವುದೇ ರೀತಿಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಪ್ರತಿಯೊಬ್ಬ ಪ್ರಜೆಗೂ ಉಚಿತ ಕಾನೂನು ನೆರವನ್ನು ಒದಗಿಸಬೇಕು. ಈ ಮೂಲಕ ಬಡವರು ನ್ಯಾಯ ಪಡೆಯುವ ದಾರಿಗಳನ್ನು ಮುಕ್ತಗೊಳಿಸಿ ಯಾರೂ ವಂಚಿತರಾಗದಂತೆ ನೋಡಿಕೊಳ್ಳುವುದು ರಾಜ್ಯದ ಕರ್ತವ್ಯವಾಗಿದೆ ಎಂದರು.

ಭಾರತವನ್ನು ಇತಿಹಾಸ ಗಮನಿಸಿದರೆ ನಮ್ಮ ಹಳ್ಳಿಗಳು ನ್ಯಾಯ ನೀಡುವ ಮತ್ತು ನ್ಯಾಯ ಪಡೆಯುವ ಮಾರ್ಗಗಳನ್ನು ಎಂದಿಗೂ ಕಠಿಣಗೊಳಿಸಿರಲಿಲ್ಲ. ಪಂಚಾಯಿತಿಯ ಮುಖಂಡರು ಕೊಡುವ ತೀರ್ಪಿಗೆ ಎಲ್ಲರೂ ಬದ್ಧವಾಗಿರುತ್ತಿದ್ದರು. ನೈತಿಕ ಎಲ್ಲೆಗಳನ್ನು ಮೀರಿ ವರ್ತಿಸುವವರನ್ನು ಪಂಚಾಯಿತಿ ದಂಡಿಸುತ್ತಿತ್ತು. ಹಾಗೆಯೇ ನ್ಯಾಯ ನೀಡಿಕೆಯ ಕ್ರಮಗಳನ್ನು ಹೆಚ್ಚು ಸಂಕೀರ್ಣ ಮತ್ತು ಕಠಿಣಗೊಳಿಸದೆ ಪರ್ಯಾಯ ಕಾನೂನು ವೇದಿಕೆಗಳ ಮೂಲಕ ಎಲ್ಲರಿಗೂ ಸುಲಭವಾಗಿ ಕಾನೂನು ನೆರವು ನೀಡಿ ನಮ್ಮ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಿದೆ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ವಿದ್ಯಾವರ್ಧಕ ಕಾನೂನು ಕಾಲೇಜಿನ ಮೇಲ್ವಿಚಾರಣಾ ಸಮಿತಿ ಮುಖ್ಯಸ್ಥ ಕೆ.ಎಂ.ರಾಜಶೇಖರ್, ಪ್ರಾಂಶುಪಾಲ ಡಾ.ಪಿ.ದೀಪು, ಕಾರ್ಯಕ್ರಮದ ಸಂಯೋಜಕಿ ಎಂ.ಜೆ.ಇಂದುಮತಿ, ಸಹಾಯಕ ಪ್ರಾಧ್ಯಾಪಕಿ ಡಾ.ಶ್ರೀದೇವಿ ಕೃಷ್ಣಾ ಮತ್ತಿತರರು ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದ ನಂತರ 'ಪರ್ಯಾಯ ವ್ಯಾಜ್ಯ ಪರಿಹಾರ: ನ್ಯಾಯವನ್ನು ಪಡೆಯುವ ಮಾರ್ಗ' ಕುರಿತು ಎರಡು ತಾಂತ್ರಿಕ ಗೋಷ್ಠಿಗಳು ನಡೆದವು. ಸಂಪನ್ಮೂಲ ವ್ಯಕ್ತಿಗಳಾಗಿ ಜಿ.ಎಂ.ವಿಶ್ವವಿದ್ಯಾಲಯದ ಡೀನ್ ಪ್ರೊ.ಬಿ.ಎಸ್.ರೆಡ್ಡಿ, ಕೇರಳದ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ ಡಾ.ಅನೀಶ್ ವಿ.ಪಿಳ್ಳೈ, ಬೆಂಗಳೂರಿನ ವಿ.ವಿ.ಪುರಂ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಎಸ್.ಸಂಜೀವೇಗೌಡ ಹಾಗೂ ಭದ್ರಾವತಿಯ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಹೆಚ್.ಹನುಮಂತ ಅವರು ಭಾಗವಹಿಸಿದ್ದರು.

ಮಾನವನ ದುರಾಸೆಯಿಂದ ಪರಿಸರ ಹಾನಿ

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ವಿಷಾದ



ಮೈಸೂರಿನ ವಿದ್ಯಾಜ್ಯೋತಿ ಸಮಾಜ ಕಲ್ಯಾಣ ಕೇಂದ್ರ, ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಕಚೇರಿ ಹೆಚ್ಚುವರಿ ಆಯುಕ್ತ ಡಾ.ಪಿ.ಶಿವರಾಜು ಮತ್ತು ವಿದ್ಯಾವಿಕಾಸ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕವೀಶ್ ಗೌಡ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಜೂ.13(ಎಂಟಿವೈ)– ಮಾನವನ ದುರಾಸೆಯಿಂದ ಪರಿಸರದ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿದ್ದು, ಇದರಿಂದ ಪರಿಸರದಲ್ಲಿ ಅಸಮತೋಲನವುಂಟಾಗಿ ಜಾಗತಿಕ ತಾಪಮಾನ ಏರಿಕೆಯಾಗುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ವಿಷಾದಿಸಿದ್ದಾರೆ.

ಮೈಸೂರಿನ ವಿದ್ಯಾಜ್ಯೋತಿ ಸಮಾಜ ಕಲ್ಯಾಣ ಕೇಂದ್ರ, ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡನೆಟ್ಟು ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರ ನಾಶ ಹೆಚ್ಚಾಗುತ್ತಿದೆ. ಮಾನವ ಮಿತಿ ಮೀರಿದ ಪ್ರಮಾಣದಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುತ್ತಿದ್ದಾನೆ. ಇದರಿಂದ ಹವಾಮಾನ ವೈಪರಿತ್ಯ ಉಂಟಾಗಿ, ಜನರು ಸಂಕಷ್ಟಕ್ಕೆ ತುತ್ತಾಗುವಂತಾಗಿದೆ. ಕಾಲ ಕಾಲಕ್ಕೆ ಮಳೆಯಾಗುತ್ತಿಲ್ಲ. ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿವೆ. ಕುಡಿಯುವ ನೀರಿಗೆ ಕೊರತೆ ಹೆಚ್ಚುತ್ತಿದೆ. ಇವೆಲ್ಲಾ ಪರಿಸರ ನಾಶದ ಕೊಡುಗೆಗಳಾಗಿವೆ ಎಂದರು.

ಜಲಮೂಲಗಳು ಬತ್ತುತ್ತಿವೆ. ಕುಡಿಯುವ ನೀರು ಯೋಗ್ಯವಾಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆ–ಕಟ್ಟೆಗಳು ಬರಿದಾಗುತ್ತಿವೆ. ಗ್ರಾಮಗಳಲ್ಲೂ ಫಿಲ್ಟರ್ ನೀರು ಕುಡಿಯುವಂತಾಗಿದೆ. ನದಿ, ಕೆರೆಗಳಲ್ಲಿ ತ್ಯಾಜ್ಯ ಮತ್ತು ಕಲುಷಿತ ನೀರು ಎಗ್ಗಿಲ್ಲದೇ ಸೇರ್ಪಡೆಯಾಗುತ್ತಿದೆ. ಮನುಷ್ಯರು ಮಾತ್ರವಲ್ಲದೇ ವನ್ಯಜೀವಿಗಳು ನಾನಾ ಕಾಯಿಲೆಗೆ ತುತ್ತಾಗುತ್ತಿವೆ ಎಂದು ವಿಷಾದಿಸಿದರು.

ಮಹಿಳೆಯರು ಪರಿಸರ ಉಳಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಭವಿಷ್ಯಕ್ಕಾಗಿ ಜಾಗೃತರಾಗಿ ಪರಿಸರ ಹಾಳು ಮಾಡದಂತೆ ಹಿರಿಯರಲ್ಲಿ ಎಚ್ಚರಿಕೆ ಮೂಡಿಸಬೇಕು. ಸಮೂಹವೇ ಒಂದಾಗಿ ಪರಿಸರ ಸಂರಕ್ಷಣೆಗೆ ಮುಂದಾಗದಿದ್ದರೆ ಅಪಾರ ಹಾನಿಗೆ ಒಳಗಾಗಬೇಕಾಗುತ್ತದೆ. ಪ್ರತಿಯೊಬ್ಬರೂ ಸಸಿ ನೆಟ್ಟು ಪರಿಸರ ಸಮತೋಲನಕ್ಕೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ವಿದ್ಯಾವಿಕಾಸ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕವೀಶ್ ಗೌಡ ಮಾತನಾಡಿ, ಎಲ್ಲರ ಬಳಿ ಎರಡೆರಡು ಮೊಬೈಲ್‌ಗಳಿವೆ. ವಾಹನಗಳು, ಫ್ರಿಡ್ಜ್ ಸೇರಿದಂತೆ ಅತ್ಯಾಧುನಿಕ ಯಂತ್ರಗಳ ದಾಸರಾಗಿದ್ದಾರೆ. ತಾಂತ್ರಿಕತೆಯ ಅಪರಿಮಿತವಾದ ಸಾಧ್ಯತೆಯನ್ನು ಎಗ್ಗಿಲ್ಲದೇ ಬಳಸಿಕೊಂಡು ನೈಸರ್ಗಿಕ ಸಂಪನ್ಮೂಲವನ್ನು ಭವಿಷ್ಯದ ಪೀಳಿಗೆಗೆ ಉಳಿಸಬೇಕೆಂಬ ವಿವೇಕ ತೋರದೇ ಪರಿಸರ ಹಾಳು ಮಾಡುತ್ತಿದ್ದೇವೆ ಎಂದರು.

ವಿದ್ಯಾಜ್ಯೋತಿ ಸಮಾಜ ಕಲ್ಯಾಣ ಕೇಂದ್ರದಲ್ಲಿ ಮಹಿಳೆಯರಿಗೆ ವಿವಿಧ ತರಬೇತಿ,ಶಿಕ್ಷಣ ಕೊಡಲಾಗುತ್ತಿದೆ. ಇಲ್ಲಿ ತಯಾರಾಗುವ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲಾಗುವುದು. ಕೇಂದ್ರದ ಎಲ್ಲ ಚಟುವಟಿಕೆಗೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಪ್ರಾದೇಶಿಕ ಕಚೇರಿ ಹೆಚ್ಚುವರಿ ಆಯುಕ್ತ ಡಾ.ಪಿ.ಶಿವರಾಜು ಮತ್ತು ಕವೀಶ್ ಗೌಡ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಂತಿ, ಸಿಸ್ಟರ್ ತೆರೇಸಾ, ಸಿಸ್ಟರ್ ಗ್ರೇಟಾ, ಖಜಾನೆ ಅಧಿಕಾರಿ ನಾಗರಾಜು, ಹರೀಶ್ ಬಾಬು, ಕರಾಟೆ ಶಿವು, ಸುರೇಶ್ ಪಾಲ್ಗೊಂಡಿದ್ದರು.

ಮಗನಿಂದಲೇ ಮನೆಗೆ ಕನ್ನ ; ತಂದೆಯಿಂದ ಪೋಲೀಸರಿಗೆ ದೂರು

ಸ್ನೇಹಿತರ ಕುಮ್ಮಕ್ಕಿನಿಂದ ಮನೆಯಿಂದ 4.30 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

ಮೈಸೂರು,ಜೂ.13(ಪಿಎಂ)– ಯುವಕನೊಬ್ಬ ಸ್ನೇಹಿತರ ಕುಮ್ಮಕ್ಕಿನಿಂದ ತನ್ನ ಮನೆಯಲ್ಲೇ ಕಳ್ಳತನ ಮಾಡಿರುವ ಆರೋಪದಡಿ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕಿನ ಕಡಕೊಳ ನಿವಾಸಿ ಸಿ.ಚಂದು (23) ಗ್ರಾಮದ ತನ್ನ ಮನೆಯಲ್ಲೇ ಕಳ್ಳತನ ಮಾಡಿದ್ದಾನೆಂದು ಈತನ ತಂದೆ ಚಿನ್ನಂಕ ನೀಡಿದ ದೂರಿನನ್ವಯ ಈತ ಹಾಗೂ ಈತನ ಸ್ನೇಹಿತರ ವಿರುದ್ಧ ಪ್ರಕರಣ ದಾಖಲಾಗಿದೆ. ಚಂದು ಸ್ನೇಹಿತರಾದ ಕಡಕೊಳದ ಕೆಂಪರಾಜು, ಮೈಸೂರಿನ ಮನೋಜ್, ರಾಹುಲ್ ಎಂಬುವವರ ಕುಮ್ಮಕ್ಕಿನಿಂದ ಕಳ್ಳತನ ಮಾಡಿದ್ದಾನೆಂದು ದೂರಿನಲ್ಲಿ ಆರೋಪಿಸಲಾಗಿದೆ. ಚಂದು ಆತನ ಸ್ನೇಹಿತರ ಜೊತೆ ಸೇರಿ ಕೆಟ್ಟ ಚಟಗಳನ್ನು ಕಲಿತಿದ್ದು, ಆಗಾಗ್ಗೆ ಮನೆಯಲ್ಲಿ ಹಣವನ್ನು ಕದಿಯುತ್ತಿದ್ದ. ಕೇಳಿದರೆ ನಮ್ಮ ಮೇಲೆಯೇ ಗಲಾಟೆ ಮಾಡುತ್ತಿದ್ದ. ಮೇ 3ರಂದು ಮನೆಯ ಬೀರುವಿನಲ್ಲಿಟ್ಟಿದ್ದ 25 ಗ್ರಾಂ ಚಿನ್ನ ಸರ, 6 ಗ್ರಾಂ ಚಿನ್ನದ ಉಂಗುರವನ್ನು ಸ್ನೇಹಿತರ ಕುಮ್ಮಕ್ಕಿನಿಂದ ಕಳ್ಳತನ ಮಾಡಿದ್ದಾನೆ ಎಂದು ಚಿನ್ನಂಕ ದೂರಿನಲ್ಲಿ ಆರೋಪಿಸಿದ್ದಾರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ ನಾಗವೀಣಾ ಕೋಂ ನಾಗೇಶ್ ಕುಮಾರ್. ಕೆ.ಸಿ. ರವರು ಷೆಡ್ಯೂಲ್‌ನಲ್ಲಿ ನಮೂದಾಗಿರುವ ಸ್ವತ್ತನ್ನು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಭಿ ಹೋಬಳಿ, ವಡ್ಡಗೆರೆ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಪರಶಿವಪ್ಪರವರ ಧರ್ಮಪತ್ನಿಯಾದ ಸುಮಾರು 43 ವರ್ಷ ವಯಸ್ಸಿನ ಶ್ರೀಮತಿ ಶಾಂತಮ್ಮ ರವರಿಂದ ನಮ್ಮ ಕಕ್ಷಿದಾರರು ಶುದ್ಧ ಕ್ರಯಕ್ಕೆ ಖರೀದಿಸಲು ಒಪ್ಪಿದ್ದು, ಸದರಿ ಸ್ವತ್ತಿನ ಖರೀದಿ ಸಂಬಂಧವಾಗಿ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಇನ್ನಿತರ ಯಾರಾದರೂ ವಾರಸುದಾರರು, ಹಕ್ಕು, ಹಿತಾಸಕ್ತಿ ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಅಗತ್ಯ ದಾಖಲಾತಿಗಳೊಂದಿಗೆ ಈ ನೋಟೀಸ್ ನೀಡಿದ 7 ದಿನಗಳ ಒಳಗಾಗಿ ಖುದ್ದಾಗಿಯಾಗಲೀ ಅಥವಾ ಲಿಖಿತ ತಕರಾರಿನೊಂದಿಗೆ ಮೇಲ್ಕಂಡ ವಕೀಲರ ಕಛೇರಿಗೆ ಭೇಟಿಯಾಗತಕ್ಕದ್ದು. ತದನಂತರ ಯಾವುದೇ ತಕರಾರು ಬಾರದೆ ಇದ್ದಲ್ಲಿ ನಮ್ಮ ಕಕ್ಷಿದಾರರು ಮೇಲ್ಕಂಡವರಿಂದ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸುತ್ತಾರೆಂದು ಈ ಮೂಲಕ ಸಾರ್ವಜನಿಕ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಭಿ ಹೋಬಳಿ, ಕರಕಲ ಮಾದಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 91/1 ರಲ್ಲಿ ಬರುವ 1 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಕೆ.ಎಂ. ಸೋಮೇಶ್ ರವರ ಬಾಬ್ತು ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ಕಾರಿ ಖರಾಬು, ದಕ್ಷಿಣಕ್ಕೆ : ವಿಜಯ್ ಕುಮಾರ್‌ರವರ ಜಮೀನು

ಸಹಿ/– ಕೆ.ಪಿ.ಕೃಷ್ಣ, ವಕೀಲರು,
ಬಿ.ಎ. ಎಲ್.ಎಲ್.ಬಿ., Advocate,
KAR/2416/2003, #2852, Upstairs
2nd Main road, 4th Cross,
Jayanagar, Mysuru-570014,
Mob : 9900376674

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ, #1209 ಟಿ.ಕೆ.ಲೇಔಟ್, 4ನೇ ಹಂತ, ಕುವೆಂಪುನಗರ, ಮೈಸೂರು, ಮನೆ ನಂಬರ್ 1209ರಲ್ಲಿ ವಾಸವಾಗಿರುವ ಶ್ರೀ ಗೋಪಿನಾಥ ರವರ ಮಗನಾದ ಶ್ರೀ ಸಿ.ಜಿ. ವೆಂಕಟೇಶ್ ಸುಮಾರು 60 ವರ್ಷ ವಯಸ್ಸುಳ್ಳ ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಯಡಹಳ್ಳಿ, ಮನೆ ನಂಬರ್ 147 ರಲ್ಲಿ ವಾಸವಾಗಿರುವ ಶ್ರೀ ಬಸವಣ್ಣ ರವರ ಮಗನಾದ ಶ್ರೀ ಮಂಜುನಾಥ ಬಿ ಅವರಿಂದ ಕ್ರಯಕ್ಕೆ ಶ್ರೀ ಗೋಪಿನಾಥ ರವರ ಮಗನಾದ ಶ್ರೀ ಸಿ ಜಿ ವೆಂಕಟೇಶ್ ರವರು ಪಡೆದುಕೊಳ್ಳುವವರಿದ್ದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರು ಯಾವುದೇ ರೀತಿಯ ಹಕ್ಕು ಆಸಕ್ತಿ ಹಾಗೂ ಹಿತಾಸಕ್ತಿ ಇದ್ದಲ್ಲಿ ಅಥವಾ ಯಾರಿಗಾದರೂ ಯಾವುದೇ ರೀತಿಯ ತಕರಾರರು ಇದ್ದಲ್ಲಿ ಸದರಿ ವ್ಯಕ್ತಿಗಳು ಸೂಕ್ತ ದಾಖಲಾತಿಗಳೊಡನೆ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನಂದಿಂದ 7 ದಿನಗಳೊಳಗೆ ತಮ್ಮ ತಕರಾರನ್ನು ಖುದ್ದಾಗಿಯಾಗಲಿ ಅಥವಾ ಲಿಖಿತ ರೂಪದಲ್ಲಾಗಲಿ ನಮ್ಮ ಕಕ್ಷಿದಾರರ ವಿಳಾಸಕ್ಕಾಗಲಿ ಅಥವಾ ನಮ್ಮ ಕಛೇರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ 7 ದಿನಗಳೊಳಗೆ ಯಾವುದೇ ತಕರಾರು ಬಾರದೇ ಇದ್ದಲ್ಲಿ ನಮ್ಮ ಕ್ಷಕಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯ ಪತ್ರವನ್ನು ಬರೆಸಿ ನೋಂದಾವಣೆ ಮಾಡಿಕೊಳ್ಳಲು ಸಿದ್ಧರಿರುತ್ತಾರೆ, ಆ ನಂತರ ಬಂದ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧ ಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಜಯಪುರ ಗ್ರಾಮ, ಸರ್ವೆ ನಂಬರ್ ಹಳೆಯ ಸರ್ವೆ ನಂಬರ್ 6/3, ಹೊಸ ಸರ್ವೆ ನಂಬರ್ 6/7 ಎಕರೆ ಇಲ್ಲಾ, 0.29 ಗುಂಟೆ ಅಳತೆಯ ಪೈಕಿ 0.16 ಗುಂಟೆ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಯಡಹಳ್ಳಿ ಶ್ರೀಕಂಠಪ್ಪ ಹಾಗೂ ಇತರರ ಆಸ್ತಿ, ಪಶ್ಚಿಮಕ್ಕೆ : ಚಿಕ್ಕ ಮಹದೇವಮ್ಮ ಮತ್ತು ದೊಡ್ಡ ರಾಜಪ್ಪರವರ ಸ್ವತ್ತು, ಉತ್ತರಕ್ಕೆ : ಶಂಭಣ್ಣ ಬಿನ್ ಶ್ರೀ ಚಿಕ್ಕಪುಟ್ಟಸ್ವಾಮಪ್ಪ ರವರ ಸ್ವತ್ತು, ದಕ್ಷಿಣಕ್ಕೆ : ಸರ್ಕಾರಿ ರಸ್ತೆ.

ಸಹಿ/– ಭರತ್ ರಾಜು ಕೆ ಎಸ್,
ವಕೀಲರು, ಬಿ.ಎ., ಎಲ್.ಎಲ್.ಬಿ.,
ಸ್ಪಂದನ ಲಾ ಅಸೋಸಿಯೇಟ್ಸ್,
ನಂ. 178, 2ನೇ ಮಹಡಿ, 11 ನೇ ಮುಖ್ಯರಸ್ತೆ,
5ನೇ ಕ್ರಾಸ್, ಜವರೇಗೌಡ ಪಾರ್ಕ್ ಹತ್ತಿರ,
ಸರಸ್ವತಿಪುರಂ, ಮೈಸೂರು–570009
ಮೊಬೈಲ್ : 7353434822

47 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು